ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ


ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 22

ಜೂನ್ 1, 2008

ರೂ. 5/-

ಬಿಜೆಪಿ ಅಧಿಕಾರಕ್ಕೆ ಹತ್ತಿರ ಬಹುಮತದಿಂದ ದೂರ









ಅಕ್ರಮ ಮದ್ಯದ ದಂಧೆಗೆ ಬಡವರ ಬಲಿ

ಭಾರತ - ಪಾಕಿಸ್ತಾನ ಸಂವಾದ ಆಶಾದಾಯಕ ಬೆಳವಣಿಗೆ



ಅಂದಚೆಂದವಿಲ್ಲದ 'ಅರಮನೆ'

ಪಶ್ಚಿಮ ಬಂಗಾಳ ಪಂಚಾಯ್ತಿ ಚುನಾವಣೆ :

ಅಡೆತಡೆ ನಡುವೆ ಎಡರಂಗಕ್ಕೆ ಜನ ಬೆಂಬಲ



ಇದ್ದದ್ದು ಇದ್ದಾಂಗ....

ಕಪ್ಪು ಹಣ

ದೇಶದ ಆರ್ಥಿಕ ಪ್ರಗತಿಯಲ್ಲಿ ಶೇ.47ರಷ್ಟು ಕಪ್ಪು ಹಣದ ಪಾತ್ರ ಇದೆ. ಇದು ದೇಶದ ಆರ್ಥಿಕತೆ ಎಷ್ಟು ದುರ್ಬಲವಾಗಿದೆ ಎಂಬುದನ್ನು ತೋರಿಸುತ್ತದೆ.

– ಎಂ.ಎನ್.ವೆಂಕಟಾಚಲಯ್ಯ
ಸುಪ್ರಿಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ

★

ಜಮ್ಮು ಮತ್ತು ಕಾಶ್ಮೀರದಲ್ಲಿ ಭದ್ರತಾ ಪಡೆಯ ಸಂಖ್ಯೆಯನ್ನು ಕಡಿಮೆ ಮಾಡಬೇಕು ಹಾಗೂ ಗಡಿಯಲ್ಲಿ ಆರ್ಥಿಕ ವಲಯವನ್ನು ನಿರ್ಮಾಣ ಮಾಡಬೇಕು. ಥಾರ್ ಮರುಭೂಮಿಯಲ್ಲಿಯ ಕಲ್ಲಿದ್ದಲನ್ನು ತೆಗೆದು ವಿದ್ಯುತ್ ಉತ್ಪಾದಿಸಿ ಭಾರತಕ್ಕೆ ಮಾರಾಟ ಮಾಡಬೇಕು. ನೆರೆಯ ರಾಷ್ಟ್ರಗಳಿಂದ ನೈಸರ್ಗಿಕ ಅನಿಲವನ್ನು ಆಮದು ಮಾಡಿಕೊಂಡು ಭಾರತಕ್ಕೆ ರವಾನಿಸಬೇಕು"

– ಜರ್ದಾರಿ, ಪಾಕಿಸ್ತಾನ ಪ್ರಧಾನಮಂತ್ರಿ

★

ಕಾಂಗ್ರೆಸ್ ವಿಶ್ವಾಸ ಕಳೆದುಕೊಂಡದ್ದರ ದ್ಯೋತಕ

ಕೇಂದ್ರ ಸರ್ಕಾರದ ನೀತಿಗಳು ಅದರಲ್ಲೂ ಮುಖ್ಯವಾಗಿ ಬೆಲೆ ಏರಿಕೆ ಮತ್ತು ಕೃಷಿ ಕ್ಷೇತ್ರದಲ್ಲಿನ ಬಿಕ್ಕಟ್ಟಿಗೆ ಜನರು ಪ್ರಬಲ ವಿರೋಧ ಸೂಚಿಸಿದ್ದು, ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿ ತಮ್ಮ ಅಸಮಾಧಾನ ತೋರಿಸಿದ್ದಾರೆ. ಬಿಜೆಪಿಯು ಜಾತ್ಯತೀತ ಪಕ್ಷಗಳನ್ನು ದುರ್ಬಲಗೊಳಿಸುವಲ್ಲಿ ಸಫಲವಾಗಿದೆ. ಈ ಹಿಂದಿನ ಸರ್ಕಾರದಲ್ಲಿ ಜೆಡಿಎಸ್ ಜತೆಗೆ ಮಾಡಿಕೊಂಡ ಮೈತ್ರಿಯ ಲಾಭವನ್ನು ಬಿಜೆಪಿ ಇದೀಗ ಪಡೆದುಕೊಂಡಿದೆ. ತನ್ನ ಸ್ವಂತ ಬಲದಿಂದ ಸರ್ಕಾರ ರಚಿಸಲು ಮುಂದಾಗಿರುವ ಬಿಜೆಪಿ ಪಕ್ಷದ ಬೆಳವಣಿಗೆಯು ಅದರ ಜತೆಗೆ ಮೈತ್ರಿ ಮಾಡಿಕೊಳ್ಳಲು ಮುಂದಾಗಿದ್ದ ಪಕ್ಷಗಳಿಗೆ ಒದಗಿದ ಎಚ್ಚರಿಕೆಯ ಗಂಟೆ

– ಪ್ರಕಾಶ್ ಕಾರಟ್
ಸಿಪಿಐ(ಎಂ) ಪಕ್ಷದ ಪ್ರಧಾನ ಕಾರ್ಯದರ್ಶಿ


★

ಚುಚ್ಚುಮದ್ದು

ನಿರೀಕ್ಷೆ

ಪ್ರಧಾನಿ ಪಟ್ಟದಲ್ಲಿ ಅಡ್ವಾಣಿ : ರಾಜನಾಥ್ ನಿರೀಕ್ಷೆ
ಹೌದು ಇದೇ ಅಲ್ಲವೆ ಈಗ ದೇಶದ ದೊಡ್ಡ ಕೊರತೆ?

ಬಾಗೆಪಲ್ಲಿ ಫಲಿತಾಂಶದ ಗೊಂದಲ



ಬಾಗೇಪಲ್ಲಿ ಕ್ಷೇತ್ರದ ಸಿಪಿಐ(ಎಂ) ಅಭ್ಯರ್ಥಿ ಕಾಂ.ಜಿ.ವಿ.ಶ್ರೀರಾಮರೆಡ್ಡಿಯವರು ಚುನಾಯಿತರಾಗಿದ್ದಾರೆಂದು ಮಾಧ್ಯಮಗಳಲ್ಲೆಲ್ಲಾ ವರದಿಯಾದ ನಂತರ ಕಾಂಗ್ರೆಸ್ ಅಭ್ಯರ್ಥಿ ಎನ್.ಸಂಪಂಗಿ ಗೆದ್ದಿದ್ದಾರೆಂದು ವರದಿಯಾಗಿರುವುದರಿಂದ ಹಲವು ರೀತಿಯ ಗೊಂದಲ ಉಂಟಾಗಿದೆ.

ಜಿ.ವಿ.ಶ್ರೀರಾಮರೆಡ್ಡಿ ಸತತವಾಗಿ ಕೊನೆಕೊನೆಯ ಸುತ್ತುಗಳವರೆಗೂ ಮುನ್ನಡೆಯಲ್ಲಿ ಇದ್ದರು. ಮತ ಎಣಿಕೆಯು ಕೊನೆ ಹಂತಕ್ಕೆ ಬಂದಿತು. ಮುಂದೆಯೂ ಅಂತಹದ್ದೇ ಮುನ್ನಡೆ ನಿರೀಕ್ಷಿಸಿದ ಮಾಧ್ಯಮದ ಮಂದಿ ತಾವೇ ಮೊದಲು ಸುದ್ದಿ ಕೊಡುವವರಾಗಬೇಕೆಂಬ ದಾವಂತದಲ್ಲಿ ಶ್ರೀರಾಮರೆಡ್ಡಿಯವರು ಗೆದ್ದಿದ್ದಾರೆಂದು ಘೋಷಿಸಿದರು. ಆದರೆ ಕೊನೆಯ ಸುತ್ತಿನ ಮತ ಎಣಿಕೆಯಲ್ಲಿ ನಿರೀಕ್ಷೆಗೆ ವಿರುದ್ಧವಾಗಿ ಸಿಪಿಐ(ಎಂ)ನ ಮತಗಳಿಕೆಯಲ್ಲಿ ವ್ಯತ್ಯಾಸವಾಗಿತ್ತು. ಇದು ಗೊಂದಲಕ್ಕೆ ಕಾರಣವಾಯಿತು.

ಮತಾಂತರ

ಎಲ್ಲರಿಗೆ ಉದ್ಯೋಗ ಶಿಕ್ಷಣವ ನೀಡಿ
ಮತಾಂತರ ತಾನಾಗಿ ನಿಲ್ಲುವುದು ನೋಡಿ
ನೀವುಂಡು ತೇಗುತ್ತಾ ದಲಿತ ಜನಗಳಿಗೆ
ಮತಾಂತರ ತಡೆವುದಕೆ ಹಕ್ಕುಂಟೆ ನಿಮಗೆ?

ಭಾ.ಜ.ಪ. ನೀತಿ

ಬಡಜನರ ಉಪವಾಸ ರೈತ ಜನ ಸಾವು
ಭಾ.ಜ.ಪ. ಜನಗಳಿಗೆ ತರದಯ್ಯ ನೋವು
ಮಠಗುಡಿಯ ಸಂಪತ್ತು ಹೆಚ್ಚಿದರೆ ಸಾಕು
ಅದಕಾಗಿ ಈ ಜನಕೆ ಅಧಿಕಾರಬೇಕು.

ವಿಡಂಬಾರಿ

ಭಾರತದ ಇಲ್ಲವಾದ ಲಸಿಕಾ ಕಾರ್ಯಕ್ರಮ

ಔಷಧಿಗಳ ಬಗ್ಗೆ ಆಗಾಗ ಓದುತ್ತಿರುತ್ತೇವೆ. ಆದರೆ ಲಸಿಕೆಗಳ ಬಗ್ಗೆ? ರೋಗಪ್ರತಿಭಂಧನೆಗೆ ಲಸಿಕೆಗಳು ಬಹು ಪ್ರಮುಖ ಪಾತ್ರ ವಹಿಸುತ್ತದೆ. ಭಾರತದಲ್ಲಿ 12ರಿಂದ 23 ತಿಂಗಳ ಮಕ್ಕಳಲ್ಲಿ ಲಸಿಕಾ ಉಪಯೋಗ ಪಟ್ಟಣಗಳಲ್ಲಿ ಶೇ. 60, ಗ್ರಾಮೀಣ ಪ್ರದೇಶಗಳಲ್ಲಿ ಕೇವಲ ಶೇ. 52ಎಂದು ರಾಷ್ಟ್ರಿಯ ಕೌಟುಂಬಿಕ ಸಮೀಕ್ಷೆ ತಿಳಿಸುತ್ತದೆ. ಇತ್ತೀಚೆಗೆ ಪೋಲಿಯೊ ರೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಲಸಿಕೆಗಳ ಕೆಲವು ವಿಷಯಗಳನ್ನು ತಿಳಿಯಲು ಮುಂದಿನ ನಾಲ್ಕು ಸಂಚಿಕೆಗಳನ್ನು ಓದಿ.

ಲಸಿಕೆಗಳು ಪ್ರತಿವರ್ಷ ಸುಮಾರು ಮೂರು ದಶಲಕ್ಷ ಮಕ್ಕಳ ಜೀವಗಳನ್ನು ಉಳಿಸುತ್ತಿವೆ. ಈ ಕಾರ್ಯಕ್ರಮವನ್ನು ಇನ್ನೂ ಜವಾಬ್ದಾರಿಯಾಗಿ ಅನುಸರಿಸಿದಲ್ಲಿ, ಪ್ರತಿವರ್ಷ 5 ದಶಲಕ್ಷ ಮಕ್ಕಳ ಜೀವಗಳನ್ನು ಉಳಿಸಲು ಸಾಧ್ಯವಾಗುತ್ತದೆ. ಲಸಿಕೆ ತೆತ್ತ ಬೆಲೆಗೆ ಪರಿಣಾಮಕಾರಿ ಪ್ರತಿಫಲ ದೊರಕುವ ಸಾಧನ. ಜನಾರೋಗ್ಯ ಸಾಧನೆಯಲ್ಲಿ ಕುಡಿಯುವ ನೀರು, ಇತರ ಅನೇಕ ಅಗತ್ಯತೆಗಳಿಗಿಂತ ಕೂಡಲೇ ಹೆಚ್ಚು ಪ್ರತಿಫಲ ನೀಡುವ ಸಾಧನವೆಂದು ಪರಿಗಣಿಸಲಾಗಿದೆ.

ಭಾರತದಲ್ಲಿ ಈ.ಪಿ.ಐ. (programme of immunization) ಹಾಗೂ ಯುಐಪಿ (universal prorogramme of immunisation) ಜಾರಿಯಲ್ಲಿದ್ದು ರಾಷ್ಟ್ರದ ಪ್ರಮುಖ ಲಸಿಕಾ ಕಾರ್ಯಕ್ರಮಗಳಾಗಿವೆ. ರಾಷ್ಟ್ರೀಯ ಕೌಟುಂಬಿಕ ಆರೋಗ್ಯದ ಸಮೀಕ್ಷೆ ಪ್ರಕಾರ

ಭಾರತದಲ್ಲಿ ಲಸಿಕಾ ಕಾರ್ಯಕ್ರಮ ಏಕೆ ಯಶಸ್ಸು ಕಾಣಲಿಲ್ಲ?

1. ಸಮಂಜಸ ಜನಪರ ಲಸಿಕಾ ನೀತಿ ಇಲ್ಲ, ಪ್ರಾಥಮಿಕ ಲಸಿಕೆಗಳ ಅಳವಡಿಕೆ ಕಾರ್ಯಕ್ರಮ ಯಶಸ್ವಿಯಾಗಿಲ್ಲ.

2. ರೋಗಗಳ ಪರಿಣಾಮಕಾರಿ ಕಣ್ಗಾವಲು ಇಲ್ಲದಿರುವುದು.

3. ಭಾರತದಲ್ಲಿ ಕಂಡುಬರುವ ಡೆಂಗೂ, ಮಲೇರಿಯಾ; ಬೇಧಿ ರೋಗಕ್ಕೆ ಲಸಿಕೆಗಳಿಲ್ಲದಿರುವುದು.

ಆ ಲಸಿಕೆಗ್ಗಳನ್ನು ಕಂಡುಹಿಡಿಯಲು ಸಂಶೋಧನೆಗಳೇ ಇಲ್ಲದಿರುವುದು.

4. ದುಬಾರಿ ಲಸಿಕೆಗಳಾದ ಚಿಕನ್‌ಪಾಕ್ಸ್, ಮುಂತಾದವುಗಳು ಲಭ್ಯವಿರುವುದು, ಈ ಲಸಿಕೆಗಳ ಉಪಯುಕ್ತತೆಯನ್ನು ಭಾರತದಲ್ಲಿ ಸಿದ್ದಪಡಿಸದೇ ಇರುವುದು.



ಡಾ. ಪ್ರಕಾಶ್ ಸಿ.ರಾವ್
ಅಧ್ಯಕ್ಷರು,
ಜನಾರೋಗ್ಯ ಆಂದೋಲನ

5. ರಾಷ್ಟ್ರೀಯ ಲಸಿಕಾ ನೀತಿಯನ್ನು ಜಾರಿ ಮಾಡದೇ ಇರುವುದು, ಅಂತರಾಷ್ಟ್ರೀಯ ಸಂಸ್ಥೆಗಳು ಹೊಸ ಹೊಸ ಲಸಿಕೆಗಳನ್ನು ಭಾರತಕ್ಕೆ ತರಲು ಸಹಾಯ ಮಾಡುತ್ತಿವೆ. ಭಾರತ ಸರಕಾರವೇ ತೀರ್ಮಾನ ಮಾಡಿ ಹೊಸ ಲಸಿಕೆಗಳನ್ನು ಬಿಡುಗಡೆ ಮಾಡುವ ಪ್ರಕ್ರಿಯೆ ಜಾರಿಗೆ ಬರದಿದ್ದರೆ ಹಿಂಬಾಗಿಲಿನಿಂದ ಲಸಿಕೆಗಳು ತಮ್ಮ ಮಾರುಕಟ್ಟೆಗೆ ನುಗ್ಗಲಿವೆ. ಈಗ ಹೀಗೆಯೇ ಆಗಿರುವುದನ್ನು ನೋಡಬಹುದಾಗಿದೆ. ಭಾರತ ಸರಕಾರ, ಭಾರತೀಯ ವೈದ್ಯಕೀಯ ಸಂಶೋಧನೆ ನಿಗಮ, ರಾಷ್ಟ್ರೀಯ ವೈರಾಲಜಿ ಸಂಸ್ಥೆ ಹಾಗೂ ರಾಷ್ಟ್ರೀಯ ಮಟ್ಟದ ಲಸಿಕೆ ತಯಾರಿಸುವ ಸಂಸ್ಥೆಗಳು ಹಾಗೂ ಇನ್ನೂ ಅನೇಕ ಸಂಶೋಧನಾ ಸಂಸ್ಥೆಗಳು ಸೇರಿ ಲಸಿಕೆಗಳ ಬಗ್ಗೆ ಕೂಡಲೇ ತೀರ್ಮಾನ ಮಾಡುವುದನ್ನು ಅಪೇಕ್ಷಿಸಬಹುದಾಗಿದೆ.

6. ಸ್ಥಳೀಯವಾಗಿ ಲಸಿಕೆಗಳನ್ನು ತಯಾರಿಸುವುದು ಸ್ವಾವಲಂಬನೆಯ ಹಾದಿಯಲ್ಲಿ ಹೋಗಲು ಈಗಲೂ ಸಂಶೋಧನೆಗಳನ್ನು ಮಾಡುತ್ತ ನಮ್ಮಲ್ಲಿರುವ ಹಲವಾರು ಸಂಸ್ಥೆಗಳನ್ನು ಈ ದಿಕ್ಕಿನಲ್ಲಿ ಮುಂದುವರೆಯಲು ಪ್ರೋತ್ಸಾಹಿಸಿ ಲಸಿಕೆಗಳನ್ನು ತಯಾರಿಸಲು ಪ್ರಯತ್ನಿಸುವುದು. ಈಗಾಗಲೇ ಭಾರತದಲ್ಲಿ ಸ್ಥಾಪಿಸಿರುವ ಲಸಿಕಾ ತಯಾರಿಕಾ ಘಟಕಗಳು ಈ ಕೆಲಸವನ್ನು ಕೈಗೆತ್ತಿಕೊಳ್ಳುವುದು ಸಾಧ್ಯವಿದೆ. ಆದರೆ ಅದು ಸಾಧ್ಯವಾಗಿಲ್ಲ. ಕಾರಣ ರಾಜಕೀಯ ಒಲವು ಇಚ್ಚಾಶಕ್ತಿ ಇಲ್ಲದಿರುವುದು ಹಾಗೂ ಬಹುರಾಷ್ಟ್ರೀಯ ಕಂಪನಿಗಳ ಒತ್ತಡದಿಂದಾಗಿ ಸ್ಥಳೀಯವಾಗಿ ಲಸಿಕೆ ಸಂಶೋಧನೆ ಹಾಗೂ ತಯಾರಿಕೆಗೆ ತೆರಿಗೆ ರಿಯಾಯಿತಿ, ಅಗತ್ಯ ಕಚ್ಚಾವಸ್ತುಗಳನ್ನು ಒದಗಿಸುವುದು, ಹಣಕಾಸಿನ ಸಾಲ ಒದಗಿಸುವುದು. ತಯಾರಾದ ಲಸಿಕೆಯನ್ನು ಕೂಡಲೇ ಅಗತ್ಯವಿದ್ದಲ್ಲಿ ತೆಗೆದುಕೊಂಡು ಹೋಗುವ ಸಂಪರ್ಕ ಜಾಲ, ಲಸಿಕೆಯಿಂದ ಅಡ್ಡಪರಿಣಾಮಗಳ ದಾಖಲೆಗೆ ಸರಿಯಾದ ವ್ಯವಸ್ಥೆ ಮುಂತಾಧುದಕ್ಕೆ ಗಮನ ಹರಿಸಬೇಕು.

ಲಸಿಕೆಗಳು ರೋಗ ತಡೆಗಟ್ಟಲು ಆರೋಗ್ಯ ವೃದ್ದಿಸಲು ಬಳಸುವು ಸಾಧನಗಳು. ಜನರು ಔಷಧಿಗಳನ್ನು ಉಪಯೋಗಿಸುವುದನ್ನು ತಕ್ಕಮಟ್ಟಿಗೆ ಬಲ್ಲರು. ಆದರೆ ಲಸಿಕೆಗಳ ಬಗ್ಗೆ ಮಾಹಿತಿ ಇಲ್ಲದ್ದರಿಂದ, ತಿಳುವಳಿಕೆ ಕಡಿಮೆ. ಸರಕಾರ ಲಸಿಕೆಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡಬೇಕು. ಲಸಿಕೆಗಳ ಬಗ್ಗೆ ಮಾಹಿತಿಯನ್ನು ಶಾಲಾ ಕಾಲೇಜುಗಳಲ್ಲಿ ನೀಡುವುದು ಮುಖ್ಯ.

ಲಸಿಕಾ ನೀತಿ ಜಾರಿಯಾಗಬೇಕು. ಎಲ್ಲ ಜನರಿಗೂ ಲಸಿಕೆ ಕಡಿಮೆ ಬೆಲೆಯಲ್ಲಿ ಲಭ್ಯವಾಗಬೇಕು. ಅನಗತ್ಯ ಲಸಿಕೆಗಳನ್ನು ಹೆಚ್ಚು ಹಣಕೊಟ್ಟು ಕೊಂಡುಕೊಳ್ಳುವ ನೀತಿಯನ್ನು ಕಡೆಗಣಿಸಬೇಕು. ಲಸಿಕೆ ಉಪಯೋಗದಲ್ಲಿ ಉಂಟಾಗಿರುವ ಗೊಂದಲಗಳನ್ನು ಸರಿಪಡಿಸಬೇಕು. ಅಲ್ಲಿಯವರೆಗೆ ಭಾರತದಲ್ಲಿ ಲಸಿಕಾ ಕಾರ್ಯಕ್ರಮ ಇಲ್ಲವೆಂದೇ ಹೇಳಬಹುದಾಗಿದೆ.

ಲಸಿಕೆ : ರೋಗ ತಡೆಗಟ್ಟಲು ಉಪಯೋಗಿಸುವ ಸಾಧನ. ಹನಿ ಅಥವಾ ಚುಚ್ಚುಮದ್ದು ರೂಪದಲ್ಲಿ ದೊರೆಯುವುದು.

ಬಿಸಿಜಿ : ಕ್ಷಯ ರೋಗ ತಡೆಗಟ್ಟಲು ಉಪಯೋಗಿಸುವ ಸಾಧನ

ಡಿಪಿಟಿ : ಡಿಪ್ತಿರಿಯಾ, ನಾಯಿಕೆಮ್ಮು, ಧನುರ್ವಾಯು ಧಡಾರ ತಡೆಗಟ್ಟಲು ಉಪಯೋಗಿಸುವ ಸಾಧನ

ಡಿಟಿ : ಡಿಸ್ತೇರಿಯಾ ಮತ್ತು ಧನುರ್ವಾಯು ತಡೆಗಟ್ಟಲು

ಟಿಟಿ : ಟಿಟಿನಸ್ ಟಾಕ್ಸಾಯ್ಡ್ ಧನುರ್ವಾಯು ತಡೆಗಟ್ಟಲು

ಎಂ.ಎಂ.ಆರ್ : ಮೀಸೆಲ್ಸ ಮುಪ್ಸ್, ರೂಬೇಲಾ ತಡೆಗಟ್ಟುವ ಸಾಧನ

ಪೊಲಿಯೋ ಹನಿ : ಹನಿ ರೂಪದ ಪೊಲಿಯೋ ಲಸಿಕೆ

ನಮ್ಮಲ್ಲಿ ಉಪಯೋಗಿಸಲೇಬೇಕಾದ ಲಸಿಕೆಗಳು

ಬಿಸಿಜಿ, ಡಿಪಿಟಿ, ಪೊಲಿಯೋ, ಧಡಾರ, ಡೆಟನಸ್

ಉಪಯೋಗಿಸಬಹುದಾದ ಲಸಿಕೆಗಳು

ಹಪಟೈಟಿಸ್‌ಬಿ, ಎಂ.ಎಂ.ಆರ್

ಹೊಸ ಲಸಿಕೆಗಳು (ಕಡ್ಡಾಯವಲ್ಲದ)

ಹಿಪಟೈಟಿಸ್, ಚಿಕನ್‌ಫಾಕ್ಸ್, ಹೆಚ್‌ಐವಿ, ಮೆನಿಂಜೆಟಿಸ್, ನೀಮೋಕಾಕಲ್ ವ್ಯಾಕ್ಸಿನ್

(ಆಧಾರ : ಫ್ರಂಟ್‌ಲೈನ್)

ಸಂಪಾದಕೀಯ

ಪರಮ ಪಾತಕಿಗಳ ಕೈಗೆ ಆಡಳಿತ ಕೀಲಿಕೈ?

ವಿಧಾನಸಭೆಯ ಚುನಾವಣಾ ಫಲಿತಾಂಶ ಹೊರಬಿದ್ದಿದೆ. ಬಿಜೆಪಿ ಪಕ್ಷವು 110 ಸ್ಥಾನ ಗಳಿಸಿ ಅಧಿಕಾರ ಹಿಡಿಯಲು ಮುಂದಾಗಿದೆ. ಚುನಾವಣಾ ವ್ಯವಸ್ಥೆಯ ಲೋಪಗಳಿಂದಾಗಿ ಬಿಜೆಪಿಗೆ ಸರಳ ಬಹುಮತಕ್ಕೆ ಇನ್ನು 3 ಸ್ಥಾನಗಳು ಅವಶ್ಯಕವಿದ್ದು 'ಇತರರಿಂದ' ಅವನ್ನು ತೆಗೆದುಕೊಳ್ಳಬೇಕಷ್ಟೆ.

ಇದೊಂದು ಗಂಭೀರವಾದ, ಅಪಾಯಕಾರಿಯಾದ ಬೆಳವಣಿಗೆ. ದಕ್ಷಿಣ ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ತನ್ನದೇ ಬಹುಮತದೊಂದಿಗೆ ಕೋಮುವಾದಿ ಬಿಜೆಪಿ ಸರ್ಕಾರವನ್ನು ಹಿಡಿಯಲು ಕಾದು ನಿಂತಿದೆ. ಇದು ಹಲವು ದಶಕಗಳ ನಿರಂತರ ಯೋಜನೆ, ಹಂಚಿಕೆಗಳ ಫಲ. ಈಗ ಕಾರ್ಯ ಸಾಧಿಸುವ ಅವಕಾಶ. ಬಿಜೆಪಿ ಕರ್ನಾಟಕದಲ್ಲಿ ಅಧಿಕಾರ ಹಿಡಿಯುವ ಪರಿಣಾಮ ದಕ್ಷಿಣ ಭಾರತಕ್ಕೆ ಮಾತ್ರವಲ್ಲ ಅದು ಇಡೀ ಭಾರತದ ಒಟ್ಟು ಬೆಳವಣಿಗೆಗಳ ಮೇಲೂ ಭಾರಿ ಪರಿಣಾಮ ಬೀರುವಂತಹದ್ದು ಎನ್ನುತ್ತಾ ವಾಸ್ತವಿಕ ಪ್ರಭಾವವನ್ನು ಮೀರಿ ಉತ್ಪ್ರೇಕ್ಷಿತ 'ಪ್ರದರ್ಶನ' ನೀಡಲು ಬಿಜೆಪಿ ಬಳಗ ಹೆಣಗುತ್ತಿದೆ. ಅಂತೆಯೇ ತಮ್ಮ ಗುರಿಯೀಗ ದೆಹಲಿಯತ್ತ ಎಂತಲೂ ಬಿಜೆಪಿ ನಾಯಕರು ಸಾರಿದ್ದಾರೆ.

ನಾಡಿನ ಜನ ಅದಕ್ಕೆ ಪೂರ್ಣ ಬಹುಮತ ನೀಡಿಲ್ಲ. ಸರ್ಕಾರದ ರಚನೆಗೆ ಹೊಸ್ತಿಲಿನಲ್ಲೇ ನಿಲ್ಲುವಂತೆ ಜನ ತೀರ್ಪು ನೀಡಿದ್ದಾರೆ. ಏಕೆಂದರೆ ಈಗಲೂ ಬಿಜೆಪಿ ಗಳಿಸಿರುವುದು ಕೇವಲ ಶೇ.33.9 ಮತಗಳು. ಅಂದರೆ ಶೇ.66.1ರಷ್ಟು ಜನತೆ ಜಾತ್ಯಾತೀತ ಶಕ್ತಿಗಳ ಪರವಾಗಿ ನಿಂತಿರುವುದು ವಾಸ್ತವದಲ್ಲಿ ಬಿಜೆಪಿಗೆ ಅಧಿಕಾರ ನಿರಾಕರಿಸಿರುವುದು ನಿಚ್ಚಳ.

ತಾವು ಅಧಿಕಾರ ವಂಚಿತರು, ಜೆಡಿ(ಎಸ್)ನ ಮಿತ್ರದ್ರೋಹದಿಂದ ನೊಂದವರು, ಅಭಿವೃದ್ಧಿಯ ಹರಿಕಾರರು ಎಂದೆಲ್ಲಾ ಇವರು ಹಾಕಿದ ಸೋಗು ಬಯಲಾಗಲು ಇನ್ನಷ್ಟು ದಿನಗಳು ಬೇಕಾದೀತು. ಇದೇ ಸಂದರ್ಭದಲ್ಲಿ ಇಂತಹ ತೀರ್ಪನ್ನು ಜನ ಯಾಕೆ ನೀಡಿದರು ಎಂದೂ ಯೋಚಿಸಬೇಕು. ಒಂದೆಡೆ ಕೇಂದ್ರದ ಕಾಂಗ್ರೆಸ್ ನೇತೃತ್ವದ ಯು.ಪಿ.ಎ. ಸರ್ಕಾರದ ಆರ್ಥಿಕ ನೀತಿಗಳ ದುಷ್ಪರಿಣಾಮದಿಂದ, ಬೆಲೆ ಏರಿಕೆಯ ಬಾಧೆಯಿಂದ ಜನತೆ ತೀವ್ರ ಅತೃಪ್ತರಾಗಿದ್ದಾರೆ. ಜನ ತತ್ತರಿಸುತ್ತಿದ್ದಾರೆ. ಸ್ಥಿತಿಯು ಗಂಭೀರವಾಗಿದ್ದರೂ ಮಾತನ್ನಾಡುವುದನ್ನು ಬಿಟ್ಟು ಕೇಂದ್ರ ಸರ್ಕಾರ ಏನನ್ನೂ ಮಾಡುತ್ತಿಲ್ಲ. ಜಾಗತೀಕರಣ, ಖಾಸಗೀಕರಣದ ನೀತಿಗಳನ್ನು ಕೈಬಿಡುತ್ತಿಲ್ಲ. ಹೀಗಾಗಿ ನಿಧಾನವಾಗಿ ಜನತೆ ಯುಪಿಎದಿಂದ ದೂರ ಸರಿಯುತ್ತಿದ್ದಾರೆ. ಇನ್ನೊಂದೆಡೆ ರಾಜ್ಯದಲ್ಲಿಯೂ ಕಾಂಗ್ರೆಸ್ ಪಕ್ಷವು ರಾಜಕೀಯವಾಗಿ, ಸಂಘಟನಾತ್ಮಕವಾಗಿ ಬಿಜೆಪಿಯನ್ನು ಎದುರಿಸಿ ಹೋರಾಡಲಿಲ್ಲ. ತನ್ನ ಬಲ ಹೆಚ್ಚಿಸಿಕೊಳ್ಳಲೂ ಅದು ಸಂಘಟನಾತ್ಮಕವಾಗಿಯೂ ಅಸಮರ್ಥತೆ ಅನುಭವಿಸುತ್ತಿದೆ. ವಿವಿಧ ಜಾತಿಗಳ ಜನರನ್ನು ಅಥವಾ ಅವರ ನಾಯಕರನ್ನು ಜೋಡಿಸಿಬಿಟ್ಟರೆ ಗೆಲುವಿನ ಬುತ್ತಿ ಅಂಗೈಯೊಳಗೆ ಎಂದೇ ಭ್ರಮಿಸಿದೆ. ಅದು ಅನುಸರಿಸುತ್ತಿರುವ ಆರ್ಥಿಕ ನೀತಿಗಳಿಗೂ, ಬಿಜೆಪಿ ನೀತಿಗಳು ಒಂದೇ ಆಗಿರುವಾಗ ಭಿನ್ನತೆಯೂ ಕಾಣುತ್ತಿಲ್ಲ. ಇನ್ನೂ ಕೋಮುವಾದಿಗಳ ಪ್ರತಿಯೊಂದು ಕೃತ್ಯಗಳನ್ನು ರಾಜಕೀಯವನ್ನು ಎದುರಿಸುವಲ್ಲಿ, ವಿಧಾನಸಭೆಯಲ್ಲಿ ಅಧಿಕೃತ ವಿರೋಧ ಪಕ್ಷದ ಪಾತ್ರ ನಿರ್ವಹಿಸುವಲ್ಲಿಯೂ ಅದು ವಿಫಲವಾಯಿತು. ಇನ್ನುಳಿದ ಜಾತ್ಯಾತೀತ ಶಕ್ತಿಗಳ ಶಕ್ತಿಯ ಮಿತಿಯ ಈ ಒಟ್ಟು ಸನ್ನಿವೇಶವನ್ನು ಬಿಜೆಪಿಯು ಬಳಸಿಕೊಂಡಿತು.

ಗಣಿ, ಭೂಮಾಫಿಯಾಗಳ ಅಕ್ರಮ ಹಣವನ್ನು ಎಗ್ಗಿಲ್ಲದೇ ಬಳಸಿತು. ಈಗಲೂ ಈ ಶಕ್ತಿಗಳೇ ಈ ಸರ್ಕಾರದ ಬಹು ಫಲಾನುಭವಿಗಳು, ಅಕ್ರಮ ಹಣ, ಎಗ್ಗಿಲ್ಲದ ಚುನಾವಣಾ ಅಕ್ರಮ, ಮೋಸ, ವಂಚನೆಗಳಲ್ಲಿ ಮುಳುಗೆದ್ದ ಬಿಜೆಪಿಗೆ ನೈತಿಕತೆ ಎಂಬುದಾದರೂ ಎಲ್ಲಿದೆ?

ಬೆಲೆ ಏರಿಕೆಯಿಂದ ಜನ ಒದ್ದಾಡ್ತಾ ಇದ್ದಾರೆ ಎಂದು ಶುಷ್ಮಾ ಸ್ವರಾಜ್ ಹೇಳಿದರೆ, ಗುಜರಾತ್ ಮಾದರಿ ಅನುಸರಿಸಲಾಗುವುದು ಎಂದೂ, ಕಾಂಗ್ರೆಸ್‌ಗೆ 'ಧಮ್' ಇದೆಯಾ ಎಂದು ನರಹಂತಕ ನರೇಂದ್ರಮೋದಿ ಸವಾಲೆಸೆದದ್ದೂ ಆಯಿತು. ಮತದಾನದ ಎರಡನೆಯ ಸುತ್ತಿನಲ್ಲಿ ಬಿಜೆಪಿಯ ಅಧ್ಯಕ್ಷ ಸದಾನಂದಗೌಡ ಬಹಿರಂಗವಾಗಿಯೇ 'ಗೆದ್ದುಬಂದರೂ ಹಿಂದುತ್ವ ಕೈಬಿಡುವುದಿಲ್ಲ' ಎಂದಿರುವುದು ಬಚ್ಚಿಟ್ಟ ಅಜೆಂಡಾದ ಅನಾವರಣ. ಇದರ ಅರ್ಥ ಬಿಜೆಪಿಯು ಸರ್ಕಾರದ ಆಡಳಿತ ಯಂತ್ರವನ್ನು ಬಳಸಿ 'ಹಿಂದುತ್ವದ' ಫ್ಯಾಸಿಸ್ಟ್ ಮಾದರಿಯನ್ನು ಜಾರಿಗೊಳಿಸಲಿದೆ. ಅಧಿಕಾರಕ್ಕೆ ಬಂದರೆ 'ಹಿಂದುತ್ವ' ಬಿಡುವುದಿಲ್ಲವೆಂದು ಅದರ ನಾಯಕರು ಸಾರಿದ್ದಾರೆ. ರಾಜ್ಯದ ಆಡಳಿತವು ಕೇವಲ ಬಿಜೆಪಿ ಎಂಬ ರಾಜಕೀಯ ಪಕ್ಷವೊಂದರ ಕೈಯಲ್ಲಿರುವುದಲ್ಲ ಬದಲಾಗಿ ಸಂವಿಧಾನೇತರ, ಸಂವಿಧಾನ ವಿರೋಧಿ ಉಗ್ರ ಫ್ಯಾಸಿಸ್ಟ್ ಮಾದರಿಯ ಆರ್‌ಎಸ್‌ಎಸ್ ಅದರ ಚಾಲಕ ಶಕ್ತಿ. ಹೀಗಾಗಿ ಅತ್ಯಂತ ವ್ಯವಸ್ಥಿತವಾಗಿ, ಕ್ಷಿಪ್ರವಾಗಿ ಸಂಘ ಪರಿವಾರದ ಅಜೆಂಡಾವೇ ಜಾರಿಗೊಳ್ಳುತ್ತದೆ. ಕೋಮು ಸಾಮರಸ್ಯ, ವೈವಿಧ್ಯಮಯ ಸಂಸ್ಕೃತಿ, ಪರಂಪರೆ, ಪ್ರಜಾಪ್ರಭುತ್ವ, ಸೆಕ್ಯುಲಾರಿಸಂಗೆ ಕಡುವಿರೋಧಿಯಾಗಿರುವ ಅದನ್ನು ಪ್ರತಿಪಾದಿಸುವವರ ಮೇಲೆ ಧಾಳಿ ನಡೆಸುತ್ತದೆ. ಕರ್ನಾಟಕದಲ್ಲಿ ಬಿಜೆಪಿ ಆಡಳಿತ ಎಂದರೆ ಎಲ್ಲಾ ಬಗೆಯ ಪ್ರತಿಗಾಮಿ ಶಕ್ತಿಗಳ ಚಟುವಟಿಕೆ, ಅದರ ಧಾಳಿ ಹಲವು ಪಟ್ಟು ಹೆಚ್ಚಲಿದೆ. ಇದಕ್ಕೆ 'ಗುಜರಾತ್ ಮಾದರಿ' ಸರ್ಕಾರದ ಪೂರ್ಣ ಬೆಂಬಲವಿರುತ್ತದೆ. ಪ್ರಜಾಪ್ರಭುತ್ವದ ಮಹತ್ವದ ಅಂಶವಾಗಿರುವ ಭಿನ್ನಾಭಿಪ್ರಾಯವನ್ನು ಸಹಿಸದ ಸಂಘ ಪರಿವಾರ ಸೈದ್ಧಾಂತಿಕ, ಸಂಘಟನಾತ್ಮಕವಾದ ಧಾಳಿಗಳನ್ನು ಜೊತೆಯಲ್ಲೇ ನಡೆಸುವುದು ಅದರ ಕ್ರಮ.

ಇಂದು ಕಾರ್ಷಿಕ ಬಿಕ್ಕಟ್ಟಿನಿಂದಾಗಿ ರಾಜ್ಯದಲ್ಲಿ ರೈತರ ಆತ್ಮಹತ್ಯೆಗಳು ನಡೆದೇ ಇವೆ. ಹೊಸ ಕೈಗಾರಿಕೆಗಳಲ್ಲದೇ, ಇರುವುದನ್ನು ಉಳಿಸಿಕೊಳ್ಳಲಾಗದೆ ಕೈಗಾರಿಕಾರಂಗ ತತ್ತರಿಸುತ್ತಿದೆ. ನಿರುದ್ಯೋಗ ಬೆಳೆದಿದೆ. ಗ್ರಾಮಾಂತರ, ನಗರ ದಿವಾಳಿ ಹೆಚ್ಚುತ್ತಿದೆ. ಆಹಾರದ ಕೊರತೆ ಇದೆ. ಇನ್ನೊಂದೆಡೆ ಈಗಾಗಲೇ ದಕ್ಷಿಣ ಭಾರತದ ಅಯೋಧ್ಯೆಯನ್ನಾಗಿಸುವುದಾಗಿ ಸಾರಲಾಗಿರುವ ಬಾಬಾಬುಡನ್‌ಗಿರಿಯ ವಿವಾದ. ಕರಾವಳಿಯಲ್ಲಿ ಅಲ್ಪಸಂಖ್ಯಾತರ ಮೇಲೆ ಸತತ ಧಾಳಿ ನಡೆಸುತ್ತಿರುವ ಕೋಮುವಾದಿ ಫ್ಯಾಸಿಸ್ಟ್ ಮಾದರಿಯ 'ಪ್ರೋಗ್ರಾಂ' ಜಾರಿ.


ರಾಜ್ಯದಲ್ಲಿಯೂ ಹಲವಾರು ಸ್ಥಳೀಯ ವಿವಾದಗಳನ್ನೆತ್ತಿ ಹುಟ್ಟುಹಾಕಲಾದ ಕೋಮುದ್ವೇಷದ ಅಗ್ನಿಕುಂಡಗಳ, ಭಾಷಾಂಧತೆ, ಪ್ರತ್ಯೇಕತಾವಾದಿಗಳಿಗೆ ಕುಮ್ಮಕ್ಕು.... ಹೀಗೆ ಕೋಮುವಾದಿಗಳ ಕಾರ್ಯಾಚರಣೆಗೆ ನೆಲವನ್ನು ಹದಗೊಳಿಸಲಾಗಿದೆ. ಕೋಮುದ್ವೇಷದ ವಿಷದ ನಾಗರ ಇಲ್ಲಿಯೂ ಹೆಡೆಯೆತ್ತಿ ಕಚ್ಚಲು ಹವಣಿಸುತ್ತಿರುವಾಗ ಕರ್ನಾಟಕವನ್ನು ಕೋಮುವಾದಿಗಳ ಕೈಯಿಂದ ರಕ್ಷಿಸಿಕೊಳ್ಳುವುದು ಅತ್ಯಂತ ಸವಾಲಿನ ಪ್ರಶ್ನೆಯಾಗಿದೆ.

ಕೋಮುವಾದಿ ಶಕ್ತಿಗಳ ಹಿಡಿತಕ್ಕೆ ರಾಜ್ಯದ ರಾಜಕಾರಣ ಸಿಕ್ಕಿ ಹಾಕಿಕೊಳ್ಳುತ್ತಿರುವ ಸಂದರ್ಭ ಬಂದಿರುವಾಗ ಅದನ್ನು ತಡೆಯುವುದು ಹೇಗೆ? ದುಡಿವ ಜನಕೋಟಿಯನ್ನು ರಕ್ಷಿಸುವುದು ಹೇಗೆ? ಇದು ಜನಪರ, ಪ್ರಗತಿಪರ ಪ್ರಜಾಸತ್ತಾತ್ಮಕ ಚಳುವಳಿಗಳ, ವ್ಯಕ್ತಿ, ಶಕ್ತಿಗಳ ಮುಂದಿರುವ ಪ್ರಶ್ನೆಯೂ ಆಗಿದೆ. ಕೋಮುವಾದಿಗಳ ಆ ಎಲ್ಲಾ ಧಾಳಿಗಳನ್ನು ಹಿಮ್ಮೆಟ್ಟಿಸಿ ಮುನ್ನಡೆ ಸಾಧಿಸಲು ಎಲ್ಲಾ ಜನ ವಿಭಾಗಗಳ, ಪ್ರಬಲ ಪ್ರಜಾಸತ್ತಾತ್ಮಕ ಚಳುವಳಿಯೊಂದೇ ಇದಕ್ಕೆ ದಾರಿ.

ಉದಾರೀಕರಣದ ಆರ್ಥಿಕ ನೀತಿಗಳು, ಕೋಮುವಾದದ ವಿರುದ್ಧ ಆಳುವವರೊಂದಿಗೆ ಮುಖಾಮುಖಿಯಾಗಿ ಸಂಘರ್ಷ ನಡೆಸುತ್ತಿರುವ ಕಾರ್ಮಿಕ ವರ್ಗವೇ ಸಹಜವಾಗಿ ಮುಂಚೂಣಿಯ ಪಾತ್ರ ನಿರ್ವಹಿಸಬೇಕಾಗುತ್ತದೆ.

ಆದ್ದರಿಂದ ಎಲ್ಲಾ ಎಡ, ಪ್ರಜಾಸತ್ತಾತ್ಮಕ, ಜಾತ್ಯಾತೀತ ಶಕ್ತಿಗಳ ಐಕ್ಯತೆ ಹಾಗೂ ಕಾರ್ಯಾಚರಣೆ ಇಂದಿನ ಅಗತ್ಯ. ಹಿಂದೆಂದಿಗಿಂತ ಎಚ್ಚರ ಹಾಗೂ ಅಪಾರ ಕ್ರಿಯಾಶೀಲತೆ ಸನ್ನಿವೇಶ ಬಯಸುತ್ತದೆ.

ಸಾರ್ವಜನಿಕ ಸ್ವತ್ತಿನ ಉಳಿವಿಗಾಗಿ



ಬಹುದಿನಗಳ ನಿರೀಕ್ಷೆಯ ದೇವನಹಳ್ಳಿಯ ಅಂತರ್ರಾಷ್ಟ್ರೀಯ ವಿಮಾನ ನಿಲ್ದಾಣ ಕಾರ್ಯಾರಂಭ ಮಾಡಿದೆ. ಮೇ 24 ರಂದು ಮಧ್ಯ ರಾತ್ರಿ ಕಳೆದ ಬಳಿ ಮುಂದಿನ 24 ಗಂಟೆಗಳಲ್ಲಿ ಸುಮಾರು 350 ಕ್ಕೂ ಹೆಚ್ಚು ಲೋಹದ ಹಕ್ಕಿಗಳು ನೆಲಕ್ಕಿಳಿದಿವೆ, ಆಗಸಕ್ಕೆ ಏರಿವೆ. ಹೀಗೆ ಬೆಂಗಳೂರು ಅಂತರ್ರಾಷ್ಟ್ರೀಯ ಭೂಪಟದಲ್ಲಿ ತನ್ನನ್ನು ಮತ್ತೊಮ್ಮೆ ಗುರುತಿಸಿಕೊಂಡಿದೆ. ವಿಶ್ವದ ಬಂಡವಾಳ ಹರಿದು ಬರುತ್ತಿರುವಾಗ, ಹೂಡಿಕೆಯಾಗುತ್ತಿರುವ ನಗರ ಬೆಂಗಳೂರು. ಹಾಗೆಯೇ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನದಂತಹ ಕ್ಷೇತ್ರಗಳಲ್ಲಿ ರಾಜ್ಯ ಸಾಧಿಸಿರುವ ಸಾಧನೆಯೂ ಜಗತ್ತಿನ ಇತರೆ ದೇಶಗಳೊಂದಿಗೆ ಬೆಂಗಳೂರನ್ನು ಬೆಸೆದಿದೆ. ಪ್ರವಾಸವೂ ಸೇರಿದಂತೆ ಈ ಎಲ್ಲಾ ಕಾರಣಗಳಿಂದ ಬೆಂಗಳೂರಿಗೆ ಬಂದು ಹೋಗುವವರು, ಉದ್ಯೋಗ ಅರಸಿ ಅಲೆದಾಡುವವರ ಸಂಖ್ಯೆ ಗಣನೀಯವಾಗಿ ಹೆಚ್ಚಳವಾಗಿದೆ. ಹೀಗಾಗಿ ಹಿಂದಿನ ವಿಮಾನ ನಿಲ್ದಾಣ ವಿಸ್ತರಣೆಯಾಗುವುದು ಅಗತ್ಯ.

ಆದರೀಗ ಸಮಸ್ಯೆಗಳು ಉದ್ಭವವಾಗಿರುವುದು ಹಲವು. ಬೆಂಗಳೂರು ನಗರ ಕೇಂದ್ರದಿಂದ ದೇವನಹಳ್ಳಿ ವಿಮಾನ ನಿಲ್ದಾಣಕ್ಕೆ 32. ಕಿ.ಮೀ. ದೂರ. ರಸ್ತೆಗಳ ಅಗಲೀಕರಣ, ಅದರ ನಿರ್ಮಾಣವು ಪೂರ್ಣಗೊಳ್ಳದೇ ಪ್ರಯಾಣವೆಂಬುದು ಪ್ರಯಾಸವಾಗಿದೆ ಎಂಬ ಕೂಗು ಎಲ್ಲೆಡೆ. ಮೇಲಾಗಿ ಹೆಚ್ಚುತ್ತಿರುವ ಸಾರಿಗೆ - ವಾಹನಗಳ ದಟ್ಟಣೆ ಅನುಸರಿಸಿ ರಸ್ತೆಗಳನ್ನು ಸಿದ್ಧಗೊಳಿಸದೇ ಇರುವುದು ಪದೇಪದೇ 'ಟ್ರಾಫಿಕ್ ಜಾಮ್' ನಿಂದ ನರಕ ಯಾತನೆ ಪ್ರಯಾಣಿಕರಿಗೆ. ವಿಮಾನ ಪ್ರಯಾಣಿಕರಿಗೂ ಅಷ್ಟೇ ಪ್ರಯಾಸ! ಇನ್ನು ವಿಮಾನ ನಿಲ್ದಾಣದಲ್ಲಿಯೂ ವ್ಯವಸ್ಥೆ, ಸೂಕ್ತ ಸಹಾಯ, ಮಾರ್ಗದರ್ಶನ ನೀಡುವ ಅನುಭವಿ ಸಿಬ್ಬಂದಿಗಳ ಕೊರತೆ ಇತ್ಯಾದಿಗಳನ್ನು ಪಟ್ಟಿ ಮಾಡುತ್ತಾರೆ. ಇದು ಎಲ್ಲಾ ವಿಧದಲ್ಲಿಯೂ ಹೈಟೆಕ್ ಎಂದು ಕರೆದುಕೊಂಡರೂ ಇನ್ನೂ ಸುಧಾರಿಸಬೇಕಿದೆ. ಆದರೆ ಈ ಎಲ್ಲಾ ಸೇವೆಗಳಿಗೂ ತೆರಬೇಕಾದ ಶುಲ್ಕ ದುಬಾರಿ. ಇದು ಗ್ರಾಹಕರ ಮೇಲೆ ಅತೀ ಹೊರೆ.

ಈ 'ಸಂಭ್ರಮ'ದ ನಡುವೆಯೇ ಒಂದು ಗಂಭೀರ ಪ್ರಶ್ನೆಗೆ ಸೂಕ್ತವಾದ ಉತ್ತರ ಸಿಕ್ಕಿಯೇ ಇಲ್ಲ. ಹಲವಾರು ದಶಕಗಳಿಂದ ಕಾರ್ಯನಿರ್ವಹಿಸುತ್ತಿದ್ದ ಹೆಚ್‌ಎಎಲ್ ವಿಮಾನ ನಿಲ್ದಾಣವನ್ನು ನಾಗರೀಕಯಾನಕ್ಕೆ ಮುಚ್ಚದೇ ಬಳಸಬೇಕೆಂಬ ಉದ್ದಿಮೆಗಳು, ನಾಗರೀಕರು, ಕಾರ್ಮಿಕರುಗಳ ಒತ್ತಾಯವನ್ನು ಮನ್ನಿಸಿಲ್ಲ. ಇದು ಸಹ ಪರಿಗಣಿಸಬೇಕಾದ ಪ್ರಶ್ನೆ.

ಕೇಂದ್ರ ಸರ್ಕಾರವು ವಿಮಾನ ನಿಲ್ದಾಣಗಳ ಕಾರ್ಯನಿರ್ವಹಣೆ ಸೇರಿದಂತೆ ಎಲ್ಲವನ್ನು ಖಾಸಗೀಕರಿಸುವ ದಿಶೆಯಲ್ಲಿಯೇ ಯೋಚಿಸುತ್ತಿದೆ. ಸರ್ಕಾರಿ ಸ್ವಾಮ್ಯದಲ್ಲಿ ಅತ್ಯುತ್ತಮ ಹಾಗೂ ಲಾಭದಾಯಕವಾಗಿಯೂ ನಿರ್ವಹಿಸುವ ವಿಮಾನ ನಿಲ್ದಾಣಗಳನ್ನು ಖಾಸಗೀಕರಿಸಲು ಹಲವು ಯತ್ನಗಳು ನಡೆದಿವೆ. ಕಾರ್ಮಿಕ ಸಂಘಟನೆಗಳು, ಎಡಪಕ್ಷಗಳ ಒತ್ತಡದಿಂದ ಅದು ಪೂರ್ಣ ಸಾಧ್ಯವಾಗಿಲ್ಲ. ಆದಾಗ್ಯೂ ಅವುಗಳ ನಿರ್ವಹಣೆಯನ್ನು ಖಾಸಗಿಯವರಿಗೆ ನೀಡಲಾಗಿದೆ. ತೀರಾ ಇತ್ತೀಚೆಗೆ ಮೆಟ್ರೋ ಅಲ್ಲದೆ 35 ವಿಮಾನ ನಿಲ್ದಾಣಗಳ ಆಧುನೀಕರಣವನ್ನು ಭಾರತದ ವಿಮಾನ ನಿಲ್ದಾಣಗಳ ಪ್ರಾಧಿಕಾರ ಕೈಗೊಳ್ಳಲು ಪ್ರಧಾನಿ ಅಧ್ಯಕ್ಷತೆಯಲ್ಲಿ ಸಮಿತಿಯು ನಿರ್ಧರಿಸಿತ್ತು. ಆದರೆ ಇದ್ದಕ್ಕಿದ್ದಂತೆಯೇ ಯೋಜನಾ ಆಯೋಗ ಇದನ್ನು ಬುಡಮೇಲುಗೊಳಿಸಿ ವಾಣಿಜ್ಯ ಹಾಗೂ ನಿರ್ವಹಣೆಯಲ್ಲಿ ಖಾಸಗಿಯವರನ್ನು ನುಗ್ಗಿಸಲು ನಿರ್ಧರಿಸಿದೆ. ಕಲ್ಕತ್ತಾ, ಚೆನ್ನೈನ ವಿಮಾನ ನಿಲ್ದಾಣಗಳ ಆಧುನೀಕರಣವನ್ನು ಬೇಕೆಂದೇ ಮಾಡದೇ ಕಾಲ ತಳ್ಳುತ್ತಿದೆ. ಹಾಗೆಯೇ ರೈಲ್ವೆಯ ಸರಕು ಸಾಗಾಣಿಕೆ ವಿಭಾಗವನ್ನು ಖಾಸಗಿಯವರಿಗೆ ಒಪ್ಪಿಸಲು ಹವಣಿಸುತ್ತಿದೆ. ಇದು ಸರ್ಕಾರದ ವೈಖರಿ. ಉದಾರೀಕರಣ-ಖಾಸಗೀಕರಣ ಕೈಬಿಡದ ಪರಿ. ಆದ್ದರಿಂದ ಖಾಸಗೀಕರಣ ನಿಲ್ಲಬೇಕು, ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದ ಬಳಕೆಗೂ ಅವಕಾಶ ಕಲ್ಪಿಸಬೇಕು. ಇಷ್ಟೆಲ್ಲಾ ಇರುವಾಗ ದೇಶದ ಅಮೂಲ್ಯ ಸ್ವತ್ತುಗಳ ರಕ್ಷಣೆ, ದುಡಿವವರ ಬಗ್ಗೆ ಕಿಂಚಿತ್ತೂ ಚಿಂತಿಸದೇ ಹೆಸರಿನ ಸುತ್ತಮುತ್ತಲೇ ಓರಾಡುವ ರಕ್ಷಣಾ ವೇದಿಕೆಯ ಗೌಡರಿಗೆ ಇವು ಮುಖ್ಯ ಪ್ರಶ್ನೆಗಳಲ್ಲವೇ?

ಬಹುಮತಕ್ಕೆ ಮೂರು ಕಡಿಮೆ

ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿರುವ ಯಡಿಯೂರಪ್ಪನವರು ಸಿ.ಎಂ. ಗಾದಿಗೆ ಕೈಚಾಚಿ ಹಾಗೆ ನಿಂತಿದ್ದಾರೆ. ಆದರೆ ಬಹುಮತವಿಲ್ಲ. 110 ಕ್ಕೆ ಇನ್ನು ಮೂರಾದರೂ ಸೇರಬೇಕು! ಮೂರು ಇಲ್ಲವೆಂದು ಬಿಜೆಪಿ ಕೈಕಟ್ಟಿ ಕೂತಿಲ್ಲ. ಆಯ್ಕೆಯಾಗಿರುವ ಆರು ಪಕ್ಷೇತರ ಶಾಸಕರನ್ನು ತನ್ನತ್ತ ಸೆಳೆಯಲು ಮುಂದಾಗಿದೆ. ಅಲ್ಲಲ್ಲ ಜಾಲ ಬೀಸಿದೆ. ಅದರಲ್ಲಿ ನಾಲ್ಕು ಜನರು ಆಗಬಹುದು ಎಂದಿದ್ದಾರಂತೆ. ಇದರಲ್ಲಿ ಒಬ್ಬರನ್ನು ಹರಪಹಳ್ಳಿ ಶಾಸಕ ಕರುಣಾಕರ ರೆಡ್ಡಿ ತಮ್ಮ ಸುಪರ್ದಿಗೆ (ಹೈಜಾಕ್ ಅನ್ನುತ್ತಾರೆ) ತೆಗೆದುಕೊಂಡಿದ್ದಾರಂತೆ. ಇನ್ನುಳಿದವರಲ್ಲಿ ಕನಕಗಿರಿ ಶಾಸಕ ಮಾತೃಪಕ್ಷಕ್ಕೆ ನಮೋ ಎಂದಿದ್ದಾರಂತೆ. ಉಳಿದಿಬ್ಬರು - ಇನ್ನು ನಾಲ್ಕು ಜನರ ಜೊತೆ ಮಾತುಕತೆ ನಡೆದು ವ್ಯವಹಾರ ಕುದುರಿಸಲಾಗಿದೆಯಂತೆ. ಶುರು ಆಯ್ತು. ಸರ್ಕಾರ ರಚಿಸುವಾಗಲೇ ಅನೈತಿಕತೆಗಳ ಕಸರತ್ತು. ಇದು ತತ್ವನಿಷ್ಠ ಪಕ್ಷದ ಕರಾಮತ್ತು.

ಜನಶಕ್ತಿ ಕನ್ನಡ ವಾರಪತ್ರಿಕೆ

ಕಳ್ಳಭಟ್ಟಿಯಲ್ಲ - ನಕಲಿ ಸಾರಾಯಿ

ಬೆಂಗಳೂರು ನಗರ ಮತ್ತು ಆಸುಪಾಸಿನ ಜಿಲ್ಲೆಗಳಲ್ಲಿ ರಾಜಕೀಯ ಪಕ್ಷಗಳು ಒದಗಿಸಿದ ವಿಷಕಾರಿ ಸಾರಾಯಿ ಸೇವಿಸಿ ನೂರಾರು ಜನ ಪ್ರಾಣ ಕಳೆದುಕೊಂಡಿದ್ದಾರೆ. ಈ ದುರಂತದ ಬಗ್ಗೆ ವಾರ್ತಾ ಪತ್ರಿಕೆಗಳಲ್ಲಿ ದಪ್ಪ ಅಕ್ಷರಗಳ ಸುದ್ದಿಗಳು ಪ್ರಕಟ ಆಗುತ್ತಲೇ ಇದ್ದವು. ದೃಶ್ಯ ಮಾಧ್ಯಮಗಳಲ್ಲಿಯೂ ಈ ಕುರಿತು ನಿರಂತರ ವರದಿಗಳು ಪ್ರಕಟವಾದವು. ಈಗ ಚುನಾವಣಾ ಫಲಿತಾಂಶದ ವಿಮರ್ಶೆ ಮುಖ್ಯ ವಿಷಯವಾಗಿರುವುದರಿಂದ ವಿಷಕಾರಿ ಸಾರಾಯಿ ಸೇವಿಸಿ ಸಾಯುವವರ ಬಗ್ಗೆ ಬರೆಯುವುದಕ್ಕೆ, ಬೈಯುವುದಕ್ಕೆ ಸ್ವಲ್ಪ ವಿರಾಮ ಸಿಕ್ಕಿದಂತಾಗಿದೆ.

ಮಾಧ್ಯಮಗಳು ಈ ವಿಷಯಕ್ಕೆ ನೀಡಿದ ಆದ್ಯತೆ, ವ್ಯಕ್ತಪಡಿಸಿದ ಕಾಳಜಿ ಸ್ವಾಗತಾರ್ಹವಾಗಿದ್ದರೂ ಅವುಗಳಿಂದ ಒಂದು ತಪ್ಪು ಸಂದೇಶ ರವಾನೆಯಾಗಿದೆ. ವರದಿಯಾದಂತೆ ಬೆಂಗಳೂರು ಮತ್ತು ಸುತ್ತಮುತ್ತ ಸತ್ತವರು ಕಳ್ಳಭಟ್ಟಿ ಕುಡಿದು ಸತ್ತವರಲ್ಲ. ಅವರು ನಕಲಿ ಸಾರಾಯಿ ಕುಡಿದು ಸತ್ತವರು. ಕಳ್ಳಭಟ್ಟಿ ಎನ್ನುವುದೇ ಬೇರೆ. ನಕಲಿ ಸಾರಾಯಿ ಎನ್ನುವುದೇ ಬೇರೆ. ಕಳ್ಳಭಟ್ಟಿ ಸೇವಿಸಿ ಯಾರೂ ಸಾಯುವುದಿಲ್ಲ. ನಕಲಿ ಸಾರಾಯಿ ಕುಡಿದು ಜನ ಸಾಯುತ್ತಾರೆ.

ಬಾಳೆ ಹಣ್ಣು, ಗೇರು ಹಣ್ಣು, ಮೂಸಂಬಿ ಹಣ್ಣು, ದ್ರಾಕ್ಷಿ ಹಣ್ಣು, ಬೆಲ್ಲ, ಕಾಕಂಬಿ ಮೊದಲಾದವುಗಳನ್ನು ಕೊಳೆಯಿಸಿ, ಭಟ್ಟಿ ಇಳಿಸಿ ಸಾರಾಯಿ ತಯಾರಿಸಲಾಗುತ್ತದೆ. ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿರುವ ಅನೇಕ ಲಂಬಾಣಿ ತಾಂಡಾಗಳಲ್ಲಿ ಈ ವಿಧಾನದಲ್ಲಿ ಸಾರಾಯಿಯನ್ನು ತಯಾರಿಸಲಾಗುತ್ತದೆ. ಅದನ್ನು ಅವರೂ ಕುಡಿಯುತ್ತಾರೆ. ಬೇರೆಯವರಿಗೂ ಮಾರುತ್ತಾರೆ. ಅನುಮತಿ ಇಲ್ಲದೆ ಕಾನೂನುಬಾಹಿರವಾಗಿ ಅದನ್ನು ತಯಾರಿಸುತ್ತಿರುವುದರಿಂದ ಅದನ್ನು ಕಳ್ಳಭಟ್ಟಿ ಎನ್ನಲಾಗುತ್ತದೆ. ಇದನ್ನು ಕುಡಿಯುವುದರಿಂದ ಜೀವಕ್ಕೆ ಅಪಾಯವಿಲ್ಲ. ಕುಡಿದ ತಕ್ಷಣ ಕಿಕ್ ಬರಲೆಂದು ಸ್ಪಿರಿಟ್ ಮೊದಲಾದ ರಾಸಾಯನಿಕ ಪದಾರ್ಥಗಳನ್ನು ಸೇರಿಸಿದಾಗ ಸಾರಾಯಿ ಅಪಾಯಕಾರಿಯಾಗುತ್ತದೆ.

ಆದರೆ ಬೆಂಗಳೂರು ಮತ್ತು ಸುತ್ತಮುತ್ತ ಜನ ಕುಡಿದು ಸತ್ತಿದ್ದು ಕಳ್ಳಭಟ್ಟಿಯಲ್ಲ. ಅದು ವಿಷಕಾರಿ ನಕಲಿ ಸಾರಾಯಿ. ನೀರಿಗೆ ವಿಷಕಾರಿ ಮಿಥೈಲ್‌ನಂತಹ ಅಪಾಯಕಾರಿ ರಾಸಾಯನಿಕಗಳನ್ನು ಸೇರಿಸಿ ತಯಾರಿಸುವ ಸಾರಾಯಿ ಇದು. ನೀರಿಗೆ ಮಿಥೈಲ್ ಬೆರೆಸುವಾಗ ಅದರ ಪ್ರಮಾಣ ಹೆಚ್ಚಾಗಿ ತುರ್ತು ಸಾವಿಗೆ ಕಾರಣವಾಗುತ್ತದೆ.

ಚುನಾವಣೆಯ ಸಮಯದಲ್ಲಿ ಸಾರಾಯಿಗೆ ವಿಶೇಷ ಬೇಡಿಕೆ ನಿರ್ಮಾಣವಾಗುವುದರಿಂದ ನಕಲಿ ಸಾರಾಯಿ ತಯಾರಕ ಖದೀಮರು ಲಾಭದ ದುರಾಸೆಗೆ ಅವಸರವಸರದಲ್ಲಿ ನೀರಿಗೆ ಅಪಾಯಕಾರಿ ರಾಸಾಯನಿಕಗಳನ್ನು ಬೆರೆಸಿ ತಯಾರಿಸುವ ನಕಲಿ ಸಾರಾಯಿ ಕುಡಿದು ಬಡಜನ ಪ್ರಾಣ ಕಳೆದುಕೊಳ್ಳುತ್ತಾರೆ.

ಇಂತಹ ಖದೀಮರನ್ನು ಹಿಡಿದು ಶಿಕ್ಷಿಸುವುದು ಅಗತ್ಯವಿದೆ. ಆದರೆ ಇಂತಹ ನಕಲಿ ಸಾರಾಯಿ ಸೇವನೆಯಿಂದ ಸಾವುಗಳು ಸಂಭವಿಸಿದಾಗ ಗ್ರಾಮೀಣ ಪ್ರದೇಶಗಳಲ್ಲಿ ಅಷ್ಟೇನು ಅಪಾಯಕಾರಿಯಲ್ಲದ ಕಳ್ಳಭಟ್ಟಿ ತಯಾರಿಸುವವರ ಮೇಲೆ ದಾಳಿ ಮಾಡಲಾಗುತ್ತದೆ. ಅವರು ಸಂಗ್ರಹಿಸಿಟ್ಟ ಕಚ್ಚಾಪದಾರ್ಥಗಳನ್ನು ಹಾಗೂ ತಯಾರಿಸಿದ ಸಾರಾಯಿಯನ್ನು ನಾಶಮಾಡಲಾಗುತ್ತದೆ. ಅವರ ಮೇಲೆ ದೈಹಿಕವಾಗಿ ಹಲ್ಲೆ ಮಾಡಲಾಗುತ್ತದೆ.



ಪ್ರಕರಣವನ್ನು ದಾಖಲು ಮಾಡಿ ಜೈಲಿಗೆ ಅಟ್ಟಲಾಗುತ್ತದೆ. ಪರಂಪರಾಗತವಾಗಿ ತಯಾರಿಸಲಾಗುತ್ತಿರುವ ಇಂತಹ ಸಾರಾಯಿ ಸೇವನೆಯಿಂದ ಸಾವಿನಂತಹ ಯಾವುದೇ ಅಪಾಯ ಸಂಭವಿಸದಿದ್ದರೂ ಕಳ್ಳಭಟ್ಟಿ ಎಂಬ ಹೆಸರಿನಲ್ಲಿ ಅಬಕಾರಿ ಇಲಾಖೆ/ಪೋಲೀಸ್ ಇಲಾಖೆಯವರು ಸೇರಿಕೊಂಡು ದೌರ್ಜನ್ಯ ಮಾಡುತ್ತಾರೆ. ಈ ಎರಡು ಇಲಾಖೆಯವರಿಗೆ ಲಂಚದ ಹಣ ಸಂಪಾದನೆ ಮಾಡಲು ಇದೊಂದು ಉತ್ತಮ ಅವಕಾಶ.

ಉತ್ತರ ಕರ್ನಾಟಕದ ಲಂಬಾಣಿ ಸಮುದಾಯಗಳು ಅಲ್ಲಲ್ಲಿ ತಯಾರಿಸುತ್ತಿರುವ ಭಟ್ಟಿ ಸಾರಾಯಿ ಕುಡಿದು ಸತ್ತ ಉದಾಹರಣೆಗಳು ಬಲು ವಿರಳ. ಇವರಿಗೆ ಜೀವನ ಸಾಗಿಸಲು ಪರ್ಯಾಯ ಮಾರ್ಗಗಳಿಲ್ಲ. ಭೂಮಿ ಇಲ್ಲ. ಬೇರೆ ಉದ್ಯೋಗ ಇಲ್ಲ. 'ಜೀವನ ನಿರ್ವಹಣೆಗೆ ನಮಗೆ ಉದ್ಯೋಗ ಕೊಡಿ ಇಲ್ಲವೆ ಸಾರಾಯಿ ತಯಾರಿಸಿ ಮಾರಾಟ ಮಾಡಲು ನಮಗೆ ಲೈಸನ್ಸ್ ಕೊಡಿ' ಎಂದು ಇವರು ಕೇಳುತ್ತಿದ್ದಾರೆ.

ಕೊಡಗಿನ ಕೂರ್ಗಿಗಳು ತಮ್ಮ ಮನೆಗಳಲ್ಲಿ ತಮಗೆ ಬೇಕಾಗುವಷ್ಟು ಸಾರಾಯಿಯನ್ನು ಅವರದ್ದೇ ಆದ ವಿಧಾನದಲ್ಲಿ ತಯಾರಿಸಿ ಕುಡಿಯುತ್ತಾರೆ. ಇಂತಹ ಪರಂಪರಾಗತ ವಿಧಾನಗಳನ್ನು ಪರಿಷ್ಕರಿಸಿ, ಆರೋಗ್ಯಕರವಾದ ಮದ್ಯವನ್ನು ಅಗ್ಗದ ದರಗಳಲ್ಲಿ ಬಡವರಿಗೆ ಒದಗಿಸಲು ಸರ್ಕಾರ ಅನುಮತಿ ನೀಡುವುದು ಅಗತ್ಯವಿದೆ. ಸರ್ಕಾರಿ ಸಾರಾಯಿ ನಿಷೇಧ ಮಾಡುವ ಮೂಲಕ ಫ್ಯಾಕ್ಟರಿಯಲ್ಲಿ ತಯಾರಾಗುವ ದುಬಾರಿ ಐಎಂಎಲ್‌ಅನ್ನು ಬಡ ಜನ ಅವಲಂಬಿಸುವಂತೆ ಮಾಡುವುದಕ್ಕಿಂತ ಮದ್ಯ ತಯಾರಿಸುವ ಸಾಂಪ್ರದಾಯಿಕ ವಿಧಾನಗಳನ್ನು ಪರಿಷ್ಕರಿಸಿ, ಅದನ್ನು ತಯಾರಿಸುವ ಸಮುದಾಯಗಳಿಗೆ ಅಗತ್ಯ ಲೈಸನ್ಸ್ ಕೊಡುವುದು ಸೂಕ್ತವಾಗಿವೆ. ಅದರಂತೆಯೇ ನೀರಾ, ಶೇಂದಿ ಮೊದಲಾದವುಗಳನ್ನು ಉತ್ಪಾದಿಸಲು ರೈತರ ಮೇಲೆ ಹಾಕಲಾಗಿರುವ ಪ್ರತಿಬಂಧವನ್ನು ತೆಗೆಯುವುದು ಆಗಬೇಕಾಗಿದೆ. ಹೀಗೊಂದು ಹೊಸ ಜನಪರ ಅಬ್ಕಾರಿ ನೀತಿ ರೂಪಿಸಿ ಜಾರಿ ಮಾಡುವುದು ಆಗಬೇಕಾಗಿದೆ.

○ ನಿತ್ಯಾನಂದಸ್ವಾಮಿ

ಮುಂದೇನು ಮಾಡಬೇಕೂಂತಿದೀರ?

ವಿಧಾನ ಸಭೆ ಚುನಾವಣೆಗೆ ನಿಂತಿದ್ದ ಸನ್ಮಾನ್ಯ ಶ್ರೀ ಹುರಿಯಾಳು ಅವರು ತಲೆ ಮೇಲೆ ಕೈ ಹೊತ್ತು ಕುಳಿತಿದ್ದರು.

'ಯಾಕ್ರೀ ಸ್ವಾಮಿ ಹೀಗೆ ಕೂತಿದೀರ? ' ಅಂತ ಕೇಳಿದೆ.

'ಏನಪ್ಪ ಹಿಂಗೆ ಕೇಳ್ತೀಯ? ಹಾಕಿದ್ದ ಬಂಡವಾಳ ಎಲ್ಲ ಕೊಚ್ಚಿಕೊಂಡು ಹೋಯಿತು' ಅಂದರು.

'ಅಲ್ರೀ, ಬಂಡವಾಳ ಎಲ್ಲಿ ಹಾಕಿದ್ರೀ? ಷೇರು ಪೇಟೇಲಾ?' ಎಂದು ಕೇಳಿದೆ.

'ಏನಪ್ಪ ನಿನಗೆ ಒಂದೂ ಅರ್ಥ ಆಗಲ್ಲ. ಎಲ್ಲ ಬಿಡಿಸಿ ಬಿಡಿಸಿ ಹೇಳಬೇಕು. ಎಲೆಕ್ಷನ್‌ಗೆ ನಿಂತಿದ್ದು ಬಂಡವಾಳ ಹಾಕಿದಂಗೆ ಅಲ್ವೇನಪಾ?' ಎಂದು ಕೇಳಿದರು ಶ್ರೀ ಹುರಿಯಾಳು ಅವರು.

'ಅಲ್ರೀ, ಹುರಿಯಾಳು ಅವರೇ, ನಿಮ್ಮ ಸೇವೆ ಮಾಡಲು ಅವಕಾಶ ಕೊಡಿ ಅಂತ ಕೈ ಮುಗಿದು ಜನಗಳನ್ನ ಬೇಡಿಕೋತಿದ್ರಲ್ರೀ, ನೀವು ಎಲೆಕ್ಷನ್ನಿಗೆ ನಿಂತಿದ್ದು ಸಮಾಜಸೇವೆ ಮಾಡೋಕಲ್ವೇನ್ರೀ?' ಎಂದೆ.


'ಸುಮ್ನಿರಪ್ಪ, ಏನೇನೋ ವದರಬೇಡ. ಸಮಾಜಸೇವೆ, ವಿಜ್ಞಾನಸೇವೆ, ಗಣಿತಸೇವೆ ಏನು ಸುಡುಗಾಡೂ ಇಲ್ಲ. ಈ ವ್ಯವಾರದ ಬದಲು ಇಷ್ಟೇ ಬಂಡವಾಳ ಹಾಕಿ ಒಂದು ಲೇಔಟ್ ಮಾಡಿದ್ರೆ, ಒಳ್ಳೆ ದುಡ್ಡಾಗದು' ಎಂದರು ಶ್ರೀ ಹುರಿಯಾಳು.

'ಅಂದರೆ ನೀವು ಎಲೆಕ್ಷನ್ನಿಗೆ ನಿಂತಿದ್ದು ವ್ಯವಹಾರ ಅನ್ರೀ' ಎಂದೆ.

'ಮತ್ತೆ ಮತ್ತೆ ಅದೇ ಕೇಳ್ತೀಯಲ್ಲೋ ತಮ್ಮ'

'ಅಲ್ರೀ ಹುರಿಯಾಳು ಅವ್ರೇ, ಇದು ಹೇಗೆ ಅಂತಾನೇ ಅರ್ಥ ಆಗಲಿಲ್ಲ, ಅದಕ್ಕೇ ಕೇಳಿದೆ'.

'ಈಗ ನೋಡು, ಲೇಔಟು ಕೆಲಸ ಮಾಡಿಸೋಕೆ ಆ ಶಾಸಕರ ಮರ್ಜಿ ಹಿಡಿಬೇಕು, ಅವರಿಗೂ ಚನ್ನಾಗಿ ತಿನ್ನಿಸಬೇಕು. ಅದರ ಬದಲು ನಾವೇ ಎಂಎಲ್ಎ ಆಗಿಬಿಟ್ರೆ ಅವರಿಗೆ ತಿನ್ನಿಸೋ ಖರ್ಚು, ಸಮಯ ಎಲ್ಲ ಕಡಿಮೆ ಆಗಿ ಲಾಭ ಜಾಸ್ತಿ ಆಗುತ್ತಿತ್ತಾ?.'



'ಹೌದುರೀ, ಚೂರು ಚೂರು ಅರ್ಥ ಆಗತಾ ಇದೆ, ಆದರೆ, ಈ ಬಾರಿ ಎಲೆಕ್ಷನ್ ಕಮೀಷನ್ನು ಎಲ್ಲಾ ಭಾಳ ಸ್ಟ್ರಿಕ್ಟ್ ಮಾಡಿ ನಿಮಗೆ ಖರ್ಚು ಕಡಿಮೆ ಆಗಿರಬೇಕಲ್ವೇ?'.

'ಕಡಿಮೇನೂ ಇಲ್ಲ, ಏನೂ ಇಲ್ಲ, ಅವರ ಕಣ್ಣು ತಪ್ಪಿಸೋಕೆ ಹೋಗಿ ಇನ್ನೂ ಜಾಸ್ತೀನೇ ಆಗಿದೆ.'

'ಅದು ಹೇಗ್ರೀ?'

'ನಿನಗೆ ಏನೂ ಅರ್ಥ ಆಗಲ್ಲ ಎಲ್ಲ ಬಿಡಿಸಿ ಬಿಡಿಸೀ ಹೇಳಬೇಕು'.

'ಇರಲಿ ಹೇಳ್ರೀ ಸ್ವಲ್ಪ ನಾವೂ ತಿಳ್ಕಳಣ.'

'ನೋಡಪ್ಪ ಖರ್ಚು ಕಡಿಮೆ ಹೇಗಾಗುತ್ತೇ? ಈ ಬಾರಿ ಎಲ್ಲಾ ಪಕ್ಷದ ಟಿಕೇಟಿನ ರೇಟೂ ಸಿಕ್ಕಾಪಟ್ಟೆ ಏರಿತ್ತು. ನಾನು ಟಿಕೇಟು ಕೊಂಡುಕೊಳ್ಳೋಕೆ ಕೊಟ್ಟಷ್ಟು ಹಣದಲ್ಲಿ ಹಿಂದೆ ಅಭ್ಯರ್ಥಿಗಳ ಪೂರಾ ಖರ್ಚು ಕಳೀತಿತ್ತು' ಅಂದರು.

'ಆದರೆ, ಆಮೇಲಿನ ಖರ್ಚು ಕಡಿಮೆ ಆಗಿರಬೇಕಲ್ಲ? ಪೋಸ್ಟರ್ರು, ಬ್ಯಾನರ್ರು, ಏನಿಲ್ಲ. ಹಣ ಹೆಂಡ ಸೀರೆ ಎಲ್ಲ ಪೋಲೀಸಿನೋರು ಹಿಡಿದು ಹಾಕತಾ ಇದ್ರಲ್ಲ, ಹಾಗಾಗಿ ಅದರ ಖರ್ಚು ಕಡಿಮೆ ಆಗಿರಬೇಕಲ್ಲ?'

'ಅದಕ್ಕೇ ನಿನಗೆ ಏನೂ ಗೊತ್ತಿಲ್ಲದ ದಡ್ಡ ಅನ್ನೋದು, ಎಲೆಕ್ಷನ್ ಕಮೀಷನ್ನೋರು ಸ್ಟ್ರಿಕ್ಟ್ ಮಾಡಿದ್ರಿಂದ ನಮ್ಮ ಖರ್ಚು ಹತ್ತು ಪರಸೆಂಟು ಜಾಸ್ತಿ ಆಯ್ತು'.

'ಅದು ಹ್ಯಾಗ್ರೀ ಹುರಿಯಾಳು ಅವರೇ ಹತ್ತು ಪರಸೆಂಟು ಅಂತ ಕರೆಕ್ಟಾಗಿ ಹೇಳ್ತೀರ?'

'ಹ್ಯಾಗೆ ಅಂದ್ರೆ, ಹತ್ತು ಪರಸೆಂಟು ಐಟಂಗಳನ್ನು ಕಳಿಸಿ ನಾವೇ ಪೋಲೀಸರಿಗೆ ಹೇಳಿಕೊಡತಿದ್ವಿ. ಅದನ್ನು ಅವರು ಹಿಡಕೊಂಡು ಖುಷಿಯಾಗಿ, ಅವರು ಪತ್ರಿಕಾಗೋಷ್ಠಿ ಮಾಡಕೋತಿರುವಾಗ ನಾವು ಬಾಕಿ ಐಟಂಗಳನ್ನ ವಿಲೇವಾರಿ ಮಾಡಬೇಕಾಗಿತ್ತು.'

'ಎಲಾ, ಎಲಾ ಹೀಗೂ ಉಂಟೇನ್ರೀ? ಆದ್ರೂ ಸಮೀಕ್ಷೆಗಳೆಲ್ಲ ನೀವು ಮತ್ತೆ ನಿಮ್ಮ ಪಕ್ಷ ಗೆಲ್ಲುತ್ತೆ ಅಂತಾನೇ ಹೇಳುತಿದ್ದವಲ್ರೀ ಹುರಿಯಾಳು ಅವರೇ ಆದ್ರೂ ಯಾಕೆ ಹೀಗಾಯ್ತು?.'

'ಥೂ, ಸಮೀಕ್ಷೆ ಮನೆ ಹಾಳಾಯ್ತು, ಅದಕ್ಕಿಂತ ಗಿಣಿ ಶಾಸ್ತ್ರದೋರೇ ಎಷ್ಟೋ ವಾಸಿ'.

'ಯಾಕ್ರೀ ಹೀಗಂತೀರ? ಇದನ್ನೂ ಸ್ವಲ್ಪ ಬಿಡಿಸಿ ಹೇಳ್ರೀ'.

'ಅಲ್ಲಪಾ ಗಿಣಿ ಶಾಸ್ತ್ರದೋರಿಗೆ ನೂರು ರೂಪಾಯಿ ಏನಾದ್ರೂ ಕೊಟ್ರೆ, ಖುಷಿಯಾಗಿ ಬಿಡ್ತಾನೆ. ಆದ್ರೆ ಈ ಸಮೀಕ್ಷೆಯೋರು ಕೋಟ್ಯಾಂತರ ರೂಪಾಯಿ ಕಿತ್ತು ಬಿಟ್ರು ಕಣಪ್ಪ.'

'ಯಾಕ್ರೀ, ಹುರಿಯಾಳು ಅವ್ರೇ, ಸೋತಬಿಟ್ರೀ ಅಂತ ಏನೇನೋ ಹೇಳ್ತಿದೀರ?'

'ಸುಮ್ ಸಮ್ನೆ ಯಾಕಪ್ಪಾ ಸುಳ್ಳು ಹೇಳಲಿ? ಅದೂ ಸೋತಮೇಲೆ!? ನಡೆದ ವಿಚಾರ ಕಣಪ್ಪ ಇದು, ಆ ಪಕ್ಷ ಗೆಲ್ಲುತ್ತೆ ಅಂತ ಒಂದು ಸಮೀಕ್ಷೆ ಹೇಳಿದ್ರೆ ಮುಂದಿನ ಹಂತದಲ್ಲಿ ಜನ ಆ ಕಡೇನೇ ಜಾಸ್ತಿ ವಾಲೋ ಅವಕಾಶ ಇರುತ್ತೆ. ಅದಕ್ಕೇ ಸಮೀಕ್ಷೆಗಳ ಮೇಲೆ ಪ್ರಭಾವ ಬೀರೋದು ಹೇಗೆ ಅನ್ನೋದಕ್ಕೆ ತುಂಬಾ ಖರ್ಚಾಗಿ ಹೋಯ್ತು. ಇವೆಲ್ಲ ಹೇಗೆ ಗೊತ್ತಾಗುತ್ತೆ ನಿಂಗೆ?'

'ಇಲ್ಲ ಬಿಡ್ರೀ, ಖಂಡಿತ ಗೊತ್ತಾಗಲ್ಲ. ಈ ರಾಜಕೀಯ, ಈ ರಾಜಕೀಯ ವ್ಯವಹಾರ ನಮ್ಮ ತಲೀಗೆ ಹೋಗಂಗಿಲ್ಲ. ಹೋಗ್ಲಿ ಬಿಡ್ರೀ, ಮುಂದೇನು ಮಾಡಬೇಕಂತಿದೀರಿ?'

'ಬರೀ ಈ ಲೇಔಟು ಮಾಡಕೊಂಡಿದ್ರೆ, ಸಾಕಾಗಂಗಿಲ್ಲಪಾ ತಮ್ಮ, ಒಂದೆರಡು ಗಣಿ ತಗೋಬೇಕು. ಆ ಮೇಲೆ ಈ ದಂಧೆಗಿಳಿಬೇಕು.'

ಹೆಂಗೂ ಗಣಿ ತಂತ್ರ ಆಧಾರಿತ ಸರ್ಕಾರವೇ ಬರ್ತಿದೆಯಲ್ಲಾ ರಾಜ್ಯದಲ್ಲಿ!

"ಇಟ್ಟಿಗೆ ಭಟ್ಟಿಯಲ್ಲಿ ಕೆಲಸ ಮಾಡ್ತೇವೆ. ಗಂಡ ಅಲ್ಲಿ, ಇಲ್ಲಿ ಕೂಲಿಗೆ ಹೋಗ್ತಾನೆ. ನಿನ್ನೆ ಸಂಜೆ ಮನೆಗೆ ಬರುವಾಗ ಕುಡಿದು ಬಂದ. ರಾತ್ರಿಯಲ್ಲಿ ಹೊಟ್ಟೆ ಉರಿ ಎಂದು ಒದ್ದಾಡುತ್ತಿದ್ದ, ಬೆಳಿಗ್ಗೆ ಇಲ್ಲಿಗೆ ಕರ್ಕೊಂಬಂದೆ. ನಮ್ಮೂರ್ನಾಗೆ ಯಾವ ಎಗ್ಲೂ ಇಲ್ದೇ ಸಾರಾಯಿ ಸಿಗ್ತಾನೇ ಇದೆ. ನಾರಣಪ್ಪ, ಮುನಿಯಮ್ಮ ಇವರೆಲ್ಲ ವರ್ಷವಿಡೀ ನಮಗೆ ಸಾರಾಯಿ ಮಾರಾಟ ಮಾಡ್ತಾರ್". ಇದು ಆನೇಕಲ್ಲಿನಿಂದ ಬಂದು ಬೌರಿಂಗ್ ಆಸ್ಪತ್ರೆಯಲ್ಲಿ ದಾಖಲಾಗಿದ್ದ ಸ್ವಲ್ಪ ಉತ್ತಮ ಸ್ಥಿತಿಯಲ್ಲಿರುವ ಗಂಡ, ಹೆಂಡತಿಯರ ಮಾತು.

ಅವ್ವ ಹೊಟ್ಟೆಯಲ್ಲಿ ಬೆಂಕಿ ಹಾಕಿದ ಹಾಗಿದೆ. ಇನ್ನು ಮೇಲೆ ಪುಕ್ಕಟ್ಟೆ ಕೊಟ್ರೂ ನಾನು ಕುಡಿಯೋದಿಲ್ಲ. ಇದು ಮೊದಲ ದಿನ ಬೌರಿಂಗ್ ಆಸ್ಪತ್ರೆಗೆ ಭೇಟಿ ನೀಡಿದಾಗ ತೀವ್ರ ಸ್ಥಿತಿಯಲ್ಲಿದ್ದ ವ್ಯಕ್ತಿ ಆಡಿದ ಮಾತು. ಆದರೆ ವಾರನೇ ದಿನ ಸ್ವಲ್ಪ ಚೇತರಿಸಿಕೊಂಡ ಸ್ಥಿತಿಯಲ್ಲಿದ್ದಾಗ ಮತ್ತೊಮ್ಮೆ ಮಾತನಾಡಿಸಿದರೆ ಸರ್ಕಾರ ತಯಾರಿಸೋ ಸಾರಾಯಿ ಕುಡಿತೀನಿ. ಕಳ್ಳಭಟ್ಟಿ ಕುಡಿಯೋದಿಲ್ಲ ಇನ್ಮೇಲೆ ಎಂದನಾ ಭೂಪ!

ಇನ್ನೂರಕ್ಕೂ ಹೆಚ್ಚು ಬಡ ಜನರನ್ನು ಬಲಿತೆಗೆದುಕೊಂಡಿರುವ ಅಕ್ರಮ ಮದ್ಯದ ದುಷ್ಟ ದಂಧೆಗೆ ಯಾರು ಹೊಣೆ? ಕೆಲವು ದಂಧೆಕೋರರನ್ನು ಮಾತ್ರ ಹೊಣೆ ಮಾಡಿ ಜಾರಿಕೊಳ್ಳಬಹುದೇ?

ಅಕ್ರಮ ಮದ್ಯದ ದಂಧೆಗೆ ಬಡವರ ಬಲಿ

ಕೆ.ಎಸ್. ವಿಮಲ

ಈ ಮೇಲಿನ ಎರಡೂ ಅಭಿಪ್ರಾಯಗಳು ಕಳೆದ 18 ಮೇ ದಿನದಂದು ವಿಕಟಾಟ್ಟಹಾಸ ಮೆರೆದ ಅಕ್ರಮ ಮದ್ಯದ ರುದ್ರ ನರ್ತನಕ್ಕೆ ಬಲಿಯಾಗಿಯೂ ಬದುಕುಳಿದ ಇಬ್ಬರು ವ್ಯಕ್ತಿಗಳದು. ಇಲ್ಲಿರುವ ಒಂದು ಸಣ್ಣ ಒಳದನಿಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಕಾಣುವ ಸತ್ಯ ಕುಡಿತದಂತಹ ದುಃಶ್ಚಟ ಕಾನೂನಿನ ನಿಷೇಧದಿಂದ ತೊಲಗಲಾರದು.

ಕರ್ನಾಟಕ ರಾಜ್ಯಕ್ಕಿರುವಂತೆ ಇಲ್ಲಿನ ಅಕ್ರಮ ಮದ್ಯದ ದುರಂತಗಳಿಗೂ ಇತಿಹಾಸವಿದೆ. 1981ರಲ್ಲಿ ರಾಜಧಾನಿ ಬೆಂಗಳೂರಿನಲ್ಲಿ ನಡೆದ ದುರಂತದಲ್ಲಿ 337 ಮಂದಿ ಸತ್ತಿದ್ದರು. ಹಾಗೆಯೇ ಮೈಸೂರಿನಲ್ಲಿಯೂ ದುರ್ಘಟನೆ ನಡೆದು 36 ಜನ ಸತ್ತಿದ್ದರು. 2005ರಲ್ಲಿ ನೆಲಮಂಗಲದಲ್ಲಿ, ಹಾಸನದಲ್ಲಿ ಸಕಲೇಶಪುರದಲ್ಲಿ 62 ಜನ ಸತ್ತಿದ್ದರು. 2006ರಲ್ಲಿ ಶ್ರೀನಿವಾಸಪುರದಲ್ಲಿ 20.



ಹೀಗೆ ಸಾವಿನ ಸರಮಾಲೆಯೇ ಸಂಭವಿಸುತ್ತಿದೆ ಆದರೆ ಅಕ್ರಮ ಮದ್ಯ ತಯಾರಿಕೆ ಅವ್ಯಾಹತವಾಗಿ ನಡೆಯುತ್ತಲೇ ಇದೆ. ಸಾರಾಯಿ ಸುಲಭವಾಗಿ ದೊರೆಯುತ್ತಿದ್ದಾಗಲೇ ದಂಧೆ ನಡೆಸುತ್ತಿದ್ದ ಜನರಿಗೆ ಈಗಿರುವ ನಿಷೇಧ ಮಲಗುವವನಿಗೆ ಹಾಸಿಗೆ ಹಾಸಿ ಕೊಟ್ಟ ಹಾಗೆ ಆಯಿತು. ಕೂಲಿ ಮಾಡಿ ಬದುಕುವ ಬಡಜನತೆ ಅಕ್ರಮ ಮದ್ಯ ಕುಡಿಮಾಗಿದ್ದುವುದರಿಂದ ಘಟನೆ ನಡೆದ ಎರಡು ದಿನ ದೊಡ್ಡ ಸುದ್ದಿ. ಕ್ರಮೇಣ ಎಲ್ಲ ಸುದ್ದಿಗಳಂತೆ ಈ ಸುದ್ದಿ ಕೂಡ ಹಳಸಲು. ಅಥವಾ ಇದನ್ನು ಮೀರಿಸುವಂತಹ ಇನ್ನೊಂದು ಸುದ್ದಿ ಘಟಿಸಿರುತ್ತದೆ. ಅಷ್ಟೇ ಅಲ್ಲ, ಕುಡಿಯುವವರು ಬಡವರೇ ಹೊರತು ಶ್ರೀಮಂತರಲ್ಲ ಮತ್ತು ದಂಧೆಗೆ ಹಿಂದಿನಿಂದ ಬೆಂಬಲ ನೀಡಿ ಆದರಲ್ಲಿಯೂ ಕಮಿಷನ್ ಗಿಟ್ಟಿಸುವ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು, ರಾಜಕಾರಣಿಗಳು ಬಡವರಲ್ಲವಲ್ಲ. ಹಾಗಾಗಿ ಎಷ್ಟೇ ಜನ ಸತ್ತರೂ ಅದರಿಂದ ಬಚಾಯಿಸಿಕೊಳ್ಳುವ ತಾಕತ್ತು ಖಂಡಿತ ದಂಧೆ ಮಾಡುವವರಿಗಿದೆ. ರಾಜಕಾರಣಿಗಳ ಶ್ರೀ ರಕ್ಷೆ ಅವರಿಗಿರುವುದೂ ಕೂಡ ಬಹಳ ಸಂದರ್ಭಗಳಲ್ಲಿ ಆಕಸ್ಮಾತ್ ನಿಷ್ಠಾವಂತ ಅಧಿಕಾರಿಗಳಿದ್ದರೂ ಇಂತಹ ಖದೀಮರನ್ನು ನಿಗ್ರಹಿಸಲಾಗುವುದಿಲ್ಲ ಎಂಬ ಅಪರೂಪದ ಮಾತು ದುರಂತದ ಸುತ್ತ ಒಂದು ಗಸ್ತು ಹೊಡೆಯುವಾಗ ಸಣ್ಣದನಿಯಲ್ಲಿ ಕೇಳಿಬಂತು.



ಇಂತಹ ದುರಂತಗಳು ನಡೆದಾಗೆಲ್ಲ ಒಂದು ಆಯೋಗ, ತನಿಖಾ ಸಮಿತಿ ಇತ್ಯಾದಿ ನಾಟಕಗಳು ಸರ್ಕಾರದಿಂದ ನಡೆಯುತ್ತವೆ. ಅಂತಹ ಒಂದು ಆಯೋಗ ನ್ಯಾಯಮೂರ್ತಿ ದೇಸಾಯಿಯವರ ನೇತೃತ್ವದಲ್ಲಿ 1981ರ ಅಕ್ರಮ ಮದ್ಯ ದುರಂತದ ತನಿಖೆಗೆ ನೇಮಕಗೊಂಡ ಆಯೋಗ ತನಿಖೆ ನಡೆಸಿ ಒಂದು ಸಮಗ್ರ ವರದಿ ನೀಡಿತ್ತು. ಆದರೆ ವರದಿಯನ್ನು ಜಾರಿ ಮಾಡುವ ಯಾವುದೇ ಉದ್ದೇಶ ಸರ್ಕಾರಕ್ಕಿಲ್ಲದ ಕಾರಣದಿಂದ ಆ ವರದಿ

ಪುಟ 12ಕ್ಕೆ

ರೋಷನ್ ನಗರ ಎಂಬ ಆ ಕೊಂಪೆಯಲ್ಲಿ...

ಆರ್.ರಾಮಕೃಷ್ಣ

ಆ ರಸ್ತೆಯಲ್ಲಿ ನಾವು ನಡೆದುಕೊಂಡು ಹೋಗುತ್ತಾ ಇದ್ದರೆ ಇದೇನು ಇದು ಬೆಂಗಳೂರೇನಾ? ಭಾರತ ದೇಶವೇನಾ ಅಥವಾ ಯಾವುದಾದರೂ ಭಾರತಕ್ಕಿಂತ ಭಾರಿ ಹಿಂದುಳಿದ ಯಾವುದಾದರೂ ಆಫ್ರಿಕಾದ ದೇಶಕ್ಕೇನಾದರೂ ದಾರಿ ತಪ್ಪಿ ಬಂದೇವಾ ಅಂತ ಅನುಮಾನ ಬರುತ್ತಿತ್ತು.


ಟಾರು ಕಾಣದೇ ಎಷ್ಟು ದಶಕಗಳು ಕಳೆದುಹೋಗಿದೆಯೋ ಆ ರಸ್ತೆಗೆ. ಅದು ದೇವರ ಜೀವನ ಹಳ್ಳಿಯ 'ಮುಖ್ಯರಸ್ತೆ' ಮೋದಿ ರಸ್ತೆ.

ಆ ರಸ್ತೆಯಲ್ಲಿ ಹಾಗೇ ಸುಮಾರು ಒಂದು ಕಿಲೋ ಮೀಟರ್‌ಗಿಂತ ಹೆಚ್ಚು ದೂರ ನಡೆದುಕೊಂಡು ಹೋಗಿ ಬಲಕ್ಕೆ ತಿರುಗಿದರೆ ಆಗ ನಮಗೆ ಸಿಕ್ಕಿದ್ದೇ ರೋಷನ್ ನಗರ. 'ರೋಷನ್ ನಗರ' ಅಂತೇನೋ ಹೆಸರಿದೆ. ಆದರೆ ಅದನ್ನೊಂದು ಕೊಂಪೆ ಅಂತಲೇ ಕರೆಯಬೇಕು.

ಆ ಸ್ಲಮ್ಮಿನ ದಾರಿಯಲ್ಲಿ ನಡೆದುಕೊಂಡು ಹೋಗುತ್ತಿದ್ದರೆ ಎಡ ಬಲಗಳಲ್ಲಿದ್ದವುಗಳನ್ನು ಅಲ್ಲಿ ಜನ ವಾಸ ಮಾಡುತ್ತಿರುವುದರಿಂದ ಮನೆ ಎನ್ನಬೇಕು. ಬಹುತೇಕ ಯಾವ ಮನೆಗೂ ಗೋಡೆಗಳಿಲ್ಲ. ಹಳೆಯ ಮುರುಕಲು ಸಿಮೆಂಟ್ ಶೀಟ್ (ಎಸ್ಬೆಸ್ಟೋ - ಕಲ್ನಾರಿನ ಶೀಟುಗಳು) ಯಾವುದೋ ಕಾರ್ಖಾನೆ, ಗೋಡನ್ನು ಅಥವಾ ಮತ್ಯಾವುದಕ್ಕೋ ಬಳಸಿದ್ದ ಶೀಟ್‌ಗಳು ಇಲ್ಲಿ ಮನೆಯ ಗೋಡೆಗಳಾಗಿದ್ದವು.

ಆ ಜಾಗ ಮೊಧಲು ಕೆರೆಯ ಅಂಗಳವಾಗಿತ್ತಂತೆ. ಅಲ್ಲಿಗೆ ಬೆಂಗಳೂರಿನ ಕಸ, ಕೆಡವಲಾದ ಕಟ್ಟಡಗಳ ಕಲ್ಲು ಮಣ್ಣು ತಂದು ಸುರಿದು ಅಲ್ಲೊಂದು ಬಯಲಾಗಿದೆ. ಈಗಲೂ ಆ ಬಯಲಿನ ಹಿಂದೆ ಭಾರಿ ಬೆಟ್ಟದಂತಹ ದೊಡ್ಡ ಕಸದ ರಾಶಿ 'ದೈತ್ಯ ತಿಪ್ಪೆ' ಹಾಗೆ ಇದೆ. ಪ್ರದೇಶವೆಲ್ಲಾ ಸುಟ್ಟ ವಾಸನೆ. ಮಟ್ಟ ಮಾಡಲಾದ ಆ ಮಣ್ಣ ರಾಶಿಯ ಮೇಲೆ ಈಗ ಗುಡಿಸಲುಗಳು ಎದ್ದಿವೆ. ಇಂತಹ ಮುರುಕು ಮನೆಗಳಲ್ಲಿ ವಾಸಿಸುವವರೆಲ್ಲಾ ಬಹುತೇಕ ಆಟೋ ಚಾಲಕರು ಮತ್ತು ಹೆಚ್ಚಿನವರು ಮುಸ್ಲಿಂ ಸಮುದಾಯಕ್ಕೆ ಸೇರಿದವರು. ತಮಿಳರೂ ಇದ್ದಾರೆ.

ಮನೆಯಲ್ಲಿ ಹೆಂಗಸರು ಅಗರಬತ್ತಿ ಹೊಸೆಯುವುದು ಇತ್ಯಾದಿ ಏನೇನೋ ಕೆಲಸ ಮಾಡುತ್ತಾರೆ. ಕಟ್ಟಡ ಕಾರ್ಮಿಕರು, ನೆರೆಯ ಪ್ರದೇಶಗಳಲ್ಲಿ ಕಸ ಮುಸುರೆ. ಮಾಡುವವರು ಇದ್ದಾರೆ. ಹಳೇ ಕಟ್ಟಡ ಕಟಕಿ ಬಾಗಿಲುಗಳನ್ನು ರಿಪೇರಿ ಮಾಡಿ ಮಾರುವವರೂ ಇದ್ದಾರೆ.



ಎಲ್ಲರೂ ದುಡಿಯುವ ಜನರೇ. ಕಡುಬಡವರು ಬಾರ್, ವೈನ್, ಸ್ಟೋರುಗಳಲ್ಲಿ ದುಬಾರಿ ಮದ್ಯ ಕೊಳ್ಳಲಾರದವರು. ಕಡಿಮೆ ಬೆಲೆಯ ಮದ್ಯವನ್ನು ಕುಡಿದಿದ್ದಾರೆ.

ಈ ಮನೆಗಳ ಹಿಂಭಾಗದಲ್ಲೆ ಒಂದು ಗುಡಿಸಲಿನಲ್ಲಿ ಮೊದಲು ಸಾರಾಯಿ ಮಾರುತ್ತಿದ್ದರಂತೆ. ಅಧಿಕೃತ ಸಾರಾಯಿಯ ಜೊತೆಗೆ, ಅನಧಿಕೃತ ಕಡಿಮೆ ಬೆಲೆಯ ಕಲಬೆರಕೆ ಸಾರಾಯನ್ನು ಮಾರುತ್ತಿದ್ದರಂತೆ. ಸಾರಾಯಿ ನಿಂತ ಮೇಲೆ ಕಲಬೆರಕೆ ಸಾರಾಯಿ ವ್ಯಾಪಾರವೇ ಜೋರಾಗಿದೆ.

ಈ ಪ್ರದೇಶದಲ್ಲಿ ಬಡ ಜನರಿಗೆ ಗುಡಿಸಲು ಹಾಕಿಕೊಳ್ಳಲು ಸರ್ಕಾರಿ ಜಾಗ ಸಿಕ್ಕಿದೆ ಅಂತ ಬಹಳ ಸಂತೋಷ ಪಡಬೇಕಂತೇನಿಲ್ಲ. ಮನೆಯವರನ್ನು ಸ್ವಲ್ಪ ಪಕ್ಕಕ್ಕೆ ಕರೆದು ಮೆಲ್ಲಗೆ ಮಾತಾಡಿದರೆ ಸತ್ಯ ತಿಳಿಯುತ್ತದೆ. ಅಲ್ಲಿ ವಾಸಿಸುವವರೆಲ್ಲಾ ಹೆಚ್ಚಿನವರು ಬಾಡಿಗೆಗೆ ಇರುವವರು. 5ರಿಂದ 6 ಸಾವಿರ ಮುಂಗಡ ಹಣ, ತಿಂಗಳಿಗೆ 500 ರಿಂದ 600 ಬಾಡಿಗೆ ಕಕ್ಕಬೇಕು ಆ ಮುರುಕಲು ಗುಡಿಸಲಿಗೆ. ಗುಡಿಸಲುಗಳ ಮಾಲೀಕರು ಸಮೀಪದ ಪ್ರದೇಶಗಳಲ್ಲೆಲ್ಲೋ ಇದ್ದಾರೆ. ಇಲ್ಲಿ ಮಾಲೀಕರಿಗೆ ಒಬ್ಬೊಬ್ಬರಿಗೆ ಎರಡು, ನಾಲ್ಕು, ಇನ್ನೂ ಹೆಚ್ಚು ಮನೆಗಳಿರುವಂತೆ ಕಾಣುತ್ತದೆ. ಇದು ಸಮಸ್ಯೆಯ ಮತ್ತೊಂದು ಮುಖ.

ಆತ ಬಾಬು ಅಂತ. ವಯಸ್ಸು 42. ಆಟೋ ಚಾಲಕ. ಕಲಬೆರಕೆ ಸಾರಾಯಿ ಕುಡಿದು ಆತ ಪ್ರಾಣ ಬಿಟ್ಟಿದ್ದಾನೆ. ರೇಷ್ಮಾ (30) ಆತನ ಹೆಂಡತಿ. ಒಂದು ಗಂಡು ಮಗು, ಒಂದು ಹೆಣ್ಣು ಮಗು ಇದೆ. ಮನೆಯ ಹೆಂಗಸರು ಗಂಧದ ಕಡ್ಡಿ ಹೊಸೆಯುತ್ತಾರೆ. ಬಾಬುವಿನ ತಾಯಿ ಫರಿದಾ ವಿಧವೆ. ಲಾರಿ ಚಾಲಕನಾಗಿದ್ದ ಬಾಬುವಿನ ತಂದೆ ತೀರಿಕೊಂಡು ಎಷ್ಟೋ ವರ್ಷಗಳಾಗಿವೆ.

ಭಾನುವಾರ ಆಸ್ಪತ್ರೆಯಿಂದ ಸತ್ತ ದೇಹ ಹೊತ್ತು ತಂದವರು 50,000 ರೂ ಪರಿಹಾರ ಅಂತ ಕೊಟ್ಟಿದ್ದಾರೆ. ಸ್ಥಳೀಯ ಕೌನ್ಸಿಲರ್ 5 ಸಾವಿರ ಕೊಟ್ಟಿದ್ದಾರಂತೆ. ಕುಟುಂಬದ ಪ್ರಮುಖ ಆಧಾರ ಸ್ಥಂಭಗಳನ್ನು ಕಳೆದುಕೊಂಡ ಈ ಕುಟುಂಬದ ಭವಿಷ್ಯವೇನು. ಸಣ್ಣ ಮಕ್ಕಳ ಓದು ಅಥವಾ ಸಂತ್ರಸ್ತರಿಗೆ ಉದ್ಯೋಗ ಮುಂತಾದ ಆಸರೆಯ ಕತೆ ಏನು? ಯಾರು ಉತ್ತರಿಸು ವವರು. ಉತ್ತರಿಸಲು ಈಗ ಅಲ್ಲಿ ಯಾರೂ ಇಲ್ಲ ಸರ್ಕಾರದ ಪರವಾಗಿ.

ಆತನ ಹೆಸರು ಮೌಲಾ. ವಯಸ್ಸು 38. ವೃತ್ತಿ ಆಟೋ ಚಾಲನೆ. ಭಾನುವಾರ ರಾತ್ರಿ ಕುಡಿದದ್ದು ಸೋಮವಾರ ಜೀವಂತ ಇಲ್ಲ ಆತ. 2 ಹೆಣ್ಣು, 4 ಗಂಡು, ಒಟ್ಟು 6 ಜನ ಮಕ್ಕಳನ್ನು ಕಟ್ಟಿಕೊಂಡು ಹೆಂಡತಿ ಬದುಕಿನ ನೊಗಕ್ಕೆ ಹೆಗಲು ಕೊಡಬೇಕಿದೆ.

ಇದೊಂದೇ ಬಡಾವಣೆಯಲ್ಲಿ ಹತ್ತಾರು ಹೆಣಗಳು ಸಾಲು ಸಾಲು ಉರುಳಿದವು. ಬಾಬು ಹೆಂಡತಿ, ತಾಯಿ ಮೌಲಾನ ಹೆಂಡತಿ, ತಾಯಿ ಯಾರನ್ನಾದರೂ ನೋಡಿ, ಮುಖ ಬಾಡಿದೆ. ಆದರೆ ಕಣ್ಣೀರು ಖಾಲಿಯಾಗಿವೆ. ಈಗಾಗಲೇ ಅನುಭವಿಸಿದ ಬದುಕಿನ ಘೋರ ಸನ್ನಿವೇಶಗಳ ನಡುವೆ ಇದೂ ಒಂದು. ಒಳ್ಳೆಯದೆಂಬುದನ್ನೇ ಕಾಣದವರಿಗೆ - ಸುಖದ ಕನಸೇ ಇಲ್ಲದವರಿಗೆ ಇಂತಹ ದುರಂತ ಎಂತಹ ನೋವು ತಂದೀತು. ಇಲ್ಲೋ ಎಲ್ಲೋ ಆಡಲು ಹೋಗಿದ್ದಾನೆ ಎಂಬಂತೆ ಆ ಬಾಬುವಿನ ತಾಯಿ ಮಾತಾಡುತ್ತಾ ಕುಳಿತಿದ್ದರೆ ಬಡವರ ಬದುಕಿನ ಭೀಕರತೆಯ ಮತ್ತೊಂದು ಮುಖದ ದಿಗ್ದರ್ಶನವಾಗುತ್ತದೆ. ಥೀ ಎಂತಹ ಬದುಕು..! ಎಂತಹ ಸಾವು..! ಸಾವಿಗೂ ಬದುಕಿಗೂ ನಡುವಿನ ವ್ಯತ್ಯಾಸ ಇಷ್ಟೇನಾ?

ಆಳವಾದ ವಿಷಾದ ಮನಸಿನಲ್ಲಿ ಹಾಗೇ ಉಳಿದುಬಿಟ್ಟಿತು.

ಅಕ್ರಮ ಮದ್ಯದ ಜಾಲ ಹರಡಿದಲ್ಲೆಲ್ಲಾ ಸಾವಿನ ನರ್ತನ

ಈ ಅಕ್ರಮ ಮದ್ಯ ಜಾಲ ಬೆಂಗಳೂರು, ಕೋಲಾರ, ಹಾಸನ, ತಮಿಳುನಾಡಿನ ಕೃಷ್ಣಗಿರಿ ಎಲ್ಲೆಲ್ಲೂ ಬಡವರನ್ನು ಬಲಿತೆಗೆದುಕೊಂಡಿದೆ.

ಅಪ್ಪ

ದುಷ್ಟ-ಭ್ರಷ್ಟ ಅಬಕಾರಿ ಅಧಿಕಾರಿಗಳು, ಸಮಾಜಘಾತುಕರು, ಅಪರಾಧಿಗಳಿಂದ ಹಣ ಸುಲಿಗೆಗೆ ಯೂನಿಫಾರಂ ಹರಾಜಿಗಿಟ್ಟಿರುವ ಪೊಲೀಸ್ ಇಲಾಖೆ ಮತ್ತು ಗೂಂಡಾಗಳ ನೇತೃತ್ವದಲ್ಲಿ ರಾಜಾರೋಷವಾಗಿ ನಡೆಯುತ್ತಿರುವ ಅಕ್ರಮ ಮದ್ಯದ ದಂಧೆಗೆ ಸಮಗ್ರ ದೃಷ್ಟಿಕೋನ, ದೂರದೃಷ್ಟಿಯಿಲ್ಲದ, ಬದ್ಧತೆಯಿಲ್ಲದ ಸರ್ಕಾರದ ಅವೈಜ್ಞಾನಿಕ ನೀತಿಗೆ



ಬೆಂಗಳೂರಿನ ಮಹಾತ್ಮ ಗಾಂಧಿ ಪ್ರತಿಮೆ ಬಳಿ ಸಿಪಿಐ(ಎಂ)ನ ಪ್ರತಿಭಟನೆ

ಕೋಲಾರದ ನರಸಾಪುರ ಗ್ರಾಮವೊಂದರಲ್ಲೇ ಇದುವರೆಗೂ 12 ಮಂದಿ ಮೃತಪಟ್ಟಿದ್ದಾರೆ. ಮಾಲೂರು, ಬಂಗಾರಪೇಟೆ ಮತ್ತು ತಮಿಳುನಾಡಿನ ಪ್ರದೇಶಕ್ಕೆ ಸೀಮಿತವಾಗಿ ಲೆಕ್ಕಹಾಕಿದರೆ ಈ ಸಂಖ್ಯೆ ಮೂರು ಪಟ್ಟು ಹೆಚ್ಚಾಗುತ್ತದೆ. ಸಾಂಕ್ರಾಮಿಕ ರೋಗಕ್ಕೆ ತುತ್ತಾಗಿ ಕೋಳಿ ಫಾರಂನಲ್ಲಿ ಸಾಯುವ ಕೋಳಿಗಳಂತೆ ಜನರ ಸಾವನ್ನು ಕಾಣುವಂತಾಗಿದೆ. ಕೂಲಿ ಮಾಡಿದರೆ ಒಪ್ಪೊತ್ತು ಊಟ ಇಲ್ಲದಿದ್ದರೆ ಉಪವಾಸ ಎಂಬ ದೀನ ಪರಿಸ್ಥಿತಿಯಲ್ಲಿರುವ ಕಾರ್ಮಿಕರು ಈ ದುಷ್ಟ ಧನದಾಹಕ್ಕೆ ಬಲಿಯಾಗುತ್ತಿದ್ದಾರೆ.

ಮಾಹಿತಿ ಕೇಂದ್ರದಲ್ಲೇ ಮಾಹಿತಿ ಇಲ್ಲವೇ?

ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನಕ್ಕೆ ಬೆಂಗಳೂರು ಜಾಗತಿಕ ಕೇಂದ್ರವಿದ್ದಂತೆ ಅಕ್ರಮ ಮದ್ಯದ ದಂಧೆಗೆ ಹೊಸಕೋಟೆ ತಾಲೂಕಿನ ಬಯಲು ನರಸಾಪುರ, ಮೇಡಿ ತಂಬಿಹಳ್ಳಿ ಮತ್ತು ಕಟ್ಟಿಗೇನಹಳ್ಳಿ ಕೇಂದ್ರಗಳಾಗಿವೆ. ಬೆಂಗಳೂರು, ಕೋಲಾರ, ತಮಿಳುನಾಡು ಮತ್ತು ಆಂಧ್ರಪ್ರದೇಶದ ಹಲವು ಗಡಿ ಪ್ರದೇಶಗಳನ್ನು ಈ ಜಾಲ ವ್ಯಾಪಿಸಿದೆ. ಈ ಕುರಿತು ಪೊಲೀಸರು, ಅಬಕಾರಿ ಇಲಾಖೆ ಅಧಿಕಾರಿಗಳು, ಜನಪ್ರತಿನಿಧಿಗಳು ಮತ್ತಿತರ ಸರ್ಕಾರಿ ಇಲಾಖೆಗಳಿಗೆ ಮಾಹಿತಿ ಇಲ್ಲ ಎಂದರೆ ಅದಕ್ಕಿಂತಲೂ ದಡ್ಡತನ ಮತ್ತೊಂದಿಲ್ಲ. ಇವರೆಲ್ಲರ ಅಕ್ರಮ ಕೂಟದ ಪರಿಣಾಮವೇ ಈ ಮಾರಣಹೋಮ.

ಅಧಿಕೃತವಾಗಿ ಸಾರಾಯಿ ನಿಷೇಧ ಮಾಡುವುದಕ್ಕೆ ಮುನ್ನ ನರಸಾಪುರದಲ್ಲಿ ಪರವಾನಗಿ ಹೊಂದಿರುವ ಒಂದು ಅಂಗಡಿಯಲ್ಲಿ ಮಾತ್ರ ಅಕ್ರಮವಾಗಿ ಅಕ್ರಮ ಮದ್ಯ ಮಾರಾಟ ಮಾಡಲಾಗುತ್ತಿತ್ತು. ನಿಷೇಧದ ನಂತರ ಹಲವಾರು ಕಡೆ ಮಾರಾಟ ಶುರುವಾಯಿತು. ಲಕ್ಷ್ಮಿ ದೇವಮ್ಮ ಎಂಬ ಹೆಂಗಸು ತನ್ನ ಮಗ ಮಂಜುನಾಥನ ಮೂಲಕ ಅಕ್ರಮ ಮದ್ಯ ಮಾರಾಟ ದಂಧೆ ಮಾಡಿಸುತ್ತಿದ್ದಾರೆ. ಹತ್ತಾರು ವರ್ಷಗಳಿಂದ ಈ ದಂಧೆ ನಡೆಯುತ್ತಲೇ ಇದೆ. ಕೂಗಳತೆ ದೂರದಲ್ಲಿ ಪೊಲೀಸ್ ಠಾಣೆ ಇದ್ದರೂ ಎಂದೂ ಕ್ರಮ ಕೈಗೊಂಡವರೇ ಅಲ್ಲ. ಪ್ರತಿ ವಾರ ಪೊಲೀಸರು ಮತ್ತು ಅಬಕಾರಿ ಇಲಾಖೆಗೆ ತಲಾ ಎರಡು ಸಾವಿರ ಮಾಮೂಲಿ ನೀಡಲಾಗುತ್ತಿದೆ. ಇನ್ನು ಸಣ್ಣಪುಟ್ಟ ಪುಡಾರಿಗಳಿಗೆ ಅಗತ್ಯ ಬಿದ್ದಾಗ ಉಚಿತವಾಗಿ ಒದಗಿಸಿದರೆ ಮುಗಿಯಿತು. ಅಕ್ರಮ ವಹಿವಾಟು ನಿರಾತಂಕವಾಗಿ ಮುಂದುವರೆಯುತ್ತಿತ್ತು. ಚುನಾವಣೆ ಸಂದರ್ಭದಲ್ಲಿ ಬಡವರಿಗೆ ಸಾರಾಯಿ ಹಂಚಲು ರಾಜಕಾರಣಿಗಳು ಸಹ ಇದೇ ಅಂಗಡಿಗಳನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಅಂದ ಮೇಲೆ ಇನ್ನು ಕೇಳುವವರು ಯಾರು.


ವಸತಿ ಗ್ರಾಮಗಳೇ ಇಲ್ಲ!

ಇಲ್ಲಿನ ವರದಿಯೊಂದು ನಿಜಕ್ಕೂ ಪರಿಸ್ಥಿತಿಯ ಮೇಲೆ ಗಂಭೀರ ಪರಿಣಾಮ ಚೆಲ್ಲುತ್ತದೆ. ನರಸಾಪುರ ಸುತ್ತಮುತ್ತ 24 ಜಲ್ಲಿ ಕ್ರಷರ್‌ಗಳಿವೆ. ಇವುಗಳಿಂದ ಕೃಷಿಗೆ, ಸಾಮಾನ್ಯ ಜನರಿಗೆ ತೊಂದರೆಯಾಗುತ್ತದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘ ಕೈಗೊಂಡ ಹಲವಾರು ಹೋರಾಟಗಳ ಪರಿಣಾಮವಾಗಿ ಲೋಕಾಯುಕ್ತರು ವರದಿ ನೀಡಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದರು. ಕ್ರಷರ್ ಮಾಲೀಕರಿಂದ 5 ಲಕ್ಷ ರೂ. ಲಂಚ ಪಡೆದಿದ್ದಾರೆ ಎನ್ನುವ ಜಿಲ್ಲಾಧಿಕಾರಿಯೊಬ್ಬರು ಜಲ್ಲಿ ಕ್ರಷರ್‌ಗಳ ಸುತ್ತಮುತ್ತ ಮೂರು ಕಿಲೋಮೀಟರ್ ವ್ಯಾಪ್ತಿಯಲ್ಲಿ ವಸತಿ ಗ್ರಾಮಗಳೇ ಇಲ್ಲ ಎಂದು ಅಧಿಕೃತ ವರದಿ ನೀಡಿದ್ದರು. ಅಂದರೆ ಜನರ ಸಮಸ್ಯೆ ಕುರಿತು ಜಿಲ್ಲಾಡಳಿತಕ್ಕೆ ಎಷ್ಟು ಕಾಳಜಿ ಇದೆ ಎಂಬುದು ಇದರಿಂದ ಅರ್ಥವಾಗುತ್ತದೆ. ಜಿಲ್ಲಾಡಳಿತವೇ ಹೀಗಿರುವಾಗ ನರಸಾಪುರದಲ್ಲಿ ಸಾರಾಯಿ ಅಥವಾ ಭಟ್ಟಿಸಾರಾಯಿ ಮಾರಾಟ ಮಾಡುತ್ತಿದ್ದಾರೆ ಎಂದು ವರದಿ ನೀಡುತ್ತಾರೆಂದು ನಿರೀಕ್ಷಿಸುವುದು ಮೂರ್ಖತನವಾದೀತು. ಕೂಗಳತೆ ದೂರದಲ್ಲಿರುವ ಪೊಲೀಸ್ ಇಲಾಖೆಯೇ ನೇರವಾಗಿ ಇದರಲ್ಲಿ ಶಾಮೀಲಾಗಿರುವಾಗ ರಕ್ಷಿಸುವವರಾರು?

ಸಾರಾಯಿ ನಿಷೇಧಕ್ಕೆ ಮೊದಲು ಅಧಿಕೃತವಾಗಿ ಸಾರಾಯಿ ಮಾರಾಟ ಮಾಡುತ್ತಿದ್ದ ಎಲ್ಲ ಅಂಗಡಿಗಳಲ್ಲೂ ಅಕ್ರಮ ಮದ್ಯ ಮಾರಾಟ ಮಾಡಲಾಗುತ್ತಿತ್ತು. ನಿಷೇಧದ ನಂತರ ಮಾರಾಟ ಹಿಂದಿನಂತೆಯೇ ಮುಂದುವರೆದುಕೊಂಡು ಬಂದಿದೆ.

ನರಸಾಪುರದಲ್ಲಿ ಚಂದ್ರಮೌಳೇಶ್ವರ ಬಾರ್‌ನಲ್ಲಿ ಸಿಗುವ ಕಡಿಮೆ ದರದ ಮದ್ಯವೂ ಈ ಕೇಂದ್ರಗಳಿಂದಲೇ ಸರಬರಾಜಾಗುತ್ತದೆ. ಬಾರ್‌ನ ಶೋಕೇಸ್‌ಗಳಲ್ಲಿರುವ ಮದ್ಯ ಮಾತ್ರ ಅಧಿಕೃತವಾದುದಾಗಿದ್ದು. ಉಳಿದಂತೆ ಮಾರಾಟ ಮಾಡುವ ಎಲ್ಲವೂ ನಕಲಿಯಾಗಿದೆ. ಒಂದು ಕಾಲದಲ್ಲಿ ಕೂಲಿ ಮಾಡಿ ಜೀವನ ಮಾಡುತ್ತಿದ್ದ ಬಾರ್ ಮಾಲೀಕ ಭೈರಪ್ಪ ಈಗ ಲಕ್ಷಾಧೀಶ. ಈತನಿಂದಲೂ ಸಂಬಂಧಪಟ್ಟ ಇಲಾಖೆಗಳಿಗೆ ಮಾಮೂಲಿ ಹಣ ನಿರಾತಂಕವಾಗಿ ಪಾವತಿಯಾಗುತ್ತಿದೆ. ನಾರಾಯಣಸ್ವಾಮಿ (30), ಮಂಜುನಾಥ್ (ಮಾರಾಟಗಾರ), ಕುರೆಶಮ್ಮ (50), ನಾಗಮ್ಮ (40), ಪಾಪಮ್ಮ (40) ಬಾಬು (50), ಸಿಕ್ಕನಪಲ್ಲಿಗ (40), ಚಿನ್ನಮ್ಮ, ಮುನಿಸ್ವಾಮಿ, ಈಶ್ವರ (40) ಮತ್ತು ಶ್ರೀನಿವಾಸ ಮೃತಪಟ್ಟವರಾಗಿದ್ದಾರೆ.

ನರಸಾಪುರ ಪ್ರದೇಶದಲ್ಲಿ ಸೂರ್ಯ ಮುಳುಗಿ ಜನತೆ ಮನೆಗಳನ್ನು ಸೇರುತ್ತಿದ್ದಂತೆ ಈ ದುಷ್ಟ ತಂಡದವರು ಹೆಡೆ ಬಿಚ್ಚುತ್ತಿದ್ದರು. ಬಯಲು ನರಸಾಪುರ, ಕಟ್ಟಿಗೇನಹಳ್ಳಿ ಮತ್ತು



ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯ ಮುಂದೆ ಜನವಾದಿ ಮಹಿಳಾಸಂಘಟನೆಯ ಸದಸ್ಯರಿಂದ ಪ್ರತಿಭಟನೆ

ಮೇಡಿ ತಂಬಿಹಳ್ಳಿಗಳಿಂದ ಎಲ್ಲ ಪ್ರದೇಶಗಳಿಗೂ ಮುಂಜಾನೆ ತನಕ ಸರಬರಾಜು ಮಾಡುವುದೇ ಇವರ ಕಾಯಕ. ರಾತ್ರಿ ಬೀಟ್ ಮೇಲೆ ತೆರಳುವ ಪೊಲೀಸರು ಮತ್ತು ಅಬಕಾರಿ ಅಧಿಕಾರಿಗಳಿಗೆ ಎಲ್ಲೋ ಒಂದೆಡೆ ಬಾಡೂಟ ಹಾಕಿಸಿ, ಕೈಬಿಸಿ ಮಾಡಿದರಾಯಿತು. ಅವರ ಲೋಕ ಅವರದು. ಕೆಲವೊಮ್ಮೆ ಮನೆಗೇ ಎಲ್ಲ ಸೌಲತ್ತುಗಳು ತಲುಪಿಸಿದರೆ ಬೀಟ್ ಮಾಡುವ ಪ್ರಶ್ನೆಯೇ ಇಲ್ಲ. ಬೆಳಿಗ್ಗೆ ಹೋಗಿ ಕಚೇರಿಯಲ್ಲಿ ಬೀಟ್ ಮಾಡಿರುವುದಾಗಿ ನಮೂದಿಸಿ ಹಿಂದಿರುಗಿದರಾಯಿತು. ಅವರ ಕೆಲಸ ಮುಗಿದಂತೆ. ಈ ಪ್ರದೇಶದಲ್ಲಿ ಜಲ್ಲಿ ಕ್ರಷರ್‌ಗಳಲ್ಲಿ ಸಾವಿರಾರು ಮಂದಿ ಕೆಲಸ ಮಾಡುತ್ತಾರೆ. ತಮ್ಮ ಶಕ್ತಿ ಮೀರಿ ಮೈ ಮುರಿದು ದುಡಿಯುವ ಅವರು ತಮ್ಮ ನೋವನ್ನು ಮರೆಯಲು ಪ್ರತಿದಿನ ಯಾವುದೋ ಒಂದು ಮದ್ಯ ಸೇವಿಸಲೇಬೇಕೆಂಬ ಒತ್ತಡದಲ್ಲಿರುತ್ತಾರೆ. ಹೀಗಿರುವಾಗ ಸಾರಾಯಿ ನಿಷೇಧ ಮಾಡಿ ಮದ್ಯದ ಬೆಲೆಯನ್ನೂ ಹೆಚ್ಚಿಸಿದಾಗ ಕೂಲಿ ಮಾಡುವವರ ಪಾಡೇನು? ಅವರಿಗೆ ಕೂಲಿ ಸಿಗುವುದೇ 60 ರಿಂದ 70 ರೂಪಾಯಿ. ಒಂದು ಬಾಟಲಿ ಮದ್ಯಕ್ಕೆ 50 ರೂಪಾಯಿ ತೆರಬೇಕು.

ಹಾಗಾಗಿ ಸಲೀಸಾಗಿ ಸಿಗುವುದನ್ನೇ ಕುಡಿಯುತ್ತಾರೆ. ಒಂದು ಗ್ಲಾಸ್ ಅಕ್ರಮ ಮದ್ಯದ ಬೆಲೆ 12 ರೂ.ಗಳಾಗಿರುವುದರಿಂದ ಅದನ್ನೇ ಕುಡಿಯುತ್ತಿದ್ದರು.

ವಾಸ್ತವವಾಗಿ ಚುನಾವಣೆಯಲ್ಲಿ ವಿತರಿಸಲು ಈ ಅಕ್ರಮ ಮದ್ಯವನ್ನು ತಯಾರಿಸಲಾಗಿತ್ತು. ಬಿಗಿ ಬಂದೋಬಸ್ತ್ ಇದ್ದುದರಿಂದ ವಿತರಿಸಲಾಗಿಲ್ಲ. ಬಿಗಿ ಕಡಿಮೆಯಾಗುತ್ತಿದ್ದಂತೆ ಹೊರಬಂತು ಈ ಮೃತ್ಯು ಪಾನೀಯ. ಆದಾಗಲೇ ತಯಾರಿಸಿ ಮೂರು ದಿನ ಕಳೆದಿತ್ತು. ಇದರಲ್ಲಿ ವಿಷ ಇನ್ನಷ್ಟು ಹೆಚ್ಚಿತ್ತು. ದಾಸ್ತಾನು ಹೆಚ್ಚಾಗಿದೆ ಎಂದು 10 ರೂ.ಗೆ ಮಾರಾಟ ಮಾಡಲು ಶುರುವಾದರು.

ಸಾಮಾನ್ಯವಾಗಿ ಭಾನುವಾರ ದಿನ ಅಲ್ಲಿನ ಕೂಲಿಗಳಿಗೆ ಬಟವಾಡೆ ಹಂಚಲಾಗುತ್ತದೆ. ಬಟವಾಡೆ ತೆಗೆದುಕೊಂಡ ಕೂಲಿಗಳು ಮನೆಗೆ ಅಗತ್ಯವಾದ ದಿನಸಿ ಮತ್ತು ಪರಿಕರಗಳನ್ನು ಖರೀದಿ ಮಾಡಿ ಮದ್ಯ ಕುಡಿದು ಹೋಗುತ್ತಾರೆ.

ದುರಂತ ನಡೆದ ದಿನ ಮುಂಜಾನೆಯೇ ಮಾರಾಟ ಮಾಡುವ ಮಂಜುನಾಥನೇ ಮೊದಲು ಸ್ಯಾಂಪಲ್ ನೋಡೋಣ ಎಂದು ಕುಡಿದಿದ್ದಾನೆ. ಕೆಲವು ಕ್ಷಣಗಳಲ್ಲಿ ಅವನು ವಾಂತಿ ಮಾಡಿಕೊಂಡು ಆಸ್ಪತ್ರೆಗೆ ದಾಖಲಾಗಿದ್ದಾನೆ. ಅವನು ಸತ್ತ ವಾರ್ತೆ ಬರುವ ವೇಳೆಗೆ ಇನ್ನಷ್ಟು ಮಂದಿ ಕುಡಿದಿದ್ದಾರೆ. ಅವರೆಲ್ಲರೂ ಆಸ್ಪತ್ರೆಗೆ ದಾಖಲಾಗಿ ಒಂದೊಂದಾಗಿ ಸಾವಿನ ಸುದ್ದಿ ಬರಲಾರಂಭಿಸಿತು. ಇದನ್ನು ತಿಳಿದ ಮಂಜುನಾಥನ ತಾಯಿ ಲಕ್ಷ್ಮಿ ದೇವಮ್ಮ ಶಂಕಿಸಿ ಎಲ್ಲ ಮದ್ಯವನ್ನು ತಿಪ್ಪೆಗೆ ಸುರಿದಿದ್ದಾಳೆ. ಅಲ್ಲಿನವರೆಗೂ ಕೂಲಿಗಳಿಗೆ ಇನ್ನೂ ಬಟವಾಡೆಯಾಗದಿದ್ದರಿಂದ ಕುಡಿಯಲು ಬಂದಿರಲಿಲ್ಲ. ಒಂದು ವೇಳೆ ಅವರೂ ಕುಡಿದಿದ್ದರೆ?

ಜನಶಕ್ತಿ ಕನ್ನಡ ವಾರಪತ್ರಿಕೆ

ಮುಂದುವರೆದ ಭಾರತ - ಪಾಕಿಸ್ತಾನ ಸಂವಾದ ಪ್ರಕ್ರಿಯೆ

ಆಶಾದಾಯಕ ಬೆಳವಣಿಗೆ

2004ರಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಸಂಬಂಧಗಳನ್ನು ಉತ್ತಮ ಪಡಿಸಲು ಆರಂಭವಾದ 'ಸಂಯೋಜಿತ ಸಂವಾದ'ದ ನಾಲ್ಕನೇ ಸುತ್ತಿನ ಮಾತುಕತೆಗಳು ಈಗ ಪೂರ್ಣಗೊಂಡಿವೆ. ವಿದೇಶಾಂಗ ಮಂತ್ರಿಗಳ ಮಟ್ಟದಲ್ಲಿ ನಡೆದ ಈ ಮಾತುಕತೆಗಳು ಪ್ರಧಾನ ಮಂತ್ರಿಗಳ ಶೃಂಗಸಭೆಗೆ ಆಧಾರ ಕಲ್ಪಿಸಿವೆ ಎನ್ನಲಾಗಿದೆ.

ಭಾರತದ ವಿದೇಶಾಂಗ ಮಂತ್ರಿಗಳು ಪಾಕಿಸ್ತಾನದ ಭೇಟಿ ಮುಗಿಸಿ ಹಿಂದಿರುಗಿದ್ದಾರೆ. ಅವರು ಹೊಸ ಪಾಕಿಸ್ತಾನೀ ಮುಖಂಡತ್ವ ನಮ್ಮ ದ್ವಿಪಕ್ಷೀಯ ಸಂಬಂಧಗಳನ್ನು ಸಾಮಾನ್ಯಗೊಳಿಸಲು ಶಾಂತಿ ಪ್ರಕ್ರಿಯೆಯನ್ನು ಮುಂದೊಯ್ಯಲು ಬದ್ಧವಾಗಿದೆ ಎಂಬ ಭಾವನೆಯೊಂದಿಗೆ ಮರಳಿದ್ದಾರೆ. ಪಾಕಿಸ್ತಾನದಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದು ಪ್ರಜಾಪ್ರಭುತ್ವ ಮರುಸ್ಥಾಪನೆಗೊಂಡ ಮೇಲೆ ಭಾರತದ ವಿದೇಶಾಂಗ ಮಂತ್ರಿಗಳ ಮೊದಲ ಅಧಿಕೃತ ಭೇಟಿಯಿದು.

2004ರಲ್ಲಿ ಯುಪಿಎ ಸರಕಾರ ಬಂದ ಮೇಲೆ ಸಂಬಂಧಗಳನ್ನು ಉತ್ತಮಗೊಳಿಸುವ ಉದ್ದೇಶದಿಂದ 'ಸಂಯೋಜಿತ ಸಂವಾದ' ದ ಪ್ರಕ್ರಿಯೆ ಆರಂಭವಾಗಿತ್ತು. ಎಂಟು ಅಂಶಗಳ ಸುತ್ತ ಇದನ್ನು ಯೋಜಿಸಲಾಗಿದೆ- 1) ಶಾಂತಿ ಮತ್ತು ಭದ್ರತೆ-ಇವುಗಳಲ್ಲಿ ಪರಸ್ಪರ ವಿಶ್ವಾಸ ಕುದುರಿಸುವ ಕ್ರಮಗಳೂ ಸೇರಿವೆ, 2) ಜಮ್ಮು ಮತ್ತು ಕಾಶ್ಮೀರ, 3) ಸಿಯಾಚಿನ್, 4) ಸರ್ ಕ್ರೀಕ್, 5) ವುಲ್ಲರ್ ಬ್ಯಾರೇಜ್/ತುಲ್ಬುಲ್ ಸಮುದ್ರಸಂಚಾರ ಪ್ರಾಜೆಕ್ಟ್, 6) ಭಯೋತ್ಪಾದನೆ ಮತ್ತು ಮಾದಕ ದ್ರವ್ಯಗಳ ಕಳ್ಳಸಾಗಾಣಿಕೆ, 7) ಆರ್ಥಿಕ ಹಾಗೂ ವಾಣಿಜ್ಯ ಸಹಕಾರ ಮತ್ತು 8) ವಿವಿಧ ರಂಗಗಳಲ್ಲಿ ಸ್ನೇಹಪೂರ್ಣ ವಿನಿಮಯಗಳು.

ಈಗಾಗಲೆ ಮೂರು ಸುತ್ತುಗಳು ನಡೆದಿದ್ದು, ವಿದೇಶಾಂಗ ಮಂತ್ರಿ ಪ್ರಣಬ್ ಮುಖರ್ಜಿಯವರು ನಾಲ್ಕನೆ ಸುತ್ತಿನ ಮತುಕತೆಗಳಿಗೆ ಪಾಕಿಸ್ತಾನಕ್ಕೆ ಭೇಟಿ ನೀಡಿದ್ದರು. ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವದ ಮರುಸ್ಥಾಪನೆಯನ್ನು ತಪ್ಪಿಸಲು ಬೆನಜಿರ್ ಭುಟ್ಟೋರವರ ಹತ್ಯೆ ಹಾಗೂ ಭಾರತದಲ್ಲಿ ಮತ್ತೆ ಭಯೋತ್ಪಾದಕರ ಅಟ್ಟಹಾಸದ ಹಿನ್ನೆಲೆಯಲ್ಲಿ ನಡೆದ ಈ ಸಭೆಯಲ್ಲಿ 'ಭಯೋತ್ಪಾದನೆ, ಹಿಂಸಾಚಾರ ಮತ್ತು ಅದರ ಬೆದರಿಕೆಯಿಂದ ಮುಕ್ತವಾದ ವಾತಾವರಣದಲ್ಲಿ ಸಹಕಾರ, ವಿಶ್ವಾಸ ಮತ್ತು ವ್ಯಾವಹಾರಿಕತೆಯ ಭಾವನೆಯೊಂದಿಗೆ' ಭಾಗವಹಿಸುತ್ತಿರುವಾಗಿ ಭಾರತ ಹೇಳಿತು.

ಶೃಂಗಸಭೆಯತ್ತ

ಪಾಕಿಸ್ತಾನದ ವಿದೇಶಾಂಗ ಮಂತ್ರಿ ಶಾಹ ಮಹಮ್ಮದ್ ಖುರೇಶಿಯವರೊಂದಿಗೆ ಈ ಸಂವಾದದ ಆಧಾರದಲ್ಲಿ ಮುಂದೆ ಪ್ರಧಾನ ಮಂತ್ರಿಗಳ ಮಟ್ಟದ ಶೃಂಗ ಸಭೆಯನ್ನು ಏರ್ಪಡಿಸಲಾಗುವುದು ಎನ್ನಲಾಗಿದೆ. ಈ ಶೃಂಗಸಭೆಯಲ್ಲಿ ಈ ಎಂಟೂ ವಿಷಯಗಳ ಮೇಲೆ ಮಾತುಕತೆಗಳ ಮುನ್ನಡೆಯನ್ನು ಸೂಚಿಸುವ ಒಪ್ಪಂದಗಳಿಗೆ ಸಹಿ ಹಾಕುವ ನಿರೀಕ್ಷೆಯಿದೆ.

ಎರಡೂ ದೇಶಗಳ ವಿದೇಶಾಂಗ



ಮೂಡಿಬಂದಿದೆ ಎಂದು ಭಾರತದ ವಿದೇಶಾಂಗ ಕಾರ್ಯದರ್ಶಿಗಳು ಹೇಳಿದ್ದಾರೆ.

ಪ್ರಣಬ್ ಮುಖರ್ಜಿಯವರು ಪಾಕಿಸ್ತಾನದ ವಿದೇಶಾಂಗ ಮಂತ್ರಿಗಳಲ್ಲದೆ ಪ್ರಧಾನ ಮಂತ್ರಿ ಗಿಲಾನಿ, ಅಧ್ಯಕ್ಷ ಮುಷರ್ರಫ್, ಪಾಕಿಸ್ತಾನ ಮುಸ್ಲಿಂ ಲೀಗ್‌ನ ಮುಖಂಡ ನವಾಜ್ ಶರೀಫ್ ಮತ್ತು ಆವಾಮಿ ನ್ಯಾಶನಲ್ ಪಾರ್ಟಿಯ ಮುಖಂಡ ಅಸ್ಫಂದ್ಯಾರ್ ವಲೀ ಖಾನ್‌ರನ್ನು ಕೂಡ ಭೇಟಿ ಮಾಡಿದರು. ಈ ಭೇಟಿಗಳಲ್ಲಿ ಪಾಕಿಸ್ತಾನದಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸಿದ್ದಕ್ಕೆ ಪಾಕಿಸ್ತಾನದ ಜನತೆಗೆ ಅಭಿನಂದನೆ ಸಲ್ಲಿಸಲಾಯಿತು.

ನಿಜವಾಗಿಯೂ ಭಾರತ ಮತ್ತು ಪಾಕಿಸ್ತಾನದ ನಡುವೆ ಉತ್ತಮ ನೆರೆಕರೆ ಸಂಬಂಧಗಳು ಏರ್ಪಟ್ಟರೆ ಅದು ಗಡಿಯ ಎರಡೂ ಕಡೆ ಇರುವ ಕೋಟಿಗಟ್ಟಲೆ ಜನರಿಗೆ ಶಾಂತಿ ಮತ್ತು ಸ್ಥಿರತೆ ತಂದು ಕೊಡಬಲ್ಲುದು, ಅಷ್ಟೇ ಅಲ್ಲ, ಇದು ದಕ್ಷಿಣ ಏಶ್ಯಾದಲ್ಲಿ ಶಾಂತಿ ಮತ್ತು ಸ್ಥಿರತೆಗೆ ಅಪಾರ ಕೊಡುಗೆ ನೀಡಬಲ್ಲುದು. ಇಡೀ ವಿಶ್ವದ ಮೇಲೆ ಇದು ಸಕಾರಾತ್ಮಕ ಪ್ರಭಾವ ಬೀರುತ್ತದೆ.

ಮತ್ತದೇ ಬುಶ್ ಚಾಳಿ

ಇನ್ನೇನು ಅಧಿಕಾರ ಬಿಟ್ಟುಕೊಡಲು ಸನ್ನದ್ಧರಾಗಬೇಕಾದ ಅಮೆರಿಕಾದ ಅಧ್ಯಕ್ಷ ಜಾರ್ಜ್ ಬುಶ್ ವಿಶ್ವದ ಎಲ್ಲೆಲ್ಲೂ ತನ್ನ ಚಿತ್ರ ಕಾಣುವಂತಾಗಬೇಕು ಎಂಬ ಚಾಳಿ ಬೆಳೆಸಿಕೊಂಡಂತೆ ಕಾಣುತ್ತದೆ. ಅದರಿಂದಾಗಿ ಏನಾದರೂ ಟಿಪ್ಪಣಿ ಮಾಡುತ್ತಲೇ ಇರುತ್ತಾರೆ. ಭಾರತ ಮತ್ತು ಪಾಕಿಸ್ತಾನದ ವಿದೇಶಾಂಗ ಮಂತ್ರಿಗಳ ಭೇಟಿ ಕಾಲದಲ್ಲಿ ಅವರ ಸಲಹೆಯನ್ನು ಯಾರೂ ಕೇಳದಿದ್ದರೂ ಇದೀಗ ಕಾಶ್ಮೀರ ಪ್ರಶ್ನೆಗೆ ಒಂದು ಪರಿಹಾರ ಕಂಡುಕೊಳ್ಳಲು ಇದು ಸೂಕ್ತ ಸಮಯ ಎಂದು ಅವರು ಟಿಪ್ಪಣಿ ಮಾಡಿದ್ದಾರೆ. ಪಾಕಿಸ್ತಾನ ಪೀಪಲ್ಸ್ ಪಾರ್ಟಿಯ ಮುಖಂಡ ಜರ್ದಾರಿ 'ಜಗತ್ತು ನಮ್ಮೊಂದಿಗೆ ಇರುವುದು ಒಳ್ಳೆಯ ಲಕ್ಷಣ' ಎಂದಿದ್ದಾರಂತೆ. ಕಾಶ್ಮೀರದ ಪ್ರಶ್ನೆ ಭಾರತ ಮತ್ತು ಪಾಕಿಸ್ತಾನದ ನಡುವಿನ ದ್ವಿಪಕ್ಷೀಯ ಪ್ರಶ್ನೆ ಎಂಬ



ನಿಲುವು ಭಾರತದ್ದು , ಇದಕ್ಕೆ ಯಾವುದೇ ಮೂರನೆಯವರ ಅಗತ್ಯವೇನೂ ಇಲ್ಲ, ಅಮೆರಿಕನ್ ಸಾಮ್ರಾಜ್ಯಶಾಹಿಯ ಮಧ್ಯಪ್ರವೇಶ ಅಥವಾ ಸಹಕಾರವಂತೂ ಅಗತ್ಯವೇ ಇಲ್ಲ. ಈ ನಿಲುವಿಗೆ ಬದ್ಧವಾಗಿರುವುದು ಎರಡೂ ದೇಶಗಳಿಗೆ ಒಳ್ಳೆಯದು.

ಮೇಲೆ ಹೇಳಿದ ಎಲ್ಲಾ ಎಂಟು ವಿಷಯಗಳ ಸುತ್ತ ಮಾತುಕತೆಗಳು ನಡೆದಿದ್ದು ಈ ಬಗ್ಗೆ ಪ್ರಧಾನ ಮಂತ್ರಿಗಳ ಶೃಂಗ ಸಭೆಯಲ್ಲಿ ಒಪ್ಪಂದಗಳು ನಡೆಯುವ ನಿರೀಕ್ಷೆಯಿದೆ ಎಂದು ಹೇಳಲಾಗಿದೆ. ಎರಡೂ ಕಡೆ ಬಂಧಿಗಳ ಬಿಡುಗಡೆ, ವಿಶ್ವಾಸ ಕುದುರಿಸುವಲ್ಲಿ ಹೊಸ ಕ್ರಮಗಳು, ಬಸ್ ಸಂಚಾರ ಮತ್ತು ದ್ವಿಪಕ್ಷೀಯ ವ್ಯಾಪಾರದ ಹೆಚ್ಚಳ, ಕಳೆದ ವರ್ಷ ರಚಿಸಿದ ಭಯೋತ್ಪಾದನ-ವಿರೋಧಿ ಸಭೆಗಳಲ್ಲಿ ಹೆಚ್ಚಳ ಇತ್ಯಾದಿಗಳ ಬಗ್ಗೆ ಚರ್ಚೆ ನಡೆಯಿತು. ಇರಾನ್ - ಪಾಕಿಸ್ತಾನ-ಭಾರತ ಅನಿಲ ಪೈಪ್ ಲೈನ್ ಬಗ್ಗೆ , ಎರಡೂ ದೇಶಗಳ ಆರ್ಥಿಕಕ್ಕೆ ಅದರ ಮಹತ್ವದ ಬಗ್ಗೆಯೂ ಚರ್ಚೆ ನಡೆಯಿತು.

ಸಹಜವಾಗಿಯೇ ಬೆನಜಿರ್ ಭುಟ್ಟೋ ರವರ ಹತ್ಯೆಯ ನೆನಪೂ ಇತ್ತು. ಆಕೆಯನ್ನು ಕಳಕೊಂಡದ್ದು ತೀರ ಇತ್ತೀಚಿನ ಗಾಯ, ನಮ್ಮೆರಡೂ ದೇಶಗಳ ಸಾಮೂಹಿಕ ಭವಿಷ್ಯಕ್ಕಾಗಿ ಎರಡೂ ದೇಶಗಳು ಭಯೋತ್ಪಾದನೆಯ ಪಿಡುಗನ್ನು ಎದುರಿಸಲು ಒಟ್ಟಾಗಿ ಕೆಲಸ ಮಾಡಬೇಕು, ಇದೇ ಶ್ರೀಮತಿ ಭುಟ್ಟೋರವರ ನೆನಪಿಗೆ ಸಲ್ಲಿಸಬಹುದಾದ ಸೂಕ್ತ ಶ್ರದ್ಧಾಂಜಲಿ ಎಂದು ಪ್ರಣಬ್ ಮುಖರ್ಜಿ ಹೇಳಿದರು.

ಭಾರತ ಮತ್ತು ಪಾಕಿಸ್ತಾನದ ನಡುವಿನ ಈ ಸಂವಾದ ಪ್ರಕ್ರಿಯೆಗೆ ಈ ಪ್ರದೇಶದಲ್ಲಿ ಶಾಂತಿ,ಸ್ಥಿರತೆ ಮತ್ತು ಉತ್ತಮ ಬಾಂಧವ್ಯಗಳನ್ನು ಬಯಸುವವರೆಲ್ಲ ರಿಂದಲೂ ಬೆಂಬಲ ಅಗತ್ಯ. ಈ ಪ್ರಕ್ರಿಯೆಯನ್ನು ಬಲಪಡಿಸಬೇಕು.

ಕವನ

ಬಲ್ಲವರೆ ಹೇಳಿರಿ

ಬಡವರ ಕಣ್ಣೀರೇ
ಕಡಲಾಗಿರುವಾಗ
ಕಡಲ ಕಲರವ ಹೇಗೆ
ವರ್ಣಿಸಲಿ ?

ನಿಷ್ಕರುಣೆಯ ಹಸಿವು
ಬಡವರ ಉಸಿರು
ಕೊಂದಿರುವಾಗ
ಮೃಷ್ಟಾನ್ನದ ಮಹಿಮೆ
ಹೇಗೆ ವರ್ಣಿಸಲಿ ?

ಬೆತ್ತಲ ಮೈಯ
ಬಡಕಲು ದೇಹದ
ಜೀವಾಣುಗಳ ದಹಿಸುವ
ಅರುಣೋದಯದ
ಹರಿಮೆ
ಹೇಗೆ ವರ್ಣಿಸಲಿ ?

ಕರುಳ ಬಳ್ಳಿಯ
ಕಡಿದು ಕುಯ್ದು
ಕುಲ ಕಟ್ಟುಪಾಡುಗಳ
ಗುಡ್ಡ, ಬೆಟ್ಟಗಳ ನಿರ್ಮಿಸಿದ
ಜನ್ಮ ಭೂಮಿಯನ್ನು
ಹೇಗೆ ಕೀರ್ತಿಸಲಿ ?

- ಲಕ್ಷ್ಮಣ್

ಧರ್ಮಾಂಧತೆ

ಸೂತ್ರಾಂಧತೆಯಿಂದ ದೂರವೇ ಇದ್ದು
ಧರ್ಮಾಂಧತೆಯನ್ನು ಓಡಿಸಿರಿ ಒದ್ದು
ಈ ಇದುವೆ ನಿಜವಾದ ವಿಚಾರವಾದಿ
ತುಳಿಯಲೇಬೇಕಾದ ನಿರ್ದಿಷ್ಟ ಹಾದಿ

ಹಣೆ ಬರಹ

ಅನುಭವಿಸುತಿರುವಂಥ ನೋವುಗಳು ಎಲ್ಲ
ನೀವು ನಂಬಿರುವಂತೆ ಹಣೆಬರಹ ಅಲ್ಲ
ಹಣೆಬರಹ ಅನ್ನುತ್ತ ಮಲಗಿದವರಲ್ಲಿ
ಒಬ್ಬನೂ ಇದುವರೆಗೆ ಎದ್ದಿಲ್ಲ ಇಲ್ಲಿ.

- ವಿಡಂಬಾರಿ

ಭಾರತೀಯ ಜನತಾ ಪಕ್ಷ – ಬಿಜೆಪಿ ಕರ್ನಾಟಕದಲ್ಲಿ ಸರ್ಕಾರ ರಚಿಸುವ ನಿಟ್ಟಿನಲ್ಲಿ ಸಿದ್ಧತೆ ನಡೆಸಿದೆ. ಆದರೆ ಬಿಜೆಪಿಗೆ ನಿಜಕ್ಕೂ ಬಹುಮತ ಎಂಬುದು ಇದೆಯೇ? ಈಗ ಸಿಕ್ಕಿರುವ ಜನ ಬೆಂಬಲವಾದರೂ ಸಹ ದೊರಕಿರುವುದು ಹೇಗೆ?

ಬಿಜೆಪಿ ಅಧಿಕಾರಕ್ಕೆ ಹತ್ತಿರ ಆದರೆ ಬಹುಮತದಿಂದ ದೂರ

ಕೋಮುವಾದದ ವಿರುದ್ಧ ಕೇಂದ್ರೀಕರಿಸದ ಚುನಾವಣಾ ಸಮರ

ಜಿ.ಎನ್.ನಾಗರಾಜ್


ಮೇ 25ನೇ ಭಾನುವಾರ ಚುನಾವಣಾ ಫಲಿತಾಂಶದ ದಿನದಂದು ಸರಿಸುಮಾರು ಇಡೀ ದಿನ ಟಿ.ವಿ.ಗಳ ಮೊರೆತ, 26ನೇ ತಾರೀಖು ಪತ್ರಿಕೆಗಳಲ್ಲಿ ಅಬ್ಬರ 'ಬಿಜೆಪಿ ದಿಗ್ವಿಜಯ' 'ಅರಳಿದ ಕಮಲ' 'ಜನತೆಯ ಅಭಯ ಬಿಜೆಪಿ ವಿಜಯ' ಇತ್ಯಾದಿ. ಟಿ.ವಿ. ವರದಿಗಾರರ ನಿರೂಪಣೆಗಾರರ ನಡುವೆ ವಿಶೇಷಣಗಳ ಉಪಯೋಗದಲ್ಲಿ ಸ್ಪರ್ಧೆ ಬಿಜೆಪಿಗೆ ದೊಡ್ಡ ಬಹುಮತವನ್ನು ನೀಡಿದವರೂ ಇದ್ದಾರೆ. ಆದರೆ ಚುನಾವಣಾ ಫಲಿತಾಂಶಗಳು ಹೊರಗೆಡವಿದ ಜನಮತದ ನೈಜ ಸಾರಾಂಶವೇನು?

ಒಂದು ಕರ್ನಾಟಕದಲ್ಲಿ ನಡೆದ ರಾಜಕೀಯದ ದೊಂಬರಾಟದಿಂದ ಬೇಸತ್ತ; ಅದೇ ಮೂರು ಪಕ್ಷಗಳಲ್ಲಿ ಉತ್ತಮ ಆಯ್ಕೆಯನ್ನೇನೂ ಕಾಣದ ಜನತೆಯ ಕೆಲ ವಿಭಾಗಗಳು ಮತದಾನ ಮಾಡಲು ನಿರಾಕರಿಸಿದರು (ಇದರಲ್ಲಿ ಪ್ರಚಾರವೇ ಇಲ್ಲದ ಚುನಾವಣೆಯನ್ನು ಹೇರಿದ ಚುನಾವಣಾ ಆಯೋಗದ ಪಾತ್ರವೂ ಇದೆ)

ಎರಡು ಮತದಾನ ಮಾಡಿದ ಜನಸಮುದಾಯದಲ್ಲಿ ಶೇ.66ರಷ್ಟು ಭಾಗ ಅಂದರೆ 2/3 ಭಾಗ ಬಿಜೆಪಿಯನ್ನು ನಿರಾಕರಿಸಿದ್ದಾರೆ. ಕೇವಲ 33.9ರಷ್ಟು ಮತದಾರರು ಮಾತ್ರ ಬಿಜೆಪಿಗೆ ಮತ ನೀಡಿದ್ದಾರೆ. ಕಾಂಗ್ರೆಸ್ ಪಕ್ಷ ಶೇ.35ರಷ್ಟು ಜನತಾ ಪಕ್ಷ ಶೇ.19ರಷ್ಟು ಇತರ ಪಕ್ಷಗಳು ಶೇ.10ರಷ್ಟು ಮತವನ್ನು ಗಳಿಸಿಕೊಂಡಿದ್ದಾರೆ.

ಮೂರು ಹೀಗೆ ಬಿಜೆಪಿಗೆ ಬಿದ್ದ ಮತಗಳು ಶೇ.34ರಷ್ಟೇ ಆದರೂ ಅವರು ಗಳಿಸಿದ ಸ್ಥಾನಗಳು ಶೇ.48ರಷ್ಟು. ಇದಕ್ಕೆ ನಮ್ಮ ದೇಶದಲ್ಲಿರುವ ಚುನಾವಣಾ ಪದ್ಧತಿ ಒಂದು ಮತ ಹೆಚ್ಚು ಗಳಿಸಿದವರು ಗೆದ್ದರು. ಉಳಿದವರಿಗೆ ಜನ ಹಾಕಿದ ಮತಗಳೆಲ್ಲ ವ್ಯರ್ಥ ಎನ್ನುವಂತಹ (ಫಸ್ಟ್ ಪಾಸ್ಟ್ ದ ಪೋಸ್ಟ್ ಸಿಸ್ಟಮ್ - First Past the post System) ಪದ್ಧತಿ. ನಮ್ಮ ದೇಶದ ಆಳುವ ವರ್ಗಗಳು ಪ್ರಜಾಪ್ರಭುತ್ವದ ಹೆಸರಿನಲ್ಲಿ ತಮ್ಮ ಪ್ರಭುತ್ವವನ್ನು ಹೇರಲು ಅನುಕೂಲದವಾಗುವಂತಹ ಈ ಪದ್ಧತಿಯನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂಬುದೇ ಮುಖ್ಯ ಕಾರಣ. ಅದಕ್ಕಾಗಿಯೇ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಗಳಿಸಿದ ಮತಗಳ ಪ್ರಮಾಣಕ್ಕನುಗುಣವಾದ ಪ್ರಾತಿನಿಧ್ಯ (ಪ್ರಪೋರ್ಷನಲ್ ರೆಪ್ರಸಂಟೇಷನ್ - Proportional representation) ಎಂಬ ಪದ್ಧತಿ ಜನಾದೇಶವನ್ನು ಬಿಂಬಿಸಲು ಅತ್ಯಂತ ಸೂಕ್ತ ಎಂದು ಪ್ರತಿಪಾದಿಸುತ್ತಿರುವುದು.

ನಾಲ್ಕು ಬಿಜೆಪಿಗೆ ಮತ ಹಾಕಿದ ಶೇ.33.9ರಷ್ಟು ಮತದಾರರಲ್ಲಿ ಬಹುಭಾಗ ಬಿಜೆಪಿಯ ನೀತಿಗಳಿಗಾಗಿ ನೀಡಿದ ಮತಗಳಲ್ಲ. ರಾಜ್ಯದಲ್ಲಿ ನಡೆದ ಹೇಸಿಗೆ ಬರುವ ರಾಜಕೀಯ



ವಿದ್ಯಮಾನಗಳಿಂದ ರೋಸಿಹೋಗಿ ಸ್ಥಿರ ಸರ್ಕಾರ ಬರಲು ಒಂದೇ ಪಕ್ಷಕ್ಕೆ ಬಹುಮತ ನೀಡುವುದೇ ಸೂಕ್ತ ಎಂಬ ಭಾವನೆಯಿಂದ ಗಣನೀಯ ಮತಗಳು ಬಿದ್ದಿವೆ.

ಐದು - ರಾಜ್ಯವನ್ನು ಹಲದಶಕ ಆಳಿದ ಕಾಂಗ್ರೆಸ್, ಈಗಲೂ ಕೇಂದ್ರದಲ್ಲಿ ಆಳುತ್ತಿರುವ ಕಾಂಗ್ರೆಸ್ ಪಕ್ಷದ ವಿರುದ್ಧ ಅತೃಪ್ತಿ. ಬೆಲೆ ಏರಿಕೆ, ಕೃಷಿ ಬಿಕ್ಕಟ್ಟು, ಕೈಗಾರಿಕಾ ಬಿಕ್ಕಟ್ಟುಗಳಿಂದಾಗಿ ಅಸಮಾಧಾನಗೊಂಡ ರೈತ, ಕೂಲಿಕಾರ ಸಮುದಾಯ, ಅಸಂಘಟಿತ, ಸಂಘಟಿತ ಕಾರ್ಮಿಕ ಸಮುದಾಯ ರಾಜ್ಯದಲ್ಲಿ ಹಲವು ಬಾರಿ ಆಳಿದ ಜನತಾದಳದ ಬಗ್ಗೆ, ಅವರ ಒಡಕಿನ ಬಗ್ಗೆ ಅತೃಪ್ತಿ, ಹೀಗೆ ಜನರ ಬದುಕಿನ ಪ್ರಶ್ನೆಗಳಿಂದಾಗಿ ದೊಡ್ಡ ಸಂಖ್ಯೆಯ ಮತಗಳಿಕೆಯಾಗಿದೆ.

ಆರು - ನಮ್ಮ ಜಾತಿಯವರು ಮುಖ್ಯಮಂತ್ರಿಯಾಗುವುದನ್ನು ತಪ್ಪಿಸಿದರು ಎಂಬ ಭಾವನೆಯಿಂದ ಲಿಂಗಾಯತ ಭೂಮಾಲಕ, ವರ್ತಕ ವಿಭಾಗಗಳ ಹಿತವನ್ನು ಬಿಜೆಪಿಯೇ ಹೆಚ್ಚು ಪರಿಣಾಮಕಾರಿಯಾಗಿ ಕಾಪಾಡಬಹುದು ಎಂಬ ನೆಚ್ಚಿಕೆಯಿಂದ ಆ ಸಮುದಾಯ ಮತ್ತು ವರ್ಗಗಳು ಮತ ನೀಡಿವೆ. ಹಾಗೆಯೇ ವಾಲ್ಮೀಕಿ, ಮೀನುಗಾರರು ಮೊದಲಾದ ಸಮುದಾಯಗಳಿಂದಲೂ ಮತಗಳನ್ನು ಪಡೆಯಲಾಗಿದೆ. ಹೀಗೆ ಜಾತೀಯವಾದ ಮತಗಳಿಕೆಯೇ ಪ್ರಧಾನ ಅಂಶವಾಗಿದೆ.

ಏಳು – ಇತ್ತೀಚೆಗೆ ಕೆಲವು ದಶಕಗಳಿಂದ ಪ್ರಾದೇಶಿಕ ಭಾವನೆಗಳಿಗೆ ಉತ್ತರ ಕರ್ನಾಟಕ, ಹೈದರಾಬಾದ್ ಕರ್ನಾಟಕ, ಕೊಡವ ಎಂಬ ವಿಭಜಕವಾದಗಳಿಗೆ ಪ್ರೋತ್ಸಾಹ ನೀಡಿದ ಬಿಜೆಪಿಯ ಪ್ರಯತ್ನದಿಂದಾಗಿ ಆ ಪ್ರದೇಶಗಳ ಹಲವು ಮತಗಳು ಬಿದ್ದಿವೆ. ಚುನಾವಣೆಯ ಮುನ್ನಾದಿನಗಳಲ್ಲಿ ಹೊಗೆನಕಲ್ ವಿವಾದವನ್ನು ಬಳಸಿಕೊಂಡದ್ದು, ಕರ್ನಾಟಕ ರಕ್ಷಣಾ ವೇದಿಕೆಗಳಲ್ಲಿ ಪ್ರಧಾನವಾಗಿ ಭಾಗವಹಿಸಿದ್ದು ಇವು ಕೂಡ ಬಿಜೆಪಿಯಿಂದ ದೂರ ಇದ್ದ ಹಲವು ವಿಭಾಗಗಳನ್ನು ಬಿಜೆಪಿಗೆ ಮತಹಾಕುವಂತೆ ಮಾಡಿದೆ.

ವಚನಭ್ರಷ್ಟತೆ ಎಂಬ ಹೆಸರಿನಲ್ಲಿ ಪತ್ರಿಕೆ, ಮಾಧ್ಯಮಗಳಲ್ಲಿ ನಡೆದ ವ್ಯಾಪಕ ಹಾಗು ಅಬ್ಬರದ ಪ್ರಚಾರ, ಅದಕ್ಕೆ ಆರೆಸ್ಸೆಸ್ ಸದಸ್ಯ, ಅಭಿಮಾನಿ ಪತ್ರಕರ್ತರು, ಬಿಜೆಪಿಯ ಮಿತ್ರ ಪತ್ರಕರ್ತರು, ಲಿಂಗಾಯತ ಜಾತಿಯ ಪತ್ರಕರ್ತರು, ಅಧಿಕಾರಿ ಬಳಗಗಳ ಬಳಕೆ, ರಾಜ್ಯಾದ್ಯಂತ ಬಿಜೆಪಿ ನಡೆಸಿದ ಪ್ರಚಾರ ಸಭೆಗಳು ಇವುಗಳ ಪ್ರಭಾವದಿಂದ ಗಣನೀಯ ಮತಗಳನ್ನು ಬಿಜೆಪಿ ಪಡೆದಿದೆ.

ಎಂಟು – ಗಣಿಮಾಲಕರು, ಭೂದಂಧೆಕೋರರು ಇತರ ಅನೇಕರು ತಾವು ಸ್ಪರ್ಧಿಸಿದ, ಸ್ಪರ್ಧಿಸದೇ ಇದ್ದ ಕ್ಷೇತ್ರಗಳಲ್ಲಿ ಚೆಲ್ಲಾಡಿದ ಹಣ, ಅದರಿಂದ ಕೊಂಡ ಮತಗಳು. ಅನೇಕ ಕ್ಷೇತ್ರಗಳಲ್ಲಿ ಹಲವು ಹತ್ತು ಕೋಟಿ ರೂ ಖರ್ಚಿನ ಹಣದ ಜೊತೆಗೆ ಗೂಂಡಾಗಿರಿಯ ಬಳಕೆ.

ಬಿಜೆಪಿ ಪಡೆದ ಜಾತ್ಯಾತೀತ ಮತಗಳು

ಹೀಗೆ ಬಿಜೆಪಿ ಪಡೆದ ಮತಗಳಲ್ಲಿ ಬಹುಭಾಗ ಜಾತ್ಯಾತೀತ ಮತಗಳು. ಕೋಮುವಾದದ ಅಪಾಯವನ್ನು ಕಡೆಗಣಿಸಿದ ಅಥವಾ ಮನಗಾಣದ ಮತದಾರರಿಂದ ಮೇಲೆ ಕಾಣಿಸಿದ ಕಾರಣಗಳಿಗಾಗಿ ಬಂದ ಮತಗಳು. ಬಿಜೆಪಿ ಎಂಬುದು ಇತರ ರಾಜಕೀಯ ಪಕ್ಷಗಳಂತಲ್ಲ. ಅದು ಆರೆಸ್ಸೆಸ್ ಎಂಬ ಜನರ ಹಿಡಿತದಲ್ಲಿಲ್ಲದ ಪ್ರಜಾಪ್ರಭುತ್ವ ವಿರೋಧಿ ಫ್ಯಾಸಿಸ್ಟ್ ಶಕ್ತಿಯ ರಾಜಕೀಯ ಮುಖವಾಡ ಎಂಬ ಸತ್ಯಸಂಗತಿಯನ್ನು ಜನರಿಗೆ ಮನವರಿಕೆ ಮಾಡಲು ರಾಜ್ಯದ ಪ್ರಮುಖ ಜಾತ್ಯಾತೀತ ಪಕ್ಷಗಳಾದ ಕಾಂಗ್ರೆಸ್ ಮತ್ತು ಜನತಾದಳ ಪ್ರಯತ್ನ ಮಾಡಲೇ ಇಲ್ಲ.

ಕೋಮು ಗಲಭೆಗಳ ಬಗ್ಗೆ ಆಗೊಮ್ಮೆ, ಈಗೊಮ್ಮೆ ಜನತಾದಳ, ಕಾಂಗ್ರೆಸ್ ನಾಯಕರು ಪ್ರಸ್ತಾಪಿಸಿದರೂ ಕೋಮುವಾದದ ಅಪಾಯದ ಬಗ್ಗೆ, ಈದ್ಗಾ ವಿವಾದ, ಬಾಬಾಬುಡನ್‌ಗಿರಿ ವಿವಾದ, ಅನೇಕ ಮಸೀದಿ, ಈದ್ಗಾ, ಮುಸ್ಲಿಂ ಸ್ಮಶಾನಗಳು ಇವುಗಳ ಬಗ್ಗೆ ಎಬ್ಬಿಸಿದ ವಿವಾದಗಳ ಬಗ್ಗೆ, ಅದರ ಅಪಾಯದ ಬಗ್ಗೆ ಪ್ರಸ್ತಾಪಿಸಲೇ ಇಲ್ಲ. ಮಂಗಳೂರು, ಬೆಂಗಳೂರು ಕೋಮುಗಲಭೆಗಳು ಇವುಗಳ ಬಗ್ಗೆ ಕೂಡ ವ್ಯಾಪಕ ಪ್ರಚಾರ ಮಾಡಲಿಲ್ಲ. ಕೋಮುವಾದ ಹೇಗೆ ಪ್ರಜಾಪ್ರಭುತ್ವಕ್ಕೆ ಅಪಾಯ, ದುಡಿಯುವ ಜನತೆಗೆ, ಕೆಳಜಾತಿಗಳಿಗೆ, ಮಹಿಳೆಯರಿಗೆ ಹಾನಿಕರ ಎಂಬುದು ಬಿಂಬಿತವಾಗಲಿಲ್ಲ. ಇನ್ನು ಇತರ ಪಕ್ಷಗಳಾದ ಎಸ್.ಪಿ., ಸರ್ವೋದಯ ಕರ್ನಾಟಕಗಳು ತಮ್ಮ ಕ್ಷೇತ್ರಗಳಲ್ಲಿಯೂ ಕೋಮುವಾದದ ಪ್ರಶ್ನೆಗಳನ್ನು ಎತ್ತಲಿಲ್ಲ. ಬಿಎಸ್‌ಪಿ ಕೋಮುವಾದದ ವಿರುದ್ಧ ಪ್ರಚಾರ ಮಾಡುವ ಪ್ರಶ್ನೆಯೇ ಇಲ್ಲ.

ಪುಟ 13ಕ್ಕೆ

ರಾಜ್ಯದಲ್ಲಿ ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷಗಳ ಸ್ಥಾನ ಗಳಿಕೆ ಮತ್ತು ಮತಗಳಿಕೆ ವಿವರ

	ಜನತಾಪಕ್ಷ		ಜನತಾದಳ		ಕಾಂಗ್ರೆಸ್		ಬಿಜೆಪಿ		ಸಿಪಿಐ(ಎಂ)		ಸಿಪಿಐ		ಎಸ್.ಪಿ		ಬಿ.ಎಸ್.ಪಿ	
	ಸ್ಥಾನ	ಶೇ.ಮತ	ಸ್ಥಾನ	ಶೇ.ಮತ	ಸ್ಥಾನ	ಶೇ.ಮತ	ಸ್ಥಾನ	ಶೇ.ಮತ	ಸ್ಥಾನ	ಶೇ.ಮತ	ಸ್ಥಾನ	ಶೇ.ಮತ	ಸ್ಥಾನ	ಶೇ.ಮತ	ಸ್ಥಾನ	ಶೇ.ಮತ
1985	139	43.84	-	-	66	41.10	2	3.84	2	0.86	4	1.08				
1989	02	11.40	24	27.30	176	43.77	4	4.13	-	0.54	-	0.59				
1994	-	-	115	33.56	36	27.40	40	17.00	1	0.49	-	0.2310				
-					10	7.28										
1999	19(ಯು)	13.52	9	10.42	132	41.06	44	20.69	-	0.39	-	*				
2004	05(ಯು)	2.06	58	20.77	65	35.27	79	28.32	1	*	-	*				
2008	0		28	19.00	80	35.00	110	34.00	0	-	0	-				1.75
																2.74

ಕಾಂಗ್ರೆಸ್ ತನ್ನ ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಿದ್ದರೆ....

ವಿಧಾನಸಭಾ ಚುನಾವಣಾ ಫಲಿತಾಂಶಗಳು ಬರತೊಡಗಿದಂತೆ ಬಿಜೆಪಿಯ ಸ್ಥಾನ ಹೆಚ್ಚಳಕ್ಕೆ ಕಾರಣವೇನು, ಯುಪಿಎ ಅಧಿಕಾರಕ್ಕೆ ಬಂದ ಮೇಲೆ ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ ವಿಫಲವಾಗಿರುವುದಕ್ಕೆ ಕಾರಣವೇನು ಎಂದು ಜನರು ಚಿಂತಿಸಲಾರಂಭಿಸಿದಂತೆ ಅವರ ಯೋಚನೆಗಳನ್ನು ದಿಕ್ಕುತಪ್ಪಿಸುವ ಮಸಕುಗೊಳಿಸುವ ಧೂಳಿನ ಮೋಡಗಳು ಆವರಿಸತೊಡಗಿದವು. ಮಾಧ್ಯಮಗಳು ಮುಖ್ಯವಾಗಿ ಅಖಿಲ ಭಾರತೀಯವೆಂಬ ಹೆಸರಿನ ಮಾಧ್ಯಮಗಳು ಕಾಂಗ್ರೆಸ್‌ನ ವೈಫಲ್ಯಕ್ಕೆ ಮುಖ್ಯ ಕಾರಣ ಅವರು ತಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಯಾರು ಮುಖ್ಯ ಮಂತ್ರಿಯಾಗುವರು ಎಂಬುದನ್ನು ಜನತೆಯ ಮುಂದಿರಿಸಲಿಲ್ಲ. ಯಾರು ಎಂದು ಜನಕ್ಕೆ ತಿಳಿದಿದ್ದರೆ ಜನರು ಆ ಬಗ್ಗೆ ಹೆಚ್ಚು ಸ್ಪಷ್ಟತೆಯಿಂದ ಮತ ಹಾಕುತ್ತಿದ್ದರು, ಚುನಾವಣಾ ರಂಗದಲ್ಲಿ ನಿರ್ದಿಷ್ಟ ನಾಯಕತ್ವವಿದ್ದು ಆ ಮೂಲಕ ಹೆಚ್ಚು ಸಂಘಟಿತವಾಗಿ ಕೆಲಸ ಮಾಡಲು ಅವಕಾಶವಾಗುತ್ತಿತ್ತು ಎಂಬ ಧೂಳಿನ ಮೋಡಗಳನ್ನು ಹರಿಯಬಿಟ್ಟರು.

ಚುನಾವಣೆಯ ಅವಧಿಯಾದ್ಯಂತ ಜನರನ್ನು ಕಾಡಿದ ಏರುತ್ತಿರುವ ಬೆಲೆಗಳು, ಪಡಿತರ ವ್ಯವಸ್ಥೆ ನಾಶ ಮಾಡುವ ಪ್ರಯತ್ನಗಳು, ಹಂಚಿದ ಬಿಪಿಎಲ್ ಕಾರ್ಡ್‌ಗಳು, ಹೆಚ್ಚುತ್ತಿರುವ ನಿರುದ್ಯೋಗ, ಎಲ್ಲಾ ಪ್ಯಾಕೇಜ್‌ಗಳ ನಡುವೆಯೂ ಬಗೆಹರಿಯದ ಕೃಷಿ ಬಿಕ್ಕಟ್ಟು ಇತ್ಯಾದಿ ಅನೇಕ ಸಮಸ್ಯೆಗಳು ಜನ ಕಾಂಗ್ರೆಸ್ ಅನ್ನು ಅಧಿಕಾರಕ್ಕೆ ತರುವಲ್ಲಿ ಮೀನಮೇಷ ಎಣಿಸುವಂತೆ ಮಾಡಿತು. ಮುಸ್ಲೀಮರಂತೂ ಮತ್ತೆ ಕಾಂಗ್ರೆಸ್‌ಗೆ ಮತ ನೀಡಬೇಕಲ್ಲ ಎಂದು ಉರಿದುರಿದು ಬೀಳುತ್ತಿದ್ದರು. ತಮ್ಮನ್ನು ಕೇವಲ ಮತ ಬ್ಯಾಂಕ್ ಆಗಿ ಬಳಸಿಕೊಂಡ ಕಾಂಗ್ರೆಸ್ ಪಕ್ಷ ತಮ್ಮ ಸ್ಥಿತಿಯನ್ನು ದಲಿತರ ಸ್ಥಿತಿಯಷ್ಟೇ ಕೆಳಕ್ಕೆ ತಳ್ಳಿದೆ, ಅವರಿಗಿಂತಲೂ ಅಧಮವಾಗಿದೆ, ಸಾಚಾರ್ ಸಮಿತಿ ಇದನ್ನು ಬಿಚ್ಚಿ ಹೇಳಿದರೂ ಅದನ್ನು ಸರಿಪಡಿಸುವ, ಬಡ ಮುಸ್ಲೀಮರ ಕಷ್ಟಗಳಿಗೆ ಪರಿಹಾರ ನೀಡುವ ಯಾವುದೇ ಕೆಲಸ ಮಾಡಿಲ್ಲ ಎಂಬ ನೋವು ಅವರಲ್ಲಿ ಮಡುಗಟ್ಟಿತ್ತು.

ದಲಿತರು, ಹಿಂದುಳಿದ ಜಾತಿಗಳವರು ಬೇರೆ ಜಾತ್ಯಾತೀತ ಪಕ್ಷಗಳಿಗೆ ಮತ ನೀಡುವ ಅವಕಾಶವಿದ್ದರೆ ಅದೇ ಮೇಲು ಎಂಬ ಭಾವನೆ ತಳೆದಿದ್ದರು. ಅನಿವಾರ್ಯವಾಗಿ ಮಾತ್ರ ಕಾಂಗ್ರೆಸ್‌ಗೆ ಮತ ನೀಡುವ ನಿರ್ಬಂಧಕ್ಕೆ ಒಳಗಾಗಿದ್ದರು ಎಂಬುದು ವಿವಿಧ ಪ್ರದೇಶಗಳಲ್ಲಿ ಕಂಡ ಸತ್ಯ.

ಈ ಕಟು ವಾಸ್ತವವನ್ನು ಮುಚ್ಚಿಡಲು ಹಾಗೂ ಕಾಂಗ್ರೆಸ್ ತನ್ನ ನೀತಿಗಳನ್ನು ಬದಲಾಯಿಸಿಕೊಳ್ಳದೇ ಹೋದರೆ ಇತರೆ ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿಯೂ, ಲೋಕಸಭಾ ಚುನಾವಣೆಗಳಲ್ಲಿಯೂ ಪೆಟ್ಟು ತಿನ್ನುತ್ತದೆ ಎಂಬ ಸತ್ಯವನ್ನು ಮುಚ್ಚಿಡಲು ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿ ಯಾರು ಎಂಬುದನ್ನು ಘೋಷಿಸಿದ್ದರೆ ಅವರ ಮುಖ



ಬೆಲೆ ಏರಿಕೆಗೆ ಕಾರಣವಾದ ಯುಪಿಎ ಸರ್ಕಾರದ ನೀತಿಗಳ ಪರಿಣಾಮ

ನೋಡಿ ಮತ ಹಾಕುತ್ತಿದ್ದರು ಎಂದು ಬಿಂಬಿಸುತ್ತಿದ್ದಾರೆ.

ನಮ್ಮ ದೇಶದಲ್ಲಿರುವುದು ಸಂಸದೀಯ ಪ್ರಜಾಪ್ರಭುತ್ವ, ಅಧ್ಯಕ್ಷೀಯ ಪ್ರಜಾಪ್ರಭುತ್ವವಲ್ಲ. ಇಲ್ಲಿ ಪಕ್ಷಗಳು ಅವರು ಪ್ರತಿಬಿಂಬಿಸುವ ನೀತಿಗಳು ಮುಖ್ಯ, ವ್ಯಕ್ತಿಯಲ್ಲ. ಜನ ಶಾಸಕರನ್ನು ಆರಿಸಬೇಕು. ವಿವಿಧ ಪಕ್ಷಗಳಿಗೆ ಮತ ಅಥವಾ ಬಹುಮತ ನೀಡಬೇಕು. ಬಹುಮತ ಪಡೆದ ಪಕ್ಷದ ಶಾಸಕರು ಯಾರು ಆಯ್ಕೆಯಾಗಿದ್ದಾರೋ ಅವರಲ್ಲಿ ಒಬ್ಬರನ್ನು ನಾಯಕ/ಕಿಯನ್ನಾಗಿ ಆರಿಸಬೇಕು. ಅವರೇ ಮುಖ್ಯಮಂತ್ರಿಯಾಗುತ್ತಾರೆ. ಇದು ಸಂಸದೀಯ ಪ್ರಜಾಪ್ರಭುತ್ವದ ತಿರುಳು. ಇಲ್ಲಿ ಎರಡು ಹಂತದಲ್ಲಿ ಆಯ್ಕೆಯ ಅವಕಾಶಗಳನ್ನು ನೀಡಲಾಗಿದೆ. ಜನರು ಶಾಸಕರು ಯಾರು ಎಂಬುದನ್ನು ಆರಿಸಬೇಕು. ಮುಖ್ಯಮಂತ್ರಿಯಾಗುವ ವ್ಯಕ್ತಿ ಜನರಿಂದ ಮೊದಲು ಶಾಸಕನಾಗಿ/ಳಾಗಿ ಆರಿಸಲ್ಪಡಬೇಕು. ನಂತರದ ಆಯ್ಕೆ ಜನರಿಂದ ಆಯ್ಕೆಯಾದ ಶಾಸಕರಿಗೆ. ಅವರು ತಮ್ಮಲ್ಲೊಬ್ಬರು ಹೆಚ್ಚು ಅರ್ಹತೆಯುಳ್ಳವರನ್ನು ಆರಿಸಬೇಕು. ಶಾಸಕರಾಗಿ ಆಯ್ಕೆಯಾದವರಿಗೆ ಮುಖ್ಯಮಂತ್ರಿ ಸ್ಥಾನದ ಮಹತ್ವ, ಅಲ್ಲಿಯ ಕೆಲಸದ ಸಂಕೀರ್ಣತೆ ಹೊಣೆಗಾರಿಕೆಗಳು ಮತ್ತು ಶಾಸಕರ ಅರ್ಹತೆಗಳ ಬಗ್ಗೆ ಹೆಚ್ಚು ಪರಿಚಯವಿರುತ್ತದೆ. ಆ ಮಾಹಿತಿ ಮತ್ತು ಹೊಣೆಗಾರಿಕೆಯಿಂದ ಹೆಚ್ಚು ಸೂಕ್ತ ವ್ಯಕ್ತಿಯನ್ನು ಮುಖ್ಯಮಂತ್ರಿಸ್ಥಾನಕ್ಕೆ ಆಯ್ಕೆ ಮಾಡುತ್ತಾರೆ ಎಂಬುದು ಈ ವಿಧಾನದಲ್ಲಿ ಅಡಗಿರುವ ತತ್ವ.

ಆದರೆ ಚುನಾವಣೆಗೆ ಮೊದಲೇ ಇವರೇ ಮುಖ್ಯಮಂತ್ರಿ ಎಂದು ಸೂಚಿಸಿದರೆ ಶಾಸಕರು ಅವರನ್ನು ಆಯ್ಕೆ ಮಾಡುವ ಅವಕಾಶವನ್ನು ಕಸಿದುಕೊಂಡಂತೆ ಆಗುತ್ತದೆ. ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಸೂಚಿಸಲ್ಪಟ್ಟವರು ಶಾಸಕರಾಗಿಯೇ ಆಯ್ಕೆಯಾಗದಿದ್ದರೆ.? ಅವರ ಮುಖವನ್ನು ನೋಡಿ ಪಕ್ಷವನ್ನು ಆರಿಸಿ ತಂದ ಜನತೆಗೆ ಮೋಸ ಮಾಡಿದಂತಾಗುವುದಿಲ್ಲವೇ?

ಚುನಾವಣೆಗೆ ಮೊದಲೇ ಮುಖ್ಯ ಸ್ಥಾನದ ಅಭ್ಯರ್ಥಿಯನ್ನು ಆಯ್ಕೆ ಮಾಡಿ ಜನತೆಯ ಮುಂದಿಡುವವರು ಯಾರು? ಆಯಾ ಪಕ್ಷದ ನಾಯಕರು. ಹಾಗೆಂದಾಗ ಜನರು ಮತ್ತು ಜನರಿಂದ ಆಯ್ಕೆಯಾದ ಶಾಸಕರ ಆಯ್ಕೆಗೆ ಬದಲಾಗಿ ಜನರಿಗೆ ನೇರವಾಗಿ ಸಂಬಂಧವಿಲ್ಲದ ಪಕ್ಷದ ನಾಯಕರ ಆಯ್ಕೆಗೆ ಹೆಚ್ಚು ಅವಕಾಶ ಸಿಗುತ್ತದೆ. ಜನರ ಪ್ರಜಾಪ್ರಭುತ್ವ ಆಯ್ಕೆಯ ಮಾರ್ಗ ಕುಂಠಿತಗೊಳ್ಳುತ್ತದೆ.

ಮುಖ್ಯಮಂತ್ರಿ ಅಥವಾ ಪ್ರಧಾನಮಂತ್ರಿ ಸ್ಥಾನದ ಅಭ್ಯರ್ಥಿಗಳನ್ನು ಮೊದಲೇ ಮುಂದಿಡುವ ಮಾರ್ಗವನ್ನು ಅಪ್ರತ್ಯಕ್ಷವಾಗಿ ಮಾಧ್ಯಮಗಳು ಪತ್ರಿಕೆಗಳು ಸಂವಿಧಾನದ ಆಶಯಗಳಿಗೆ ವಿರೋಧವಾಗಿ ಜಾರಿಗೆ ತರಲು ಯತ್ನಿಸುತ್ತಿವೆ. ಲೋಕಸಭಾ ಚುನಾವಣೆಗಳನ್ನು ಸೋನಿಯಾಗಾಂಧಿ, ವಾಜಪೇಯಿ ನಡುವಣ ಸ್ಪರ್ಧೆ, ವಿಧಾನಸಭಾ ಚುನಾವಣೆಗಳನ್ನು ಯಾರೋ ಇಬ್ಬರು ಮೂವರ ನಾಯಕ ನಡುವಣ ಸ್ಪರ್ಧೆಯಾಗಿಸುವುದು, ಅವರ ಉಡುಗೆ, ಕೊಡುಗೆ, ಮಾತಿನ ಶೈಲಿ, ಜೀವನ ಇವುಗಳ ಮಟ್ಟಕ್ಕೆ ಇಳಿಸುವುದು ಆ ಮೂಲಕ ಜನರ ಸಮಸ್ಯೆಗಳನ್ನು ಮುಚ್ಚಿಹಾಕುವ ಕುತಂತ್ರಗಳಲ್ಲೊಂದಾಗಿದೆ.

ಜಿಲ್ಲಾವಾರು ಪಕ್ಷಗಳ ಬಲಾಬಲ

	ಒಟ್ಟು	ಬಿಜೆಪಿ	ಕಾಂಗ್ರೆಸ್	ದಳ(ಎಸ್)	ಇತರೆ
ಬೆಂಗಳೂರು	7	6	1	0	0
ಬೆಂ.ಗ್ರಾ	4	2	2	0	0
ಬಿಬಿಎಂಪಿ	21	11	9	1	0
ಚಾ.ನಗರ	4	0	4	0	0
ಚಿಕ್ಕಬಳ್ಳಾಪುರ	5	0	4	1	0
ಹಾಸನ	7	0	2	5	0
ಕೊಡಗು	2	2	0	0	0
ಕೋಲಾರ	6	2	2	1	1
ಮಂಡ್ಯ	7	0	2	4	1
ಮೈಸೂರು	11	2	8	1	0
ತುಮಕೂರು	11	3	4	3	1
ರಾಮನಗರ	4	0	2	2	0
ಚಿಕ್ಕಮಗಳೂರು	4	4	1	0	0
ಚಿತ್ರದುರ್ಗ	6	2	1	1	2
ಕೊಪ್ಪಳ	5	2	1	1	0
ದಕ್ಷಿಣಕನ್ನಡ	8	4	4	0	0
ದಾವಣಗೆರೆ	8	6	2	0	0
ಶಿವಮೊಗ್ಗ	7	5	2	0	0
ಉಡುಪಿ	5	4	1	0	0
ಉತ್ತರಕನ್ನಡ	6	2	2	2	0
ಬಳ್ಳಾರಿ	9	8	1	0	0
ರಾಯಚೂರು	7	2	3	2	0
ಬಾಗಲಕೋಟೆ	7	7	0	0	0
ಬೆಳಗಾವಿ	18	9	7	2	0
ಬೀದರ್	6	2	3	1	0
ವಿಜಾಪುರ	8	5	3	0	0
ಧಾರವಾಡ	7	6	1	0	0
ಗದಗ	4	4	0	0	0
ಗುಲ್ಬರ್ಗಾ	13	5	7	1	0
ಹಾವೇರಿ	6	5	1	0	0

ವಿಧಾನಸಭಾ ಚುನಾವಣೆಯಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಪಡೆದ ಮತಗಳ ವಿವರ

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ಯು ಪ್ರಸಕ್ತ ವಿಧಾನಸಭಾ ಚುನಾವಣೆಯಲ್ಲಿ ಒಟ್ಟು 9 ಸ್ಥಾನಗಳಿಗೆ ಸ್ಪರ್ಧಿಸಿತ್ತು. ಸಿಪಿಐ(ಎಂ) ಅಭ್ಯರ್ಥಿಗಳು, ಇತರ ಪ್ರಮುಖರು ಗಳಿಸಿದ ಮತಗಳ ವಿವರ ಇಂತಿದೆ.

ಬಾಗೇಪಲ್ಲಿ:

ಜಿ.ವಿ.ಶ್ರೀರಾಮರೆಡ್ಡಿ, ಸಿಪಿಐ(ಎಂ)	31,306
ಸಂಪಂಗಿ.ಎನ್, ಕಾಂಗ್ರೆಸ್	32,244
ಡಿ.ನಾಗರಾಜರೆಡ್ಡಿ ಜೆಡಿ(ಎಸ್)	27,898
ಸಾಯಿಕುಮಾರ್, ಬಿಜೆಪಿ	26,070
ಬಿ.ನರಸರೆಡ್ಡಿ, ಬಿಎಸ್‌ಪಿ	2,315

ಗೌರಿ ಬಿದನೂರು :

ಜಿ.ಸಿದ್ದಗಂಗಪ್ಪ, ಸಿಪಿಐ(ಎಂ)	1,806
ಎಚ್.ಶಿವಶಂಕರ್‌ರೆಡ್ಡಿ, ಕಾಂಗ್ರೆಸ್	38,127
ರವಿನಾರಾಯಣರೆಡ್ಡಿ, ಬಿಜೆಪಿ	27,959
ಜ್ಯೋತಿರೆಡ್ಡಿ, ಜೆಡಿ(ಎಸ್)	27,480

ಕೆ.ಜಿ.ಎಫ್ (ಮೀಸಲು) :

ಪಿ.ತಂಗರಾಜ್, ಸಿಪಿಐ(ಎಂ)	3,383
ವಿ.ಶ್ರೀನಿವಾಸ್, ಕಾಂಗ್ರೆಸ್	12,650
ವೈ.ಸಂಪಂಗಿ, ಬಿಜೆಪಿ	29,623
ಭಕ್ತವತ್ಸಲಂ, ಜೆಡಿ(ಎಸ್)	25,529
ರಾಜೇಂದ್ರನ್, ಆರ್‌ಪಿಐ	26,323
ಆನಂದರಾಜ್, ಎಐಎಡಿಎಂಕೆ	2,093

ದೊಡ್ಡಬಳ್ಳಾಪುರ :

ಆರ್.ಚಂದ್ರತೇಜಸ್ವಿ, ಸಿಪಿಐ(ಎಂ)	1,642
ಜೆ.ನರಸಿಂಹಸ್ವಾಮಿ, ಕಾಂಗ್ರೆಸ್	51,724
ಎಂ.ನಾರಾಯಣಗೌಡ, ಬಿಜೆಪಿ	47,970
ಸಿ.ಚನ್ನಿಗಪ್ಪ, ಜೆಡಿ(ಎಸ್)	47,970
ಪುರುಷೋತ್ತಮ, ಬಿಎಸ್‌ಪಿ	1,946

ಕೃಷ್ಣರಾಜಪುರ:

ಗೌರಮ್ಮ ಸಿಪಿಐ(ಎಂ)	1,866
ಎ.ಕೃಷ್ಣಪ್ಪ, ಕಾಂಗ್ರೆಸ್	51,180
ನಂದೀಶ್‌ರೆಡ್ಡಿ, ಬಿಜೆಪಿ	62,081
ಎಲ್.ಮುನಿಸ್ವಾಮಿ, ಜೆಡಿ(ಎಸ್)	5,845
ಅಬ್ರಾಹಂ ಟಿ.ಜೆ.	1,478

ಮಂಗಳೂರು ನಗರ ದಕ್ಷಿಣ:

ಯಶವಂತ ಮರೋಳಿ, ಸಿಪಿಐ(ಎಂ)	4,089
ಇವಾನ್ ಡಿಸೋಜಾ, ಕಾಂಗ್ರೆಸ್	51,373
ಯೋಗೀಶ್ ಭಟ್, ಬಿಜೆಪಿ	60,133
ಧರ್ಮೇಂದ್ರ ಜೆಡಿ(ಯು)	514

ಮಂಗಳೂರು:


ಕೆ.ಯಾದವಶೆಟ್ಟಿ, ಸಿಪಿಐ(ಎಂ)	4057
ಯು.ಟಿ.ಖಾದರ್, ಕಾಂಗ್ರೆಸ್	50,626
ಪದ್ಮನಾಭ ಕೊಟಾರಿ, ಬಿಜೆಪಿ	43,393
ನಾಜಿರ್ ಉಳ್ಳಾಲ, ಜೆಡಿ(ಎಸ್)	2896
ಅಬ್ದುಲ್ ಖಾದರ್, ಬಿಎಸ್‌ಪಿ	277


ಬೈಂದೂರು:

ಯು.ದಾಸ್ ಭಂಡಾರಿ, ಸಿಪಿಐ(ಎಂ)	2,908
ಗೋಪಾಲ ಪೂಜಾರಿ, ಕಾಂಗ್ರೆಸ್	54,226
ಕೆ.ಲಕ್ಷ್ಮಿನಾರಾಯಣನ್, ಬಿಜೆಪಿ	62,196
ಶಿರಿಯಾರ ಮುದ್ದಣ್ಣ ಶೆಟ್ಟಿ, ಜೆಡಿ(ಎಸ್)	1,587
ಉದಯಕುಮಾರ ತಲ್ಲೂರು	2,908

ಗುಲ್ಬರ್ಗಾ ಗ್ರಾಮೀಣ (ಮೀಸಲು)

ಮಾರುತಿ ಮಾನ್ಪಡೆ, ಸಿಪಿಐ(ಎಂ)	10,586
ಚಂದ್ರಿಕ ಪರಮೇಶ್ವರ, ಕಾಂಗ್ರೆಸ್	20,228
ರೇವುನಾಯಕ್ ಬೆಳಮಗಿ, ಬಿಜೆಪಿ	37,779
ಸಿ.ಗುರುನಾಥ್, ಜೆಡಿ(ಎಸ್)	14,170
ಚಂದ್ರಕಾಂತ, ಬಿಎಸ್‌ಪಿ	5,993





ನನಗೆ ಥಟ್ಟನೆ ರಜಾಕರ ಚಳುವಳಿ ನೆನಪಾಯ್ತು. ಪ್ರಭುತ್ವಕ್ಕಾಗಿ ನಡೆದ ಕ್ರೂರ ಆಟವದು. ಧರ್ಮದಂಗೆಯ ಹುಸಿ ಲೇಪ ಬಳಿದರು ಸುಳ್ಳು ಇತಿಹಾಸಕಾರರು.

ಜನಸಾಮಾನ್ಯರು ನೊಂದರು. ನಲುಗಿದರು. ಪರಸ್ಪರ ಸಹಾಯ ಹಸ್ತದ ನೆರವಿನಡಿಯಲ್ಲಿ ಮಾನವೀಯತೆಯನ್ನು ಮತ್ತೆ ಗಟ್ಟಿಗೊಳಿಸಿದರು. ಹಿಂದುಗಳ ಮನೆಯಲ್ಲಿ ಮುಸ್ಲೀಮರು, ಮುಸ್ಲೀಮರ ಆಸರೆಯಲ್ಲಿ ಹಿಂದೂಗಳು ಹೀಗೆ ಬದುಕನ್ನು ನಿರಾಳಗೊಳಿಸಿಕೊಂಡರು.

ಪ್ರೇಮಸಂಬಂಧದಾಚೆಗೆ ಯಾವುದೇ ಜಾತಿ, ಧರ್ಮ, ಅಧಿಕಾರ ಸಂಬಂಧಗಳು ಪ್ರಮುಖ ಅಲ್ಲವೇ ಅಲ್ಲ ಎಂಬುದು ಸಾಬೀತು ಮಾಡಿದೆ ಈ ನೆಲ.

ನಿರ್ಭಯದ ಸ್ನೇಹ, ಪ್ರೀತಿಯ ಪರಂಪರೆ

ಮೇ ತಿಂಗಳು ದುಪ್ಪಟ್ಟು ಕಾವಿನಿಂದ ಕುದಿಯುತ್ತಿತ್ತು. ಸೂರ್ಯ ಮತ್ತು ಚುನಾವಣೆಗಳ ಬಿಸಿಲ ಕಾವ್ಯದ ಜುಗಲ್‌ಬಂದಿ ಚಡಾವಡಿಯ ಏರುಗೈಯಲ್ಲಿತ್ತು. ಅದೊಂದು ರೀತಿಯಲ್ಲಿ- ಹರದೇಸಿ ನಾಗೇಸಿ ಪದದಂಥ ಪೈಪೋಟಿ. ಬೂರ್ಜ್ವಾ ರಾಜಕೀಯ ಪಕ್ಷಗಳ ಹೇಸಿಗೆ ಬರಿಸುವ ಅನಾಚಾರಗಳ ಆಟ. ಪ್ರಕೃತಿ ವಾತಾವರಣದ ಉಷ್ಣಾಂಶ 42 ಡಿಗ್ರಿ. ಇತ್ತ ಚುನಾವಣಾ ಅಖಾಡದಲ್ಲಿ ಉಷ್ಣಾಂಶ ಇನ್ನೂ ಹೆಚ್ಚು. ಮೊದ ಮೊದಲಿಗೆ ತಮ್ಮ ಕೆಲಸ ಮಾಡದ ರಾಜಕಾರಣಿಗಳ ಬಗ್ಗೆ ಅಸಮಾಧಾನದಿಂದ ಗೊಣಗಾಡುತ್ತಿದ್ದ ಮತದಾರ ಪ್ರಭುಗಳು ಕ್ರಮಕ್ರಮೇಣವಾಗಿ ಒಂದು ನಮೂನೆಯ ಜುಮಾನಿಗೆ ಒಳಗಾಗತೊಡಗಿದರು. ಒಂದೂವರೆ ವರ್ಷದ ಮೊದಲೇ ಜನತೆಯ ಮೇಲೆ ಚುನಾವಣೆ ಹೇರಿದ ಕಾಂಗ್ರೆಸ್, ಬಿಜೆಪಿ, ಜೆಡಿ(ಎಸ್)ಗಳು ನಾಚಿಕೆಗ್ಗೇಡಿಗಳಂತೆ ಎಲ್ಲೆಡೆ ಠಳಾಯಿಸುತ್ತಿದ್ದರು. ತಮ್ಮ ನೀಚ, ಅನೈತಿಕ ಮತ್ತು ಕ್ರೂರ ಅಧಿಕಾರದಾಹದ ಮೇಲೆ ಮುಖವಾಡ ಧರಿಸಿ ಸಂದಿ, ಗೊಂದಿಗಳಲ್ಲಿ ನುಸುಳಿ ತೆವಳುತ್ತಿದ್ದರು. ಸಾಲ, ಹಸಿವು, ಬಡತನ, ನಿರುದ್ಯೋಗ, ಬೆಲೆಯೇರಿಕೆಯಿಂದ ತತ್ತರಿಸಿದ ಜನತೆಯನ್ನು ಭ್ರಮಾತ್ಮಕ ಮತ್ತು ಲಾಲಸೆಯ ಜಾಲದಲ್ಲಿ ತಳ್ಳಲು ಎಲ್ಲ ರೀತಿಯ ಹಿಕ್ಮತ್ತು ಹೆಣೆಯುತ್ತಿದ್ದರು. ಜಾತಿ, ಉಪಜಾತಿ, ಧರ್ಮ ಬಂಧುತ್ವದ ಬಗೆಗಳು ಗಲ್ಲಿ, ಗಲ್ಲಿಗಳಲ್ಲಿ ಅವತರಿಸಿದವು. ಕುರುಡು ಕಾಂಚಾಣದ ಥಕಥೈ ನಿನಾದ ಮೋಹಕಗೊಳಿಸತೊಡಗಿತು. ಜಾದೂ ತೆರದಲ್ಲಿ ಸಂಘಗಳ ಅಕೌಂಟಿಗೆ ಆಯಾ ಪಕ್ಷಗಳ ಹಣ ಜಮಾ ಆಗತೊಡಗಿತು. ಕೂಲಿ ಪಡೆದು ಪಕ್ಷಗಳ ಪ್ರಚಾರಕ್ಕೆ ಹೊರಟವರ ದಂಡು ಮುಂಜಾನೆ ಕಾಂಗ್ರೆ, ಮದ್ಯಾಹ್ನ ಬಿಜೆಪಿ, ಸಂಜೆಗೆ ದಳ(ಎಸ್) ಹೀಗೆ ರಂಗು ಬಿರಂಗಿಯಾಗಿ ನಡೆದಾಡುತ್ತಿತ್ತು...

ಭಿನ್ನತೆ

ವರ್ಷದುದ್ದಕ್ಕೂ ಜನತೆಯ ಪ್ರಶ್ನೆಗಳನ್ನು ಕೈಗೆತ್ತಿಕೊಂಡು ಹೋರಾಡುತ್ತ ಬಂದಿರುವ ಸಿಪಿಐ(ಎಂ) ಪಕ್ಷದ ಚುನಾವಣಾ ಪ್ರಚಾರ ಮಾತ್ರ ಸಂಪೂರ್ಣ ಭಿನ್ನವಾಗಿತ್ತು. ಪಶ್ಚಿಮ ಬಂಗಾಳ, ಕೇರಳ, ತ್ರಿಪುರ ರಾಜ್ಯಗಳಲ್ಲಿ ಎಡ ಸರ್ಕಾರಗಳ ಸಾಧನೆ, ಜನತೆ ಒಗ್ಗೂಡಬೇಕಾದ ಜರೂರಿ, ನೆಲದ ಭಾವೈಕ್ಯತೆಯ ಬೇರುಗಳ ಮಹತ್ವ ಹೀಗೆ ನಾಡ ಸಂರಕ್ಷಣೆಯ ನೆಲೆಯಲ್ಲಿ ಸಭೆಗಳು ನಡೆಯುತ್ತಿದ್ದವು.

ಆವತ್ತು ಸೀತಾರಾಂ ಯೆಚೂರಿ ಶಹಾಬಾದಿನಲ್ಲಿ ಸಭೆಯನ್ನುದ್ದೇಶಿಸಿ ಮಾತಾಡುತ್ತಿದ್ದರು. ಚುನಾವಣೆಯ ಸೋಲು ಗೆಲುವಿನ ಲೆಕ್ಕಾಚಾರದ ಸೀಮಿತ ವ್ಯಾಪ್ತಿಯಾಚೆಗೆ, ಸಾರ್ವಕಾಲಿಕವೂ ಸತ್ಯದ ಬೆಳಕು ಚೆಲ್ಲುವ ಮಾತುಗಳು ಘನಗಂಭೀರ ಸಮುದ್ರದಲೆಗಳಂತೆ ತೇಲಿ ಬರುತ್ತಿದ್ದವು.

"ಈ ನೆಲ ಯಾವತ್ತೂ ದ್ವೇಷದ ಸಂಸ್ಕೃತಿ ಒಪ್ಪುವುದಿಲ್ಲ. ಈ ನೆಲದ ಮಣ್ಣಿಗೆ ಸೌಹಾರ್ದ, ಭಾವೈಕ್ಯತೆಯ ಪರಂಪರೆಯಿದೆ. ಸೂಫಿ, ಸಂತ, ಅವಧೂತ, ಆರೂಢ ಪರಂಪರೆಯಂತೆ ಕರ್ನಾಟಕದ 12ನೇ ಶತಮಾನದ ಕಾಯಕಜೀವಿಗಳ ಚಳುವಳಿಯಂತೆ ಬಸವ, ಅಲ್ಲಮಾದಿ ಪ್ರಥಮರು ಅಸಮಾನತೆಯ ವಿರುದ್ಧ ದನಿ ಎತ್ತಿದ ನಾಡಿದು. ಈ ಹೋರಾಟದ ದೀವಿಗೆಯ ಬೆಳಕಲ್ಲಿ ಕರ್ನಾಟಕವನ್ನು ಬೆಳಗಬೇಕಿದೆ. ಆದ್ದರಿಂದಲೇ ಕೋಮುವಾದವನ್ನು ಸೋಲಿಸಬೇಕಿದೆ."

ಅಲ್ಲೊಂದು ಸಂಸ್ಥಾನ

ಸಂಗಾತಿ ಯೆಚೂರಿ ಮಾತುಗಳು ಮತ್ತೆ ಮತ್ತೆ ಮೆಲುಕು ಹಾಕುವ ಹೊತ್ತಲ್ಲಿಯೇ ಕಾಂ.ಬಾಣೆಯವರು ತೊನಸಳ್ಳಿಗೆ ಬರಲು ಕರೆದರು. ಶಹಾಬಾದಿನಿಂದ ಕೇವಲ ಆರು ಕಿ.ಮೀ ದೂರದಲ್ಲಿದೆ ತೊನಸಳ್ಳಿ, ಅಲ್ಲೊಂದು ಸಂಸ್ಥಾನ. ಶ್ರೀ ಅಲ್ಲಮಪ್ರಭು ಶರಣ ಪೀಠ. ಕಿರಿಯ ಪೂಜ್ಯ ಶ್ರೀ ಮಲ್ಲಣಪ್ಪ ಅಪ್ಪ ಈ ಸಂಸ್ಥಾನದ ಈ ತಲೆಮಾರಿನ ಪೀಠಾಧಿಕಾರಿ.

ನಾವು ಚುನಾವಣೆ, ಅದು ಇದೂಂತ ಚರ್ಚೆಗೆ ತೊಡಗಿದೆವು. ಎಂ.ಎ. ಓದಿಕೊಂಡ ಕಿರಿಯ ಮಲ್ಲಣಪ್ಪ ಅಪ್ಪ ಪ್ರಗತಿಪರ ವಿಚಾರವಾದಿಗಳೆಂಬುದು ಥಟ್ಟನೆ ಅರಿವಿಗೆ ಬರುತ್ತದೆ. ನಾನು ಕುತೂಹಲದಿಂದ ಸಂಸ್ಥಾನ ನಡೆದು ಬಂಧ ಹಿನ್ನೆಲೆ ಕೆದಕಿದೆ. ನಿರರ್ಗಳವಾಗಿ ಮಾತಾಡುವ ಮಲ್ಲಣಪ್ಪ ಅಪ್ಪ ಅವರು ಸುರು ಮಾಡಿದ್ದೇ "ನಮ್ದು ಭಾವೈಕ್ಯ ಪರಂಪರೆ. ನಮ್ಮ ಹಿರಿಕರು ಈ ತೊನಸಳ್ಳಿಗೆ ಬಂದ ಕೂಡಲೆ ಪೂಜ್ಯ ಶ್ರೀ ಸುಲ್ತಾನ ಅಹ್ಮದ್ ಶಾಹ ವಲಿ ದೇವಸ್ಥಾನ ಕಟ್ಟಿಸಿದರು. ನಮ್ಮ ವಂಶದಾಗ ಯಾರೇ ಸತ್ತ ಮೇಲೆ ಸಮಾಧಿಯು ಮುಸ್ಲಿಂರ ಮಜರನಂತೆ ನಿರ್ಮಿಸಲಾಗ್ತದೆ.... ಮುಸ್ಲೀಮರ ಚಾಂದ್ ಮತ್ತು ಕುದುರೆಗೆ ಪೂಜೆ ಮಾಡುತ್ತೇವೆ. ಅವೇ ನಮ್ಮ ಸಂಕೇತ. ಮೊಹರಂ ಎಂಟನೆಯ ದಿವಸದಲ್ಲಿ ವಿಜೃಂಭಣೆಯ ಉತ್ಸವ ಮಾಡ್ತೇವೆ. ಹಿಂದು- ಮುಸ್ಲಿಂ ಸೌಹಾರ್ದ ಪರಂಪರೆಯೇ ನಮ್ಮ ಸಂಸ್ಥಾನದ ಜೀವಾಳ.

ವಿಜಾಪುರ ಜಿಲ್ಲೆಯ ಜಮಖಂಡಿ ಕ್ಷೇತ್ರದ ಮಹಾರಾಜರಾಗಿದ್ದ ನಮ್ಮ ಹಿರಿಯರಾದ ಶ್ರೀ ಶಿವರಾಯ ಮಹಾರಾಜರು, ಅಸ್ಥಿರ ಅಧಿಕಾರ ತೊರೆದು ಲೋಕಕಲ್ಯಾಣಕ್ಕಾಗಿ (ಅಲ್ಲಮ ಪ್ರಭುಗಳ ಅಣತಿಯಂತೆ) ಹೊರಟರು. ಅವರ ನಂತರದ ತಲೆಮಾರಿನ ಯಲಬಣ್ಣ ಮಹಾರಾಜರು, ಶ್ರೀ ಶೇಖ ಸೈಯದ್ ಸುಲೇಮಾನ್ ಸಾಹೇಬರೆಂದೇ ಖ್ಯಾತರಾದರು. ಅವರ ಪುತ್ರ ಮಲ್ಲಪ್ಪ ಬೀದರಿನ ಅಲ್ಲಮ ಪ್ರಭು ಗದ್ದುಗೆಯಲ್ಲಿ ನೆಲೆಸಿ ನಂತರ ಇಟಗಿಗೆ ಬಂದರು. ಇಟಗಿಯಿಂದ ತೊನಸಳ್ಳಿಗೆ ಬಂದ ಇವರ ವಂಶಸ್ಥರು ಈವರೆಗೂ ಸುತ್ತಮುತ್ತಲಿನ ಗ್ರಾಮಗಳ ಜನರ ನಡುವೆ ಭಾವೈಕ್ಯತೆಯ ಮನೋಭಾವ ಸಂಸ್ಕರಿಸುವ ಕಾಯಕದಲ್ಲಿ ತೊಡಗಿದ್ದಾರೆ. ಸುಮಾರು 150 ವರ್ಷಗಳಿಂದ ಈ ಸಂಸ್ಥಾನ ನಡೆದುಕೊಂಡು ಬಂದಿದೆ".

ಶ್ರೀ ಮಲ್ಲಣಪ್ಪ ಅಪ್ಪ ತುಸು ಸಮಯದಲ್ಲಿಯೇ ತಮ್ಮ ವಂಶಾವಳಿಯ ಚರಿತ್ರೆ ಅರುಹಿದರು. ನಮ್ಮನ್ನು ಕರೆದೊಯ್ದು ಗುರುಪೀಠ ತೋರಿದರು. ಥೇಟ್ ಮುಸ್ಲಿಂ ಪೂಜಾ ಪೀಠದಂತೆ ಚಾಂದ್ ಕುದುರೆ, ಹಸಿರು ದಟ್ಟಿ, ನವಿಲುಗರಿ ......

ಪ್ರಭುತ್ವಕ್ಕಾಗಿ ನಡೆದ ಕ್ರೂರ ಆಟ

ನನಗೆ ಥಟ್ಟನೆ ರಜಾಕರ ಚಳುವಳಿ ನೆನಪಾಯ್ತು. ಪ್ರಭುತ್ವಕ್ಕಾಗಿ ನಡೆದ ಕ್ರೂರ ಆಟವದು. ಧರ್ಮದಂಗೆಯ ಹುಸಿ ಲೇಪ ಬಳಿದರು ಸುಳ್ಳು ಇತಿಹಾಸಕಾರರು. ಜನಸಾಮಾನ್ಯರು ನೊಂದರು. ನಲುಗಿದರು. ಪರಸ್ಪರ ಸಹಾಯ ಹಸ್ತದ ನೆರವಿನಡಿಯಲ್ಲಿ ಮಾನವೀಯತೆಯನ್ನು ಮತ್ತೆ ಗಟ್ಟಿಗೊಳಿಸಿದರು. ಹಿಂದುಗಳ ಮನೆಯಲ್ಲಿ ಮುಸ್ಲೀಮರು, ಮುಸ್ಲೀಮರ ಆಸರೆಯಲ್ಲಿ ಹಿಂದೂಗಳು ಹೀಗೆ ಬದುಕನ್ನು ನಿರಾಳಗೊಳಿಸಿಕೊಂಡರು. ಪ್ರೇಮಸಂಬಂಧದಾಚೆಗೆ ಯಾವುದೇ ಜಾತಿ, ಧರ್ಮ, ಅಧಿಕಾರ ಸಂಬಂಧಗಳು ಪ್ರಮುಖ ಅಲ್ಲವೇ ಅಲ್ಲ ಎಂಬುದು ಸಾಬೀತು ಮಾಡಿದೆ ಈ ನೆಲ.

'ಮೊದಲು ನನ್ ಜೀವಾ ತಗೋರಿ'


ಇಂಥದೇ ಅದ್ಭುತ ಹಿನ್ನೆಲೆ ಈ ಸಂಸ್ಥಾನಕ್ಕೂ ಇದೆ. ರಜಾಕರ ದಂಗೆ ಒಂದು ಘಟ್ಟಕ್ಕೆ ಬಂದು, ಕೇಂದ್ರದಿಂದ ಮಿಲ್ಟ್ರಿ ಮಧ್ಯಪ್ರವೇಶಿಸಿ ಹೈದರಾಬಾದಿನ ನಿಜಾಮ ರಾಜಿನಾಮೆಗೆ ಸಹಿ ಮಾಡಿ, ಹೈದರಾಬಾದ್ ಸಂಸ್ಥಾನ ಭಾರತದೊಳಗೆ ವಿಲೀನಗೊಂಡಿತು. ಬೆನ್ನ ಹಿಂದೆಯೇ ಪ್ರತೀಕಾರವಾಗಿ ಮುಸ್ಲಿಮರ ಮೇಲೆ ಧಾಳಿ ಸುರುವ್ತಾಯಿತು. ಹಿಂದೆ ರಜಾಕಾರರ ಧಾಳಿಗೆ ಒಳಗಾದವರು ಈಗ ಪ್ರತಿಧಾಳಿಗೆ ಮುಂದಾದರು. ಅಂತೆಯೇ ತೊನಸಳ್ಳಿ ಸುತ್ತಮುತ್ತಲೂ ಇಂಥ ಕಾರ್ಮೋಡ ಕವಿಯಿತು. ಹತ್ತಾರು ಹಳ್ಳಿಯ ಮುಸ್ಲಿಂ ಜನ ಸಂಸಾರ ಸಮೇತ ನೆರಳರಸಿ ಬಂದು ಈ ಮಲ್ಲಣಪ್ಪ ಅಪ್ಪ ಸಂಸ್ಥಾನ ತಲುಪಿದರು. ಅವರನ್ನು ಕೊಲ್ಲಲು ಕತ್ತಿ ಇರಿದು ಬಂದವರಿಗೆ ಈ ಸಂಸ್ಥಾನದ ಪೀಠಾಧಿಕಾರಿ ಹೇಳಿದರು. "ಮೊದಲು ನನ್ ಜೀವಾ ತಗೋರಿ.... ಆಮ್ಯಾಲ ಇವರ್ದು....." ಕೊಲ್ಲಲು ಬಂದವರು ಹಲ್ಲು ಮಸೆಯುತ್ತ ವಾಪಸ್ಸಾದರು. ಅಲ್ಲಾನ ಪ್ರತಿ ಸ್ವರೂಪವೇ ಈ ಮಲ್ಲಣಪ್ಪ ಅಪ್ಪ... ಎಂದು ಕಾಸಿಂ ಮತ್ತು ಅವರ ಬಾಂಧವರು ಆನಂದ ಭಾಷ್ಪ ತಂದರು. ಈಗಲೂ ಸುತ್ತಮುತ್ತಲಿನೂರಿನ ಮುಸ್ಲಿಂ ಜನತೆ ದರ್ಗಾದಷ್ಟೇ ಪವಿತ್ರ ಸ್ಥಾನ ಈ ಪೀಠವೆಂದು ಭಾವಿಸಿ ನಡೆದುಕೊಳ್ಳುತ್ತಾರೆ. ಸೂಜಿ ಮೊನೆಯಷ್ಟು ಭೇದಭಾವವೂ ಇಲ್ಲದೆ ಅತ್ಯಂತ ನಿರ್ಭಯದ, ಸ್ನೇಹ ಪ್ರೀತಿಯ ಭವ್ಯ ಪರಂಪರೆಯ ಈ ತಾಣ ನನಗಂತು ಅಭಿಮಾನದ ಪ್ರತೀಕವೆನಿಸಿತು. ಹೆಜ್ಜೆ ಹೆಜ್ಜೆಗೂ ಸಿಗುವ ಇಂಥ ಜೀವಪರ, ಮಾನವೀಯ ಸಂಸ್ಕೃತಿಯೇ ಕೋಮುವಾದ ಹಿಮ್ಮೆಟ್ಟಿಸಿದೆ. ಸರ್ವಜ್ಞನ ವಚನವೊಂದು ಗಾಳಿಯಲ್ಲಿ ಹರಿದಾಡುತ್ತಿತ್ತು.

ಕುಲವಿಲ್ಲಯೋಗಿಗೆ / ಛಲವಿಲ್ಲ ಜ್ಞಾನಿಗೆ
ತೊಲೆಗಂಬವಿಲ್ಲ ಗಗನಕ್ಕೆ
ಸ್ವರ್ಗದಲ್ಲಿ ಹೊಲಗೇರಿಯಿಲ್ಲ ಸರ್ವಜ್ಞ.



ಮೇ 26, 2008 ರಂದು ಬೆಂಗಳೂರಿನ ಮೈಕೊ ಕಾರ್ಖಾನೆಯಲ್ಲಿ ವಜಾಗೊಂಡ ಕಾರ್ಮಿಕರಿಗೆ ಮತ್ತೆ ಉದ್ಯೋಗ ನೀಡಬೇಕೆಂದು ಒತ್ತಾಯಿಸಿ ಮೈಕೊ ಗುತ್ತಿಗೆ ಕಾರ್ಮಿಕ ಸಂಘ (ಎಂಸಿಎ) ಸದಸ್ಯರು ಸಿಐಟಿಯು ನೇತೃತ್ವದಲ್ಲಿ ಹೊಸೂರು ರಸ್ತೆ ಮೈಕೊ ಕಾರ್ಖಾನೆ ಎದುರು ಪ್ರತಿಭಟನೆ ನಡೆಸಿದರು. ವೇತನ ಹೆಚ್ಚಳ, ಉತ್ತಮ ಸೌಕರ್ಯಗಳು ಇತ್ಯಾದಿ ಬೇಡಿಕೆಗಳಿಗಾಗಿ ಹೋರಾಟ ನಡೆಯಿತು.

ಜನಶಕ್ತಿ ಕನ್ನಡ ವಾರಪತ್ರಿಕೆ



ಪಶ್ಚಿಮ ಬಂಗಾಳದ ಪಂಚಾಯತು ಚುನಾವಣೆಗಳಲ್ಲಿ ಸತತ ಏಳನೇ ಬಾರಿಗೆ ಎಡರಂಗಕ್ಕೆ ಭಾರೀ ಜಯ ಲಭಿಸಿದೆ. ಪ್ರತಿಗಾಮಿಗಳ ಸಂದರ್ಭಸಾಧಕ 'ಮಹಾಮೈತ್ರಿ'ಯ ನಡುವೆಯೂ ಅದು 69 ಶೇ. ಸ್ಥಾನಗಳನ್ನು ಪಡೆದಿದೆ. ಆದರೆ ವಿರೋಧ ಪಕ್ಷಗಳ ಹಿಂಸಾ ರಾಜಕೀಯದಿಂದ ತತ್ತರಿಸಿರುವ ನಂದಿಗ್ರಾಮ ಮತ್ತು ಸಿಂಗೂರ್‌ನಲ್ಲಿ ಎಡರಂಗಕ್ಕೆ ಹಿನ್ನಡೆಯಾಗಿದೆ.

ಸತತ ಏಳನೇ ಬಾರಿಗೆ ಪಶ್ಚಿಮ ಬಂಗಾಳದ ಎಡರಂಗಕ್ಕೆ ಗ್ರಾಮೀಣ ಜನತೆಯ ಭಾರೀ ಬೆಂಬಲ

ಪಶ್ಚಿಮ ಬಂಗಾಳದ ಎಡರಂಗ ಇನ್ನೊಂದು ಭಾರೀ ವಿಜಯ ಸಾಧಿಸಿದೆ. ಅಲ್ಲಿನ ಗ್ರಾಮೀಣ ಜನತೆ ಪಂಚಾಯತು ಚುನಾವಣೆಗಳಲ್ಲಿ ಪ್ರಜಾಸತ್ತಾತ್ಮಕ ವಿಕೇಂದ್ರೀಕರಣಕ್ಕೆ ಮತ್ತೊಮ್ಮೆ ತಮ್ಮ ದೃಢ ಬೆಂಬಲ ವ್ಯಕ್ತಪಡಿಸಿದ್ದಾರೆ. ಮೇ 11, 14 ಹಾಗೂ 18ರಂದು ನಡೆದ ಏಳನೇ ಪಂಚಾಯತು ಚುನಾವಣೆಗಳ ಮತ ಎಣಿಕೆ ಮೇ 21ರಂದು ನಡೆದಿದ್ದು ಎಡರಂಗ 17 ಜಿಲ್ಲೆಗಳ ಒಟ್ಟು 748 ಜಿಲ್ಲಾ ಪರಿಷತ್ ಸ್ಥಾನಗಳಲ್ಲಿ 518ರಲ್ಲಿ (69.25ಶೇ.) ವಿಜಯ ಸಾಧಿಸಿದೆ. ಇದರಲ್ಲಿ ಸಿಪಿಐ(ಎಂ) 457 ಸ್ಥಾನಗಳನ್ನು(61ಶೇ.) ಪಡೆದಿದೆ. 17 ಜಿಲ್ಲೆಗಳಲ್ಲಿ 13ರಲ್ಲಿ ಎಡರಂಗ ನಿಚ್ಚಳ ಬಹುಮತ ಪಡೆದಿದೆ, 12 ಜಿಲ್ಲೆಗಳಲ್ಲಿ ಮೂರನೇ ಎರಡಕ್ಕಿಂತಲೂ ಹೆಚ್ಚಿನ ಸ್ಥಾನಗಳನ್ನು ಗಳಿಸಿದೆ. 2 ಜಿಲ್ಲೆಗಳಲ್ಲಿ ತೃಣಮೂಲ ಕಾಂಗ್ರೆಸ್ ಮತ್ತು ಉಳಿದೆರಡರಲ್ಲಿ ಕಾಂಗ್ರೆಸ್ ಗೆದ್ದಿದೆ(ಕೋಷ್ಟಕ ನೋಡಿ). ಪಂಚಾಯತು ಸಮಿತಿಗಳು ಮತ್ತು ಪಂಚಾಯತುಗಳ ಚುನಾವಣೆಗಳಲ್ಲಿ ಕೂಡಾ ಇದೇ ರೀತಿಯ ಫಲಿತಾಂಶ ಬಂದಿದ್ದು ಪೂರ್ಣ ವಿವರಗಳು ಇನ್ನೂ ಲಭ್ಯವಾಗಿಲ್ಲ.

ಈ ಹಿಂದೆ 'ಜನಶಕ್ತಿ'ಯಲ್ಲಿ ವರದಿಯಾದಂತೆ ಈ ಬಾರಿ ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್, ಜತೆಗೆ ಬಿಜೆಪಿ /ಆರೆಸ್ಸೆಸ್ ಮಾತ್ರವಲ್ಲ, ಮುಸ್ಲಿಂ ಮೂಲಭೂತವಾದಿಗಳು, ಮಾವೋವಾದಿಗಳೆನಿಸಿಕೊಳ್ಳುವವರು ಮತ್ತು ವಿದೇಶೀ ನೆರವಿನ ಎನ್‌ಜಿಒಗಳ 'ಮಹಾಜೋತ್'(ಮಹಾಮೈತ್ರಿ) ನೆದುರು ಎಡರಂಗ ಹೋರಾಡಬೇಕಾಗಿತ್ತು (ಕರ್ನಾಟಕದಲ್ಲಿ ಬಿಜೆಪಿ ಕಾಂಗ್ರೆಸ್ ನ ಐವತ್ತು ವರ್ಷಗಳ ಆಳ್ವಿಕೆಯ ಬಗ್ಗೆ ದೂಷಣೆಗಳ ಸುರಿಮಳೆಗೈಯುತ್ತಿರುವಾಗಲೇ ಇಲ್ಲಿನ ಹಳ್ಳಿಗಳ ಗೋಡೆಗಳ ಮೇಲೆ ಕಾಂಗ್ರೆಸ್ ನ 'ಕೈ', ಬಿಜೆಪಿಯ ಕಮಲ ಮತ್ತು ತೃಣಮೂಲ ಕಾಂಗ್ರೆಸ್‌ನ ಎರಡೆಲೆಗಳ ಸಂಗಮ ರಾರಾಜಿಸುತ್ತಿದ್ದವು- ಫೋಟೋ ನೋಡಿ). ಅಂದರೆ ಈ ಬಾರಿ ಹಿಂದೆಂದಿಗಿಂತಲೂ ಕಠಿಣ ಹೋರಾಟವಿತ್ತು. ಇದರ ಪರಿಣಾಮವಾಗಿ, ಕಳೆದ ಒಂದೂವರೆ ವರ್ಷದಿಂದ ಪ್ರತಿಗಾಮಿಗಳ ಹಿಂಸಾಚಾರಗಳಿಗೆ ತುತ್ತಾಗಿದ್ದ ನಂದಿಗ್ರಾಮವಿರುವ ಪೂರ್ವ ಮೇದಿನೀಪುರ ಜಿಲ್ಲೆಯಲ್ಲಿ ತೃಣಮೂಲ ಕಾಂಗ್ರೆಸ್ ಗೆದ್ದಿದೆ. ಸಿಂಗೂರ್‌ನಲ್ಲೂ ಎಡರಂಗಕ್ಕೆ ಹಿನ್ನಡೆಯಾಗಿದೆ. ಆದರೆ ಸಿಂಗೂರ್ ಇರುವ ಹೂಗ್ಲಿ ಜಿಲ್ಲಾ ಪರಿಷತ್ತಿನಲ್ಲಿ ಎಡರಂಗ 47ರಲ್ಲಿ 33 ಸ್ಥಾನಗಳನ್ನು ಗೆದ್ದುಕೊಂಡಿದೆ. ಮಾವೋವಾದಿಗಳು ಬೆದರಿಕೆಯೊಡ್ಡಿದ್ದ ಪಶ್ಚಿಮ ಮೇದಿನೀಪುರ, ಪುರುಲಿಯಾ ಮತ್ತು ಬಾಂಕುರ ಜಿಲ್ಲೆಗಳಲ್ಲಿಯೂ ಎಡರಂಗ ಭಾರೀ ಜಯ ಗಳಿಸಿದೆ.

ಕೈಗಾರಿಕೀಕರಣದ ವಿರುದ್ಧ ತೀರ್ಪಲ್ಲ

ನಂದಿಗ್ರಾಮ ಮತ್ತು ಸಿಂಗೂರ್‌ನ 'ವಿಜಯ'ಗಳಿಂದ ಉತ್ತೇಜಿತರಾಗಿರುವ ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್‌ನ ಮುಖಂಡರು ಇದು ಎಡರಂಗ ಸರಕಾರದ ಕೈಗಾರಿಕೀಕರಣ ನೀತಿಯ ವಿರುದ್ಧ ಜನತೆ ನೀಡಿರುವ ತೀರ್ಪು ಎಂದು ವರ್ಣಿಸಿದ್ದಾರೆ. ಆದರೆ ಎಡರಂಗ ಸರಕಾರ ಈಗಾಗಲೇ ಬಾಂಕುರ, ಪಶ್ಚಿಮ ಮೇದಿನಿಪುರ ಮತ್ತು ಬರ್ದ್ವಾನ್ ಜಿಲ್ಲೆಗಳಲ್ಲಿಯೂ ಕೈಗಾರಿಕೀಕರಣಕ್ಕಾಗಿ 21,000 ಎಕ್ರೆ ಜಮೀನನ್ನು ವಶಪಡಿಸಿಕೊಂಡಿದೆ. ಆದರೆ ಇಲ್ಲಿ ಅಂತಹ ತೀರ್ಪು ಕಂಡು ಬಂದಿಲ್ಲವೇಕೆ ಎಂದು ಕೇಳಿದರೆ ಅವರ ಬಳಿ ಉತ್ತರವಿಲ್ಲ. ಬಾಂಕುರದಲ್ಲಿ ಎಡರಂಗ 43ರಲ್ಲಿ 42, ಪಶ್ಚಿಮ ಮೇದಿನಿಪುರದಲ್ಲಿ 62ರಲ್ಲಿ 57 ಹಾಗೂ ಬರ್ದ್ವಾನ್ ನಲ್ಲಿ 67ರಲ್ಲಿ 64 ಜಿಲ್ಲಾ ಪರಿಷತ್ ಸ್ಥಾನಗಳನ್ನು ಪಡೆದಿದೆ. ವಿರೋಧಿಗಳೆಲ್ಲಾ ಸೇರಿ ಅಪಪ್ರಚಾರ, ಹಿಂಸಾಚಾರ ನಡೆಸಿದಲ್ಲಿ ಮಾತ್ರ ಹಿನ್ನಡೆ ಕಂಡು ಬಂದಿದೆ. ಎಡಪಕ್ಷಗಳ ಒಳಗೂ ಕಳೆದ ವಿಧಾನ ಸಭಾ ಚುನಾವಣೆಗಳ ನಂತರ ಕೈಗಾರಿಕೀಕರಣ ನೀತಿಯ ಬಗ್ಗೆ ನಡೆದ 'ಚರ್ಚೆಗಳು' ಮತ್ತು ವ್ಯಕ್ತಗೊಳಿಸಿದ 'ಸಂದೇಹಗಳು' ಕೂಡಾ ಪರೋಕ್ಷವಾಗಿ ಅವರ ಅಪಪ್ರಚಾರಕ್ಕೆ ನೆರವಾದವು ಎಂದು ಸಿಪಿಐ(ಎಂ) ಮುಖಂಡರು ಹೇಳುತ್ತಾರೆ. ಈ ಅಪಪ್ರಚಾರಕ್ಕೆ ಉತ್ತರವನ್ನು ಕೆಲವೆಡೆ ಸರಿಯಾಗಿ ಜನರ ಬಳಿಗೆ ಒಯ್ಯಲಾಗದಿರುವುದು ಈ ಹಿನ್ನಡೆಗಳಿಂದ ಕಂಡು ಬರುತ್ತದೆ ಎಂದು ಅವರು ಹೇಳುತ್ತಾರೆ.

ಈ ಹಿಂದೆ ಹೇಳಿದಂತೆ 1977ರಲ್ಲಿ ತುರ್ತು ಪರಿಸ್ಥಿತಿ ಕೊನೆಗೊಂಡು ಎಡರಂಗ ಅಧಿಕಾರಕ್ಕೆ ಬಂದ ಕೂಡಲೆ ಮೂರು ಹಂತಗಳ ಪಂಚಾಯತು ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಈ ಹಿಂದೆ 1957ರಲ್ಲಿ ಪಶ್ಚಿಮ ಬಂಗಾಲದಲ್ಲಿ ಪಂಚಾಯತು ಚುನಾವಣೆಗಳು ನಡೆದಿದ್ದವು. ಅಂದರೆ ಎರಡು ದಶಕಗಳ ನಂತರ ಎಡರಂಗ ಅಧಿಕಾರಕ್ಕೆ ಬಂದ ಮೇಲೆಯೇ 1978ರಲ್ಲಿ ಮತ್ತೆ ಅಲ್ಲಿ ಮತ್ತೆ ಪಂಚಾಯತು ಚುನಾವಣೆಗಳು ನಡೆದದ್ದು. ಅದು ಇಡೀ ಗ್ರಾಮೀಣ ಬಂಗಾಲದಲ್ಲಿ ಭಾರೀ ಉತ್ಸಾಹವನ್ನು ತುಂಬಿತು. ಅಂದಿನಿಂದ ತಪ್ಪದೇ ಐದು ವರ್ಷಗಳಿಗೊಮ್ಮೆ ಚುನಾವಣೆಗಳು ನಡೆಯುತ್ತಿವೆ, ಈಗಲೂ ಗ್ರಾಮೀಣ ಜನತೆ ಅದೇ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ ಹಾಗೂ ಎಡರಂಗ ಜಯಭೇರಿ ಬಾರಿಸುತ್ತಲೇ ಬಂದಿದೆ. ಬಂಗಾಳ ಇದರಲ್ಲಿ ಒಂದು ದಾಖಲೆಯನ್ನೇ ಸ್ಥಾಪಿಸಿದೆ.

ಹಿಂಸಾಚಾರಕ್ಕೆ ಮಾತ್ರವಲ್ಲ ಚುನಾವಣೆಗೂ ವಿಸ್ತರಿಸಿದ 'ಮಹಾಮೈತ್ರಿ'



ಜನರ ಭಾಗವಹಿಸುವಿಕೆ

ಆಡಳಿತದಲ್ಲಿ, ಅಭಿವೃದ್ಧಿಯಲ್ಲಿ ಗ್ರಾಮೀಣ ಜನಗಳ ಭಾಗವಹಿಸುವಿಕೆಯನ್ನು ಹೆಚ್ಚೆಚ್ಚು ವಿಸ್ತಾರಗೊಳಿಸಲು ಕಳೆದ ಮೂವತ್ತು ವರ್ಷಗಳಲ್ಲಿ ಸತತ ಪ್ರಯತ್ನ ನಡೆದಿದೆ. 1994ರಲ್ಲಿ ರಾಜ್ಯ ಪಂಚಾಯತು ಕಾನೂನಿಗೆ ತಿದ್ದುಪಡಿ ತಂದು ಪ್ರತಿ ಗ್ರಾಮ ಪಂಚಾಯತು ಕ್ಷೇತ್ರದಲ್ಲಿ 'ಗ್ರಾಮ ಸಂಸತ್ತು'ಗಳನ್ನು ರಚಿಸಲಾಯಿತು. ಅಭಿವೃದ್ಧಿ ಕಾರ್ಯಗಳ ಜಾರಿಯ ಪರಾಮರ್ಶೆ ನಡೆಸುವುದು ಇದರ ಕೆಲಸ. ಇದಕ್ಕೆ ಸಮಾಜದ ಎಲ್ಲಾ ವಿಭಾಗಗಳಿಂದ, ವಿರೋಧ ಪಕ್ಷಗಳಿಂದಲೂ ಸದಸ್ಯರನ್ನು ನೇಮಿಸಲಾಗುತ್ತದೆ. ವರ್ಷಕ್ಕೆ ಎರಡು ಬಾರಿ ಇದು ಸಭೆ ಸೇರುತ್ತದೆ. ಮೇ ತಿಂಗಳಲ್ಲಿ ಸೇರುವ ಸಭೆಯಲ್ಲಿ ಹಿಂದಿನ ಪಂಚಾಯತು ಬಜೆಟಿನಲ್ಲಿ ಹೇಳಿದ ಕಾರ್ಯಕ್ರಮಗಳ ಫಲಾನುಭವಿಗಳ ಪಟ್ಟಿಗಳನ್ನು ಪರಿಶೀಲಿಸಿ, ಅವುಗಳ ಜಾರಿ ಮತ್ತು ಮುಂದಿನ ವರ್ಷದ ಯೋಜನೆಗಳ ಬಗ್ಗೆ ಚರ್ಚಿಸಲಾಗುತ್ತದೆ. ನವಂಬರ್‌ನಲ್ಲಿ ನಡೆಯುವ ಎರಡನೇ ಸಭೆಯಲ್ಲಿ ಮುಂದಿನ ವರ್ಷದ ಬಜೆಟ್ ಮತ್ತು ಪಂಚಾಯತಿನ ಲೆಕ್ಕಪರಿಶೀಲನೆ (ಆಡಿಟ್) ವರದಿಯ ಬಗ್ಗೆ ಚರ್ಚೆ ನಡೆಯುತ್ತದೆ.

ಮುಂದಿನ ದಾರಿ

ಈಗ ಪಶ್ಚಿಮ ಬಂಗಾಲ ಪಂಚಾಯತು ಕಾನೂನಿಗೆ 22ನೆ ತಿದ್ದುಪಡಿ ತಂದು ಗ್ರಾಮ ಅಭಿವೃದ್ಧಿ ಸಂಘ(ವಿಡಿಎ)ಗಳನ್ನು ಪ್ರತಿಯೊಂದು ಪಂಚಾಯತಿನಲ್ಲಿ ರಚಿಸಲಾಗಿದೆ. ಪಂಚಾಯತಿನ ಚುನಾಯಿತ ಸದಸ್ಯರಲ್ಲದೆ, ಸೋತ ಅಭ್ಯರ್ಥಿಗಳಲ್ಲಿ ಅತಿ ಹೆಚ್ಚು ಮತ ಪಡೆದವರನ್ನು ಸ್ವಸಹಾಯ ಗುಂಪುಗಳು, ಆ ಪ್ರದೇಶದ ನಿವೃತ್ತ ಅಥವ ಸೇವೆಯಲ್ಲಿರುವ ಸರಕಾರಿ ನೌಕರರು ಮತ್ತು ಆ ಪ್ರದೇಶದ ನಿವೃತ್ತ ಶಿಕ್ಷಕರಿಂದ ಮೂವರನ್ನು ಈ ಸಂಘಕ್ಕೆ ನೇಮಿಸಲಾಗುವುದು. ಗ್ರಾಮಸ್ಥರು ತಮ್ಮ ಸಲಹೆ ಸೂಚನೆಗಳನ್ನು ಈ ಸಂಘದ ಮೂಲಕ ಗ್ರಾಮ ಸಂಸತ್ತಿಗೆ ತಿಳಿಸಬಹುದು. ಇದು ಬುಡಮಟ್ಟದಲ್ಲಿ ಜನರ ಭಾಗವಹಿಸುವಿಕೆಯನ್ನು ಹೆಚ್ಚಿಸಿ ಪ್ರಜಾಪ್ರಭುತ್ವವನ್ನು ಇನ್ನಷ್ಟು ಬಲಗೊಳಿಸುವ ಉದ್ದೇಶದಿಂದ ಕೈಗೊಂಡಿರುವ ಕ್ರಮ. ಮಕ್ಕಳ ಶಿಕ್ಷಣ ಕೇಂದ್ರ , ಮಾಧ್ಯಮಿಕ ಶಿಕ್ಷಣ ಕೇಂದ್ರ, ಸಾರ್ವಜನಿಕ ಆರೋಗ್ಯ ವ್ಯವಸ್ಥೆ, ನೈರ್ಮಲ್ಯ ವ್ಯವಸ್ಥೆ ಮತ್ತು ಪೋಷಕಾಂಶ ವ್ಯವಸ್ಥೆ ಇವುಗಳ ಜಾರಿಯನ್ನು ನೋಡಿಕೊಳ್ಳುತ್ತವೆ. ಈಗಾಗಲೇ 40965 ಗ್ರಾಮ-ಸಂಸತ್ತುಗಳಲ್ಲಿ ಇವು ಕೆಲಸ ಮಾಡುತ್ತಿವೆ, ಇವುಗಳಲ್ಲಿ 12056 ವಿಡಿಎಗಳು ತಮ್ಮದೇ ಖಾತೆ ಹೊಂದಿವೆ.

ಕಳೆದ ಮೂವತ್ತು ವರ್ಷಗಳ ಅನುಭವದಿಂದ ಪಂಚಾಯತುಗಳ ಕೆಲಸ ವಿವಿಧ ದಿಕ್ಕುಗಳಲ್ಲಿ ವಿಸ್ತರಿಸಿದೆ. ಮುಂದಿನ ದಾರಿಯೆಂದರೆ ಜನಗಳ ಪ್ರಯತ್ನಗಳನ್ನು ಮತ್ತು ವರ್ಗ ಹೋರಾಟವನ್ನು ಹೊಸ ದಾರಿಗಳಲ್ಲಿ ವಿಸ್ತರಿಸುವುದು ಎನ್ನುತ್ತಾರೆ ಡಾ. ಸೂರ್ಯಕಾಂತ್ ಮಿಶ್ರ.

ಪಶ್ಚಿಮ ಬಂಗಾಳ ಜಿಲ್ಲಾ ಪಂಚಾಯ್ತಿ ಚುನಾವಣಾ ಫಲಿತಾಂಶ

ಜಿಲ್ಲೆಗಳು	ಒಟ್ಟು ಸ್ಥಾನ	ಪಕ್ಷಗಳು	ಗೆಲುವು
ಪುರುಲಿಯಾ	35	ಎಡರಂಗ	30
		ಕಾಂಗ್ರೆಸ್	05
ಕೂಚ್‌ಬಿಹಾರ್	29	ಎಡರಂಗ	27
		ಕಾಂಗ್ರೆಸ್	01
		ತೃಣಮೂಲ	01
ಬರ್ದವಾನ್	67	ಎಡರಂಗ	64
		ಇತರೆ	01
		ಕಾಂಗ್ರೆಸ್	01
		ತೃಣಮೂಲ	01
ಹೂಗ್ಲಿ	47	ಎಡರಂಗ	33
		ಕಾಂಗ್ರೆಸ್	10
		ಇತರೆ	04
ಹೌರಾ	36	ಎಡರಂಗ	25
		ಕಾಂಗ್ರೆಸ್	01
		ತೃಣಮೂಲ	10
ಪೂರ್ವ ಮಿಡ್ನಾಪುರ	53	ಎಡರಂಗ	17
		ತೃಣಮೂಲ	36
ಪಶ್ಚಿಮ ಮಿಡ್ನಾಪುರ	62	ಎಡರಂಗ	57
		ತೃಣಮೂಲ	03
		ಇತರೆ	02
ಉತ್ತರ 24 ಪರಗಣ	51	ಎಡರಂಗ	27
		ಕಾಂಗ್ರೆಸ್	06
		ತೃಣಮೂಲ	18
ದಕ್ಷಿಣ 24 ಪರಗಣ	73	ಎಡರಂಗ	31
		ತೃಣಮೂಲ	39
		ಕಾಂಗ್ರೆಸ್	03
ಜಲಪೈಗುರಿ	34	ಎಡರಂಗ	32
		ಕಾಂಗ್ರೆಸ್	02
ಉತ್ತರ ದಿನಾಜ್‌ಪುರ	24	ಎಡರಂಗ	09
		ಕಾಂಗ್ರೆಸ್	15
ದಕ್ಷಿಣ ದಿನಾಜ್‌ಪುರ	17	ಎಡರಂಗ	15
		ಕಾಂಗ್ರೆಸ್	09
		ತೃಣಮೂಲ	01
ಮಾಲ್ಡಾ	34	ಎಡರಂಗ	15
		ಕಾಂಗ್ರೆಸ್	18
		ಇತರೆ	01
ಮುರ್ಷಿದಾಬಾದ್	63	ಎಡರಂಗ	32
		ಕಾಂಗ್ರೆಸ್	31
ಬಿರ್ಭೂಮ್	35	ಎಡರಂಗ	26
		ಕಾಂಗ್ರೆಸ್	07
		ತೃಣಮೂಲ	01
		ಇತರೆ	01
ಬಂಕುರಾ	43	ಎಡರಂಗ	42
		ತೃಣಮೂಲ	01
ನಾಡಿಯ	45	ಎಡರಂಗ	34
		ಕಾಂಗ್ರೆಸ್	06
		ತೃಣಮೂಲ	05

ಅಕ್ರಮ ಮದ್ಯದ ದಂಧೆಗೆ ಬಡವರ ಬಲಿ.....

ಪುಟ 5 ರಿಂದ

ಮೂಲೆಗುಂಪಾಯಿತು. ಎಂತಹ ಮೂಲೆಗೆ ಬಿದ್ದುಹೋಗಿದೆಯೆಂದರೆ, ದುರ್ಬೀನು ಹಾಕಿ ಹುಡುಕಿದರೂ ಸರ್ಕಾರದ ಯಾವುದೇ ಇಲಾಖೆಯ ಬಳಿ ಆಯೋಗದ ಶಿಫಾರಸುಗಳ ಪ್ರತಿ ಲಭ್ಯವಿಲ್ಲ. ಎಂದರೆ ಸರ್ಕಾರ ಬಡ ಜನರ ದುಃಖ ದುಮ್ಮಾನಗಳಿಗೆ ಫೋಟೋಗೆ ಪೋಸ್ ಕೊಡುವುದರಿಂದಾಚಿನ ಕಾಳಜಿಯೇನೂ ಹೊಂದಿಲ್ಲ ಎಂಬುದಕ್ಕೆ ಇದಕ್ಕಿಂತ ಉದಾಹರಣೆ ಬೇಕೆ?

ಯಾರ ಕತೆ ಹೇಳುತ್ತಿವೆ?

ಬೆಂಗಳೂರಿನಲ್ಲಿ ಹಲವಾರು ವರ್ಷಗಳಿಂದ ದಂಧೆ ನಡೆಸುತ್ತಿದ್ದ ಸೌಂದರ್ (ಈ ಹಂತದಲ್ಲಿ ಪೊಲೀಸರ ಅತಿಥಿಯಾಗಿದ್ದಾನೆ) ಮೂಲತಃ ಬಡ ಕೂಲಿಕಾರನೇ ಆಗಿದ್ದ. ಆದರೆ ಅಕ್ರಮ ಮದ್ಯದ ದಂಧೆ ಅವನನ್ನು ಶ್ರೀಮಂತ ಕುಳವನ್ನಾಗಿಸಿದೆ. ಕೆಲವು ಪತ್ರಿಕೆಗಳಲ್ಲಿ ವರದಿಯಾದಂತೆ ನೀನು ಸತ್ತರೆ ಶವ ಸಂಸ್ಕಾರಕ್ಕೆ 500 ರೂ ನಾನೇ ಕೊಡ್ತೇನೆ. ಕುಡಿ ಎಂದು ಆತ ತನ್ನ ಗಿರಾಕಿಗಳಿಗೆ ಹುರಿದುಂಬಿಸುತ್ತಿದ್ದನಂತೆ. ಘಟನೆ ನಡೆದು ಅದರ ತೀವ್ರತೆಗೆ ಎಚ್ಚೆತ್ತುಕೊಂಡು ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು, ರಾಜ್ಯಪಾಲರು ಇತ್ಯಾದಿ ಗಣ್ಯಾತಿ ಗಣ್ಯರೆಲ್ಲ ಬೌರಿಂಗ್ ಆಸ್ಪತ್ರೆಗೆ ದೌಡಾಯಿಸಿ ಆವಾಜ್ ಹಾಕಿದ ಮೇಲೆ ಇಡೀ ರಾಜ್ಯದ ತುಂಬ ಅಬಕಾರಿ ಇಲಾಖೆ ಬಹಳ ಚುರುಕಾಗಿದೆ. ಅಕ್ರಮ ಮದ್ಯ ದುರಂತ ಸಂಭವಿಸಿದ್ದು ಬೆಂಗಳೂರು, ಕೋಲಾರದಲ್ಲಿ. ಆದರೆ ಪ್ರತಿ ಘಂಟೆಯ ಟಿ.ವಿ. ಸುದ್ದಿಗಳಲ್ಲಿ ರಾಜ್ಯದ ಹಲವು ಜಿಲ್ಲೆಗಳ ಭಟ್ಟಿ ಅಡ್ಡೆಗಳ ಮೇಲೆ ಸತತವಾಗಿ ಧಾಳಿ ನಡೆಯುತ್ತಿದ್ದು ಗ್ಯಾಲನ್ ಗಟ್ಟಲೆ ಸ್ಪಿರಿಟ್ ಇತ್ಯಾದಿ ಬೀದಿಗೆ ಸುರಿಯುತ್ತಿರುವುದು ಪ್ರಸಾರವಾಗುತ್ತಿದೆ ಎಂದರೆ ಅಬಕಾರಿ ಇಲಾಖೆಯ ಅಧಿಕಾರಿಗಳ 6ನೇ ಕಣ್ಣು ತೆರೆಯಿತೇ? ಜಿಲ್ಲೆಯ ಹಳ್ಳಿಗಳ ಮಾತಿರಲಿ, ಬೆಂಗಳೂರಿನ ದೇವರ ಜೀವನ ಹಳ್ಳಿಯಲ್ಲಿ ಚರಂಡಿಗಳಲ್ಲಿ ಬಿದ್ದ ರಾಶಿ ರಾಶಿ ಸಾರಾಯಿ ಪೊಟ್ಟಣಗಳು ಯಾರ ಕತೆ ಹೇಳುತ್ತಿವೆ?

ಕಳೆದ ಚುನಾವಣೆಯ ಸಂದರ್ಭದಲ್ಲಿ ಕೂಡ 'ಸಾರಾಯಿ ನಿಷೇಧ'ದ ಸರದಾರರು ತಮ್ಮ ಸಾಧನೆಯನ್ನು ಮೆರೆಸಿಕೊಳ್ಳುತ್ತಿರುವಾಗಲೇ ಅಕ್ರಮ ಸಾರಾಯಿ ಸಾಗಣೆಯ ಹಂತದಲ್ಲಿ ಸಿಕ್ಕಿಹಾಕಿಕೊಂಡಿತಲ್ಲ! ಎಲ್ಲಿಂದ ಬಂತು [illegible] ಪ್ರಶ್ನೆಗಳಿಗೆ ಉತ್ತರ ಯಾರು ನೀಡಬೇಕು. ಕರುಳು ಹಿಂಡುವ ದೃಶ್ಯಗಳು

20.5.2008 ರಂದು ಬೌರಿಂಗ್ ಆಸ್ಪತ್ರೆಯಲ್ಲಿ ಒಂದು ಸುತ್ತು ಹಾಕುತ್ತಿದ್ದಾಗ ಕಂಡುಬಂದ ಕರುಳು ಹಿಂಡುವ ದೃಶ್ಯಗಳು ಸಾರಾಯಿ ನಿಷೇಧದ ಹಿಂದಿನ ಔಚಿತ್ಯವನ್ನೇ ಪ್ರಶ್ನಿಸುವಂತಿದ್ದವು. ತಿಳಿದೋ ತಿಳಿಯದೆಯೋ ಕುಡಿತದ ಚಟಕ್ಕೆ ಬಲಿಯಾದ ಜನ, ಪುರುಷರು, ಮಹಿಳೆಯರು ಹಲವರನ್ನು ಮೃತ್ಯುವಿನ ದವಡೆಗೇ ನೂಕಿತು. ನಮ್ಮ ಕಣ್ಣೆದುರಿಗೇ ಗಾಡಿಯಲ್ಲಿ ಹೊತ್ತು ತಂದ ಮಹಿಳೆಯೊಬ್ಬಳು 60+ ಪ್ರಾಯದವಳು, ವಾರ್ಡಿಗೆ ತೆಗೆದುಕೊಂಡು ಹೋಗುವ ಮೊದಲೇ ಶವವಾಗಿ ಹೊರಬಂದಳು. ಸ್ಟ್ರೆಚರ್‌ನಲ್ಲಿ ಸಿಡಿಲು ಬಡಿದ ಗುಬ್ಬಿ ಮರಿಯಂತೆ ಬಿದ್ದ ಆ ಮಹಿಳೆ, ಅವಳ ಹಿಂದೆಯೇ ಸಾಲಾಗಿ ಬಂದ ಎರಡು ಮೂರು ಹೆಣಗಳು ಮನುಷ್ಯತ್ವ ಮತ್ತು ಧನಪಿಪಾಸೆಗಳ ಮಧ್ಯೆಯ ವ್ಯಂಗ್ಯವಾಗಿ ಅಣಕಿಸಿತು.




ದುರಂತದ ಸಂತ್ರಸ್ತರೊಂದಿಗೆ ಚರ್ಚಿಸುತ್ತಿರುವ ಸಿಪಿಐ(ಎಂ)ನ ನಿಯೋಗ ಎಡದಿಂದ ಕಾಂ. ಬಾಲಕೃಷ್ಣ ಶೆಟ್ಟಿ, ಕಾಂ. ಕೆ.ಎನ್.ಉಮೇಶ್, ಕಾಂ. ಗೌರಮ್ಮ

ಇಲ್ಲಿ ನಮ್ಮನ್ನು ಕಾಡುವ ಪ್ರಶ್ನೆ ಸಾರಾಯಿ ನಿಷೇಧ ಕುಡಿತದ ಸಮಸ್ಯೆಗೆ ಪರಿಹಾರವೇ?

ಪ್ರತಿಭಟಿಸಿದ್ದರು ನಿಜ... ಆದರೆ

ಕಳೆದ ಕೆಲವು ವರ್ಷಗಳಿಂದ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಸ್ತ್ರೀಶಕ್ತಿ, ಸ್ವಸಹಾಯ ಸಂಘಗಳ ಮಹಿಳೆಯರು ಸಾರಾಯಿ ವಿರುದ್ಧ ಪ್ರತಿಭಟನೆಗೆ ಬೀದಿಗಿಳಿದಿದ್ದರು. ನಿಜ ದುಡಿಯುವ ಜನರ ಬದುಕಿನ ಬವಣೆಗೆ ಇನ್ನಷ್ಟು ಕಿಚ್ಚು ಹಚ್ಚುವುದು ಸಾರಾಯಿಯಂತಹ ದುಶ್ಚಟಗಳು ಮತ್ತು ಮಹಿಳೆಯರು ಅದರ ನೇರ ಪರಿಣಾಮವನ್ನೆದುರಿಸುವವರು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ ಸಾರಾಯಿ ನಿಷೇಧ ಮಾಡಿದ ಮಾತ್ರಕ್ಕೆ ಸಮಸ್ಯೆ ಪರಿಹಾರವಾಗುವುದಿಲ್ಲ ಎಂಬುದು ಹಲವು ರಾಜ್ಯಗಳ ಅನುಭವ ಅಷ್ಟೇ ಅಲ್ಲ ಅಕ್ರಮ ಮದ್ಯ ಇಂತಹ ದುರಂತಕ್ಕೆ ರಹದಾರಿಯೂ ಆಗುತ್ತದೆ ಎಂಬುದು ಈಗಾಗಲೇ ಸಾಬೀತಾಗಿದೆ.



ಒಂದು ಅಧ್ಯಯನದ ಪ್ರಕಾರ ಇತ್ತೀಚಿನ ವರ್ಷಗಳಲ್ಲಿ ಕುಡಿತದ ಪ್ರಮಾಣ ಭಾರತದಲ್ಲಿ ಹೆಚ್ಚುತ್ತಿದೆ ಎಂದಿದೆ. ಹಾಗಿದ್ದಾಗ್ಯೂ ವಿಶ್ವದ ಪ್ರಮಾಣಕ್ಕೆ ಹೋಲಿಸಿದರೆ ಭಾರತದಲ್ಲಿ ಕುಡಿತದ ಪ್ರಮಾಣ ಕಡಿಮೆಯೇ ಆದರೂ ಮದ್ಯದ ಉದ್ಯಮ ವರ್ಷಕ್ಕೆ ಸರಿಸುಮಾರು 16,000 ಕೋಟಿಯಷ್ಟು ವ್ಯವಹಾರ ನಡೆಸುತ್ತದೆ.

ಆದಾಯದ ಮೂಲ

ಕರ್ನಾಟಕದಲ್ಲಿ ಸರ್ಕಾರದ ಬೊಕ್ಕಸಕ್ಕೆ ಅತಿ ಹೆಚ್ಚು ಆದಾಯ ತಂದುಕೊಡುವ ಮೂಲ ಅಬಕಾರಿ ಇಲಾಖೆ. ಸುಮಾರು 2400 ಕೋಟಿಯಷ್ಟು. ದೇಶದಲ್ಲಿ ತಯಾರಾಗುವ ವಿದೇಶಿ ಮದ್ಯದ ಮೇಲಿನ ತೆರಿಗೆಗಳಿಂದಲೇ ಆದಾಯ ಬರುತ್ತಿತ್ತು. 2001ರಲ್ಲಿ ಸರ್ಕಾರವು ಬ್ರೂಯರೀಸ್ ಕಾರ್ಪೊರೇಷನ್ ಸ್ಥಾಪಿಸಿತು. ಮತ್ತು ಆ ಮಂಡಳಿಯ ಮೂಲಕ ಸಾರಾಯಿ ಮಾರಾಟ ಪ್ರಾರಂಭಿಸಿತು. ಅದೇ ಸಂದರ್ಭದಲ್ಲಿ ದೇಶದಲ್ಲಿ ತಯಾರಾಗುವ ವಿದೇಶಿ ಮದ್ಯ ತಯಾರಕರು ಸೆಕೆಂಡ್ಸ್ ಕಳ್ಳ ಮಾರಾಟದ ಮೂಲಕ (ಪರವಾನಗಿ ಇಲ್ಲದ ಮದ್ಯವದು) ತೆರಿಗೆ ವಂಚಿಸಿ ಅಪಾರ ಸಂಪತ್ತು ಗಳಿಸುತ್ತಿದ್ದುದನ್ನು ಗುರುತಿಸಿ ಅದರ ಮೇಲೆ ಕಣ್ಣು ಹಾಕಿತು. ಕ್ರಮೇಣವಾಗಿ ಸಾರಾಯಿಯನ್ನು ನಿಷೇಧಿಸುವ ಲೆಕ್ಕಾಚಾರ ಆಗಲೇ ಪ್ರಾರಂಭವಾಗಿತ್ತು.

ಮಹಿಳೆಯ ಮತಗಳ ಮೇಲೆ ಕಣ್ಣು

ಜೆ.ಡಿ.ಎಸ್, ಬಿ.ಜೆ.ಪಿ, ಅಕ್ರಮ ಸರ್ಕಾರ ಆಳ್ವಿಕೆಗೆ ಬಂದಾಗ ಮುಂದೆ ಬರುವ ಚುನಾವಣೆಯ ಮೇಲೆ ಹದ್ದಿನ ಕಣ್ಣಿರಿಸಿ ಯಡ್ಯೂರಪ್ಪನವರು ತಮ್ಮ ಬಜೆಟ್ ಸಾರಾಯಿ ನಿಷೇಧ ಪ್ರಸ್ತಾಪಿಸಿದರು. ಅವರ ಲೆಕ್ಕಾಚಾರದಂತೆ ರಾಜ್ಯದಾದ್ಯಂತ ಸ್ತ್ರೀಶಕ್ತಿ, ಸ್ವಸಹಾಯ ಸಂಘಗಳ ಮಹಿಳೆಯರು ಇದರಿಂದ ಖುಷಿಪಟ್ಟು ತಮಗೇ ಮತ ಹಾಕುತ್ತಾರೆ ಎಂಬುದು. ಎಂದರೆ ಚುನಾವಣೆಯಲ್ಲಿ ಮತಗಳಿಸಲು ಸಾರಾಯಿ ಹಂಚಿದಂತೆ ಬಜೆಟ್‌ನಲ್ಲಿ ಸಾರಾಯಿ ನಿಷೇಧಿಸಿ ಮತವನ್ನು ಬುಟ್ಟಿಗೆ ಹಾಕಿಕೊಂಡ ಪ್ರಯತ್ನವದು. ಆದರೆ ಸಾರಾಯಿ ನಿಷೇಧ ಮಹಿಳೆಯರ ಬವಣೆ ತೀರಿಸುವ ಬದಲು ಇನ್ನಷ್ಟು ಹೆಚ್ಚಿಸಿತು. ಕಾರಣ ಚಟಗಳಿಂದ ಬಿಡುಗಡೆಯಾಗಲು ಅನುಸರಿಸಬೇಕಾದ ಕ್ರಮಗಳು ಬೇರೆಯೇ

1. ಜನರ ಬದುಕಿನ ಕಷ್ಟಗಳಿಂದ ಪಾರಾಗಲು ಅಗತ್ಯವಿರುವ ಶಿಕ್ಷಣ, ಉದ್ಯೋಗ, ಭೂಮಿಯ ಹಕ್ಕು ಒದಗಿಸುವುದು.
2. ಕುಡಿತದ ಚಟದ ಅಪಾಯ ವಿವರಿಸಲು ವ್ಯಾಪಕ ಪ್ರಚಾರ ಕೈಗೊಳ್ಳುವುದು.
3. ಅಕ್ರಮ ಮದ್ಯದ ದಂಧೆ ನಡೆಸುವವರನ್ನು ನಿರ್ದಾಕ್ಷಿಣ್ಯವಾಗಿ ಮಟ್ಟ ಹಾಕುವುದು.
4. ಮದ್ಯದ ಸಗಟು ಮತ್ತು ಚಿಲ್ಲರೆ ಮಾರಾಟವನ್ನು ನಿಯಂತ್ರಿಸುವುದು
5. ಮಾರಾಟದ ಕೇಂದ್ರಗಳನ್ನು ಕಡಿತಗೊಳಿಸುವುದು.

ಇತ್ಯಾದಿ ಕ್ರಮಗಳನ್ನು ಅನುಸರಿಸುವುದು ಉತ್ತಮ ವಿಧಾನ

ಇನ್ನು ಮಹಾರಾಷ್ಟ್ರದಂತಹ ರಾಜ್ಯಗಳಲ್ಲಿ ಜಾರಿಯಲ್ಲಿರುವ ಲಿಕ್ಕರ್ ಪಾಲಿಸಿಯಂತೆ ಯಾವುದೇ ಪ್ರದೇಶದಲ್ಲಿ ಸಾರಾಯಿ ಅಂಗಡಿ ತೆರೆಯುವಾಗ ಆ ಪ್ರದೇಶದ ಕನಿಷ್ಟ ಶೇ.25 ಜನ ಅಲ್ಲಿ ಸಾರಾಯಿ ಅಂಗಡಿ ತೆರೆಯಲು ಅನುಮತಿ ನೀಡಬೇಕು.

ಶಾಲಾ, ಕಾಲೇಜು, ದೇವಸ್ಥಾನಗಳ ಹತ್ತಿರ ತೆರೆಯಬಾರದು ಎನ್ನುವಂತಹ ಈಗಿರುವ ನಿಯಂತ್ರಣಗಳ ಜೊತೆ ವಸತಿ ಪ್ರದೇಶಗಳಲ್ಲಿ ಅಂಗಡಿ ತೆರೆಯದಂತೆ ಕೆಲವು ನಿಗದಿತ ವೇಳೆಯಲ್ಲಿ ಮಾತ್ರ ತೆರೆಯುವಂತೆ ಕ್ರಮ ಕೈಗೊಳ್ಳುವುದು ಸಹಾಯಕವಾಗಬಹುದು.

ಅದಲ್ಲದೆ ರಾಜಕೀಯ ದುರುದ್ದೇಶದಿಂದ ಸಾರಾಯಿ ನಿಷೇಧ ಮಾಡಿ, ಜನೋಪಕಾರಿ ಎಂದು ತೋರಿಸಿಕೊಂಡ ಜನ ಸಹಾಯ ಮಾಡಿದ್ದು ಮದ್ಯದ ದೊರೆಗಳಿಗೆ, ಅಕ್ರಮ ಮದ್ಯದ ದಂಧೆಕೋರರಿಗೆ. ಸಾರಾಯಿ ನಿಷೇಧ ಮಾಡಿದ ಕೆಲವೇ ತಿಂಗಳುಗಳಲ್ಲಿ ಸರ್ಕಾರದ ಆದಾಯ ಹಲವು ಪಟ್ಟು ಹೆಚ್ಚಿತೆಂಬುದು ಬೆವರೇಜ್ ಕಾರ್ಪೊರೇಷನ್‌ನ ದಾಖಲೆಗಳಿಂದ ತಿಳಿದುಬಂದಿದೆ. ಈಗ ಯಡಿಯೂರಪ್ಪ ಮತ್ತವರ ಬಳಗ ಉತ್ತರಿಸಬೇಕು. ಸಾರಾಯಿ ನಿಷೇಧ ಮಾಡಿದ್ದು ಯಾರ ಉಪಕಾರಕ್ಕೆ?

ಇದರ ಜೊತೆಯೇ ನಾವು ಅರ್ಥ ಮಾಡಿಕೊಳ್ಳಬೇಕಾದ ಇನ್ನೊಂದು ಅಂಶ. ನಮ್ಮ ನೆಲದಲ್ಲಿ ಬದುಕುವ ಹಲವು ಸಮುದಾಯಗಳಲ್ಲಿ ಮದ್ಯಪಾನ ಅವರ ಸಂಪ್ರದಾಯ. ಕೊಡಗಿನ ಜನ, ಕೆಲವು ಆದಿವಾಸಿ ಜನ, ಹಿಂದುಳಿದ ವರ್ಗಗಳ ಹಲವು ಸಮುದಾಯದಲ್ಲಿ ಮನೆಯ ಮದುವೆ ಮತ್ತಿತರ ಸಂಭ್ರಮಗಳಲ್ಲಿ ಮದ್ಯ ನೀಡಿಕೆ ಉಪಚಾರದ ಭಾಗವಾಗಿಯೇ ಇರುತ್ತದೆ. ಹಾಗೆಂದೇ ಕಳ್ಳಭಟ್ಟಿ ದುರಂತದ ನಂತರ ಅಬಕಾರಿ ಇಲಾಖೆಯ ವೀರರು ಹಳ್ಳಿಗಳಿಗೆ ನುಗ್ಗಿ ಸಾರಾಯಿ ಬುರುಡೆ ಒಡೆಯುವಾಗ ಒಂದೂರಿನ ಹೆಣ್ಣುಮಹಿಳೆ ಟಿ.ವಿ, ಕ್ಯಾಮರಾಕ್ಕೆ ಹೇಳುತ್ತಿದ್ದಳು. ಅಯ್ಯೋ ಸ್ವಾಮಿ ಒಡೀಬೇಡಿ. ನಾಡಿದ್ದು ಮನೆಯಲ್ಲಿ ಮದುವೆ. ಅದಕ್ಕಾಗಿಯೇ ಎರಡು ಕೊಡ ಕಳ್ಳು ಮಾಡಲು ಹಾಕಿದ್ದೆ. ಮದುವೆಗೆ ಬಂದವರಿಗೆ ಅದು ಕೊಡ್ಲೇಬೇಕು ಸ್ವಾಮಿ ಎಂದು.

ಗ್ರಾಮೀಣ ಭಾರತದಲ್ಲಿ ಮನೆಗಳಲ್ಲಿ ಅಕ್ಕಿಯಿಂದ ಮಾಡುವ, ಶುಚಿಯಾಗಿ, ರುಚಿಯಾಗಿ ತಮ್ಮ ಕುಟುಂಬಕ್ಕಾಗಿ ಮಾಡಿಕೊಳ್ಳುವ ಮದ್ಯ, ಸಾರಾಯಿಗಳನ್ನು ತಯಾರಿಸಿಕೊಳ್ಳಲು ಬಿಡಬೇಕು.


ಅಲ್ಲದೆ ಅಥವಾ ಅಕ್ರಮ ಮದ್ಯವೆಂದರೆ ಕೇವಲ ದಂಧೆ ಮಾಡುವವರು ತಯಾರಿಸುವ ಸಾರಾಯಿ ಮಾತ್ರವಲ್ಲ. ಪರವಾನಗಿ ಇಲ್ಲದೇ ವಿಸ್ಕಿ, ರಮ್, ಬ್ರಾಂದಿ, ಬಿಯರ್ ತಯಾರಿಸಿದರೆ ಅದೂ ಕೂಡ ಅಕ್ರಮ ಮದ್ಯವೆಂದೇ ಹೇಳಬೇಕು!

ದೇಸಾಯಿ ಆಯೋಗ ಅಂದು ನಿರ್ದಿಷ್ಟವಾಗಿ ಅಪರಾಧಿ ಎಂದು ಬೊಟ್ಟು ಮಾಡಿದ ಜನ ಜನಪ್ರತಿನಿಧಿಯೂ ಆಗಿಬಿಟ್ಟವರು. ಸ್ವಲ್ಪದರಲ್ಲಿ ತಪ್ಪಿದ ಇನ್ನೊಂದು ಅನಾಹುತವೆಂದರೆ ಅವರು ವಿಧಾನಸೌಧಕ್ಕೆ ಹೋಗಿಬಿಡುವ ತಯಾರಿಯಲ್ಲಿದ್ದವರು.

(ಹಾಗೆಯೇ 'ನೀರಾ'ದಂತಹ ನಿರಪಾಯಕಾರಿ ಪಾನೀಯಗಳ ತಯಾರಿಕೆ, ವಿತರಣೆಯತ್ತ ಸರ್ಕಾರವೇ ಗಮನಹರಿಸಬೇಕು)

ಕೊನೆ ಹನಿ : 200ಕ್ಕೂ ಹೆಚ್ಚು ಜನ ಬಡವರು ಸತ್ತು, ಚರಂಡಿಗಳಲ್ಲಿ, ಸಿಕ್ಕ ಸಂದಿಗೊಂದಿಗಳಲ್ಲಿ ಚುನಾವಣಾ ಆಯೋಗದ ಕಣ್ಣು ತಪ್ಪಿಸಲು ನೀರಿನ ಬಾಟಲಿಗಳಲ್ಲಿ ತುಂಬಿಸಿಟ್ಟ ಅಕ್ರಮ ಮದ್ಯದ ರುದ್ರ ನರ್ತನಕ್ಕೆ ಜನ ಬಲಿಯಾಗಿದ್ದರೆ. ನಾಡಿನ ಚುಕ್ಕಾಣಿ ಹಿಡಿಯುವ ಅವಸರದಲ್ಲಿ ಓಡುತ್ತಿರುವ ಯಡಿಯೂರಪ್ಪನವರ ಎಲುಬಿಲ್ಲದ ನಾಲಿಗೆ, ಸತ್ತವರಿಗೆ ಸಂತಾಪ, ದುಃಖಿಗಳಿಗೆ ಸಾಂತ್ವನ ಹೇಳುವ ಬದಲು ತನ್ನ ಸಾಧನೆಗೆ ಕಲ್ಲುಹಾಕಲು ಕಾಂಗ್ರೆಸ್‌ನವರು ಕಳ್ಳಭಟ್ಟಿ ಸಾರಾಯಿ ಪ್ರಕರಣ ಹುಟ್ಟುಹಾಕಿದ್ದಾರೆಂದು ಪತ್ರಿಕಾಗೋಷ್ಠಿ ನಡೆಸುತ್ತಾರೆ. ಇಂತಹವರಿಂದ ನಾಡೇನು ಪಡೆದೀತು?

ಕನ್ನಡಿ



ಕೆ.ಎಸ್.ವಿಮಲ

ಹೆರಿಗೆ ಸೌಲಭ್ಯ ಕಾನೂನು, 1961

ಮನೆಯ ಎದುರಿಗೆ ಕಟ್ಟಡದ ಕೆಲಸ ನಡೆಯುತ್ತಿತ್ತು. ಎಲ್ಲಿಂದಲೋ ಬಂದು ಯಾರಿಗೋ ಮಹಲು ನಿರ್ಮಿಸಿ, ತಲೆಯ ಮೇಲೊಂದು ಸೂರಿನ ಕನಸೂ ಕಾಣುವ ಸ್ಥಿತಿಯಲ್ಲಿಲ್ಲದೆ ಮಹಲು ಮುಗಿದ ಮರುದಿನ ಅವರ ಶ್ರಮದ ನಿಶಾನೆಯೂ ಸಿಗದಂತೆ ಮುಂದಿನ ಮಹಲಿನ ಶಿಲ್ಪಿಗಳಾಗುವ ಬೃಹತ್ ಸಮೂಹವನ್ನು ಪ್ರತಿದಿನ ನೋಡುತ್ತಿದ್ದೆ. ಸುಡು ಬಿಸಿಲು ತಲೆಯ ಮೇಲೆ ಕಲ್ಲು ಹೊತ್ತು ಹಾಕುವ, ಮೇಲೆ ಉರಿಯುವ ಸೂರ್ಯ ಕೆಳಗೆ ಕಾದ ನೆಲದಲ್ಲಿ ಕುಳಿತು ಜಲ್ಲಿ ಕುಟ್ಟುವ ತುಂಬಿದ ಬಸುರಿ. ಚಕ್ಕನೆ ನೆನಪಾದದ್ದು ಎಲ್ಲ ಸೌಲಭ್ಯ, ಆರಾಮ, ಐಶ್ವರ್ಯಗಳಿರುವ ಮೇಲ್ ವರ್ಗದ ಮಹಿಳೆಯರನೇಕರು ಪೂರ್ಣ ವಿಶ್ರಾಂತಿಯ ಅಗತ್ಯವೆಂಬ ವೈದ್ಯರ ಹೇಳಿಕೆಯ ಮೇಲೆ ಪೂರಾ ಪೂರಾ "ಕುರ್ಲಾನ್"ಗೆ ಅಂಟಿಕೊಂಡು ಕಾಲ ತಳ್ಳಿ ಕೊನೆಗೆ ಸರಳ ಹೆರಿಗೆ ಸಾಧ್ಯವಿಲ್ಲವೆಂದು 'ಸಿಸೇರಿಯನ್' ಶಸ್ತ್ರ ಚಿಕಿತ್ಸೆಯ ಮೂಲಕವಷ್ಟೇ ಮಗು ಭೂಮಿಗೆ ಬರುವುದು. ಆದರೆ ಕಲ್ಲು ಕುಟ್ಟುವ ಕಮಲವ್ವ, ಭೀಮವ್ವ, ಲಕ್ಷ್ಮಿ ಇತ್ಯಾದಿ ಮಹಿಳೆಯರಿಗೆ ಯಾವ ಶ್ರಮವೂ ಇಲ್ಲದೇ ಸುಲಭ ಹೆರಿಗೆ, ತಾಯ್ತನವನ್ನು ಬಹಳ ಪವಿತ್ರವೆಂದು ವೈಭವೀಕರಿಸುವ ಈ ನೆಲದಲ್ಲಿ ಹೆರಿಗೆ ಎಂಬುದನ್ನು ಬಹಳ ಗೌರವಿಸುತ್ತೇವೆಂದು ಹೇಳಲಾಗುತ್ತದೆ. ಹಾಗೆಂದೇ ಮಗುವಿಗೆ ಜನ್ಮ ನೀಡುವ ಸಂದರ್ಭದಲ್ಲಿ ಆಕೆಗೆ ಸಂಬಳ ಸಹಿತವಾದ ಹೆರಿಗೆ ರಜಾ ಮತ್ತು ಭತ್ಯೆ ನೀಡಬೇಕೆನ್ನುವ ಕಾನೂನನ್ನು 1961ರಲ್ಲಿ ತರಲಾಯಿತು.

ಈ ಕಾನೂನಿನ ಪ್ರಕಾರ ಕಾರ್ಖಾನೆಗಳು ಗಣಿ, ಪ್ಲಾಂಟೇಶನ್ ಮತ್ತು ಎಲ್ಲ ಸರ್ಕಾರಿ ಉದ್ದಿಮೆಗಳು, ನಗರಪಾಲಿಕೆಗಳು, ಸಂಸ್ಥೆಗಳು, ಸಾರ್ವಜನಿಕ, ಖಾಸಗೀ ಉದ್ದಿಮೆಗಳು ಶಾಪ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಕಾನೂನಿನಡಿಯಲ್ಲಿ ಬರುವ ಎಲ್ಲ ಉದ್ಯಮಗಳು (ಎಲ್ಲಿ 10ಕ್ಕಿಂತ ಹೆಚ್ಚು ಜನ ಹಿಂದಿನ 12 ತಿಂಗಳ ಒಳಗೆ ಕೆಲಸ ಮಾಡುತ್ತಿದ್ದರೋ/ ಮಾಡುತ್ತಿರುವರೋ) ಈ ಕಾನೂನಿನಡಿಯಲ್ಲಿ ಬರುತ್ತವೆ. ಅಲ್ಲದೇ ಯಾವುದೇ ರಾಜ್ಯ ಸರ್ಕಾರವು, ಕೇಂದ್ರ ಸರ್ಕಾರದ ಪೂರ್ವ ಅನುಮತಿ ಪಡೆದು ಕನಿಷ್ಠ ಎರಡು ತಿಂಗಳ ಸೂಚನಾ ಪತ್ರ ನೀಡುವ ಮೂಲಕ ರಾಜ್ಯದಲ್ಲಿರುವ ಯಾವುದೇ ವ್ಯಾಪಾರ/ ಸಾರ್ವಜನಿಕ ಸಂಸ್ಥೆಯನ್ನು ಈ ಕಾನೂನಿನ ವ್ಯಾಪ್ತಿಗೆ ತರಲು ಈ ಕಾನೂನು ಅವಕಾಶ ಕಲ್ಪಿಸುತ್ತದೆ.

ಯಾವುದೇ ಸಂಸ್ಥೆ ರಾಜ್ಯ ಸರ್ಕಾರಿ ವಿಮಾ ಕಾನೂನಿನಡಿಯಲ್ಲಿ ಬರುತ್ತಿದ್ದರೆ ಅಲ್ಲಿಗೆ ಈ ಕಾನೂನು ಅನ್ವಯವಾಗುವುದಿಲ್ಲ.

ಈ ಮೇಲ್ಕಂಡ ವ್ಯಾಪ್ತಿಗೆ ಒಳಪಡುವ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಯಾವುದೇ ಮಹಿಳಾ ಉದ್ಯೋಗಿ ತಾನು ತೆಗೆದುಕೊಳ್ಳಲಿರುವ ಹೆರಿಗೆ ಸೌಲಭ್ಯದ ಕುರಿತು ಲಿಖಿತ ಸೂಚನೆಯನ್ನು ತನ್ನ ಮೇಲಧಿಕಾರಿಗಳಿಗೆ ನೀಡಬೇಕು.

ತಾಯಿ ಮತ್ತು ಗರ್ಭದಲ್ಲಿರುವ ಮಗುವಿಗೆ ಮಾರಕವಾಗುವಂತಹ ಕೆಲಸ ಮಾಡುವಂತೆ ಒತ್ತಡ ಹೇರದಂತೆ ಈ ಕಾನೂನು ಪಡೆಯುತ್ತದೆ.

ಹೆರಿಗೆಯ ಅಂದಾಜು ದಿನಕ್ಕೆ 6 ವಾರಗಳ ಮುಂಚೆಯಿಂದ ಹೆರಿಗೆ ರಜಾ ತೆಗೆದುಕೊಳ್ಳಬಹುದು.

ಗರ್ಭಿಣಿಯಾಗಿದ್ದಾಗ ಆಕಸ್ಮಾತ್ ಅಂತಹ ಲಿಖಿತ ಸೂಚನೆ ನೀಡಿರದಿದ್ದರೂ ಹೆರಿಗೆಯಾದ ತಕ್ಷಣ ಕೊಡಬಹುದು.

ಹೆರಿಗೆ ರಜಾದ ಕೋರಿಕೆ ಪತ್ರ ದೊರೆತ ತಕ್ಷಣ ಹೆರಿಗೆಯಾದ 6 ವಾರಗಳವರೆಗೆ ಹೆರಿಗೆ ರಜಾ ನೀಡುವುದು ಮಾಲಿಕರ ಕರ್ತವ್ಯವಾಗುತ್ತದೆ.

ಗರ್ಭಿಣಿ ಎಂಬುದಕ್ಕೆ ಮತ್ತು ಹೆರಿಗೆಯ ಅಂದಾಜು ದಿನವನ್ನು ಧೃಢೀಕರಿಸುವ ದಾಖಲೆಯ ಆಧಾರದಲ್ಲಿ ಮುಂಗಡ ಹೆರಿಗೆ ಸೌಲಭ್ಯ ಮತ್ತು ಹೆರಿಗೆಯಾದ 48 ಘಂಟೆಗಳಲ್ಲಿ ನಿರ್ದಿಷ್ಟ ದಾಖಲೆಯ ಆಧಾರದಲ್ಲಿ ಉಳಿದ ಬಾಕಿಯನ್ನು ಪಡೆಯಲು ಹಕ್ಕಿರುತ್ತದೆ.

ಲಿಖಿತ ಸೂಚನೆ ನೀಡಿಲ್ಲ ಎನ್ನುವುದು ಅವಳಿಗೆ ಸಿಗಬೇಕಾದ ಸೌಲಭ್ಯ ನಿರಾಕರಿಸಲು ಕಾರಣವಾಗುವುದಿಲ್ಲ.

ಈ ಕಾನೂನು ಲಕ್ಷಾಂತರ ಉದ್ಯೋಗಸ್ಥ ಮಹಿಳೆಯರಿಗೆ ಆಸರೆ ನೀಡಿದೆಯಾದರೂ ಕಲ್ಲು ಕುಟ್ಟುವ ಕಮಲವ್ವನ ಕಥೆ ಕೇಳುವವರಾರು?

ಬಿಜೆಪಿ ಅಧಿಕಾರಕ್ಕೆ ಹತ್ತಿರ ...

ಪುಟ 8ರಿಂದ

ಕೋಮುವಾದದ ವಿರುದ್ಧ ರಾಜ್ಯಮಟ್ಟದಲ್ಲಿ ನಿರಂತರವಾಗಿ ಸೆಣಸುತ್ತಿರುವುದು ಸಿಪಿಐ(ಎಂ) ಮಾತ್ರ. ಚುನಾವಣೆಗಳ ಸಂದರ್ಭದಲ್ಲಿಯೂ ಕೋಮುವಾದದ ಪ್ರಶ್ನೆಯನ್ನು ತನ್ನ ಸೀಮಿತ ಶಕ್ತಿಯಲ್ಲಿ ಎತ್ತಿದ್ದು ಸಿಪಿಐ(ಎಂ) ಮಾತ್ರ.

ರಾಜ್ಯದಲ್ಲಿ ಕೋಮುವಾದದ ವಿರುದ್ಧ ದನಿಯೆತ್ತುತ್ತಿದ್ದ ವಿವಿಧ ಶಕ್ತಿಗಳೂ ಚುನಾವಣೆಯ ಸಂದರ್ಭದಲ್ಲಿ ಮೌನಕ್ಕೆ ಶರಣಾದರು.

ಕಾಂಗ್ರೆಸ್ ಪಕ್ಷದ ದುರ್ನೀತಿಗಳು

ಕಾಂಗ್ರೆಸ್ ಪಕ್ಷ 1999ರಿಂದ 2004ರ ನಡುವೆ ರಾಜ್ಯದಲ್ಲಿ ನಡೆಸಿದ ಜನವಿರೋಧಿ ಆಡಳಿತದ ಫಲವಾಗಿ 2004ರಲ್ಲಿ ಸೋತಾಗ ಗಳಿಸಿದ ಮತಗಳು ಶೇ.35. 2004ರಿಂದ 2008ರ ನಡುವೆ ಕಾಂಗ್ರೆಸ್ ಶೇ.0.7ರಷ್ಟು ಮತಗಳನ್ನು ಕಳೆದುಕೊಂಡಿದೆ.

ಕಾಂಗ್ರೆಸ್ ನೇತೃತ್ವದ ಕೇಂದ್ರ ಸರ್ಕಾರ 2004ರ ನಂತರ ಅನುಸರಿಸಿದ ಜನ ವಿರೋಧಿ ನೀತಿಗಳು ಮುಖ್ಯವಾಗಿ ಬೆಲೆ ಏರಿಕೆ, ಪಡಿತರ ವ್ಯವಸ್ಥೆಯ ಕಡಿತ, ಬಿಪಿಎಲ್ ಕಾರ್ಡ್ ಹಂಚಿಕೆಯಲ್ಲಿ ಅವ್ಯವಸ್ಥೆ, ಕೃಷಿಯ ಬಿಕ್ಕಟ್ಟು, ಕೈಗಾರಿಕಾ ಬಿಕ್ಕಟ್ಟುಗಳು ಗಣನೀಯವಾಗಿ ಜನರಿಗೆ ನಿಜವಾದ ಪರಿಹಾರವನ್ನು ಒದಗಿಸುವ ರೀತಿಯಲ್ಲಿ ಪರಿಹರಿಸದಿರುವುದು. ಖಾಸಗೀಕರಣ, ನಿರುದ್ಯೋಗ, ರೇಗಾ ಮೊದಲಾದ ಯೋಜನೆಗಳನ್ನು ಜಾರಿಗೆ ತರುವುದರಲ್ಲಿ ವಿಳಂಬ, ಮೀನಾಮೇಷ ಮತ್ತು ನಿರಾಸಕ್ತಿ ಇವುಗಳು ಜನರನ್ನು ಸೆಳೆಯುವುದಕ್ಕೆ ಯಾವ ಸಹಾಯುವನ್ನೂ ಮಾಡಲಿಲ್ಲ. ಬದಲಾಗಿ ಜನರನ್ನು ಕಾಂಗ್ರೆಸ್‌ನಿಂದ ದೂರದೂಡಿವೆ. ರಾಜ್ಯದಲ್ಲಿ ಬಿಜೆಪಿ, ಜನತಾದಳಗಳ ಜಗಳದಿಂದ ಬೇಸತ್ತ ಜನರನ್ನು, ಜನತಾದಳದಿಂದ ದೂರವಾದ ಜಾತ್ಯಾತೀತ ಮನೋಭಾವದ ಜನರನ್ನು ಸೆಳೆಯುವ ಶಕ್ತಿಯನ್ನು ಈ ಕಾರಣಗಳಿಗಾಗಿಯೇ ಅದು ಕಳೆದುಕೊಂಡಿದೆ.

ದಾಳಿಯ ಗುರಿ

ಕೋಮುವಾದವನ್ನು ಅಧಿಕಾರದಿಂದ ದೂರ ಇಡಬೇಕೆಂಬುದೇ ಪ್ರಧಾನ ಗುರಿಯಾಗಿಟ್ಟುಕೊಂಡು ಚುನಾವಣಾ ಹೋರಾಟಕ್ಕಿಳಿಯುವ ಬದಲು ಜಾತ್ಯಾತೀತ ಶಕ್ತಿಯಾದ ಜನತಾದಳವನ್ನು ತನ್ನ ಧಾಳಿಯ ಪ್ರಧಾನ ಗುರಿಯಾಗಿಸಿಕೊಂಡದ್ದು, ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರದ ದುರ್ನೀತಿಗಳು ಇಂದಿನ ಅನೇಕ ಸಮಸ್ಯೆಗಳಿಗೆ ಹೊಣೆ ಎಂಬುದನ್ನು



ಜನರಿಗೆ ವಿವರಿಸಲು ನಿರಾಕರಿಸಿದ್ದು, ಬೆಲೆಏರಿಕೆ, ಭಯೋತ್ಪಾದಕತೆ ಬಗೆಗೆ ಬಿಜೆಪಿ ಎತ್ತಿದ ಪ್ರಶ್ನೆಗಳಿಗೆ ಸಮರ್ಥವಾಗಿ ಉತ್ತರಿಸದೆ ಹೋದದ್ದು ಈ ಚುನಾವಣೆಯಲ್ಲಿ ಬಿಜೆಪಿಗೆ ಸಹಾಯ ಮಾಡಿದೆ. ಇಡೀ 4 ವರ್ಷದಲ್ಲಿ ಕಾಂಗ್ರೆಸ್ ಜನರ ಪ್ರಶ್ನೆಗಳನ್ನೆತ್ತಿ ಜನರ ಹಿತಗಳನ್ನು ರಕ್ಷಿಸುವ 2004ರ ನಂತರ ಕೆಲಸವನ್ನು ಮಾಡಲಿಲ್ಲ.

ಪ್ರಮುಖ ಜಾತ್ಯಾತೀತ ಶಕ್ತಿಯಾಗಿ ಇತರ ಜಾತ್ಯಾತೀತ ಶಕ್ತಿಗಳನ್ನು ಒಗ್ಗೂಡಿಸುವ, ಒಟ್ಟಾಗಿ ಸ್ಪರ್ಧಿಸುವ ಪ್ರೇರಕನಾಗಿ ಅದು ಕೆಲಸ ಮಾಡಬೇಕಿತ್ತು. ಅದಕ್ಕೆ ಬದಲಾಗಿ ಇಡೀ ರಾಜ್ಯದಲ್ಲಿರಲಿ ತಾವು ಬೆಂಬಲಿಸಿದ್ದ ಬಂಗಾರಪ್ಪನವರ ಪರವಾಗಿಯಾದರೂ ತಮ್ಮ ಇಡೀ ಶಕ್ತಿಯನ್ನು ಕಣಕ್ಕಿಳಿಸಲಿಲ್ಲ.

ಕಾಂಗ್ರೆಸ್ ಪಕ್ಷದಲ್ಲಿಯೇ ತೀವ್ರವಾದ ಮೇಲಾಟ, ಸಂಘಟಿತವಾಗಿ ಕೆಲಸ ಮಾಡದೆ ಹೋದದ್ದು, ಗುಂಪುಗಾರಿಕೆ, ಅಭ್ಯರ್ಥಿಗಳ ಆಯ್ಕೆಯಲ್ಲಿ ಗೊಂದಲ. ಹಿರಿಯ ನಾಯಕರೇ ಬಂಡಾಯಕ್ಕೆ ಬೆಂಬಲ ನೀಡಿದ್ದು, ಇವೆಲ್ಲವೂ ಕೂಡ ಕಾಂಗ್ರೆಸ್ ವೈಫಲ್ಯಕ್ಕೆ ಮುಖ್ಯ ಕಾರಣಗಳು. ಕರ್ನಾಟಕ ರಾಜ್ಯ ಬಿಜೆಪಿಯ ಆಡಳಿತಕ್ಕೆ ಸಿಕ್ಕಿ ಕೊಳ್ಳುವ ಪರಿಸ್ಥಿತಿಗೆ ಪ್ರಧಾನ ಜವಾಬುದಾರಿ ಕಾಂಗ್ರೆಸ್ ಪಕ್ಷದ್ದೇ ಆಗಿದೆ.

ಜನತಾದಳ

ಬಿಜೆಪಿಯ ಸ್ಥಾನ ಹೆಚ್ಚಳದಲ್ಲಿ ಜನತಾದಳದ ಪಾತ್ರವೂ ಇದೆ. ಜನತಾದಳದ ಸ್ಥಾನಗಳು ಹಾಗೂ ಮತಗಳನ್ನು ಬಿಜೆಪಿ ಕಸಿದುಕೊಂಡಿದೆ ಎನ್ನುವ ವಾದ ಎಲ್ಲೆಡೆ ಕೇಳಿಸುತ್ತಿದೆ. ಆದರೆ ಜನತಾದಳದ ಮತ ಕಡಿಮೆಯಾಗಿರುವುದು ಕೇವಲ ಶೇ.1 ಮಾತ್ರ. ಆದರಲ್ಲಿ ಕೆಲವು ಪ್ರದೇಶದಲ್ಲಿ ಜನತಾದಳ ಹೆಚ್ಚು ಮತ ಗಳಿಸಿದೆ. ಹೈ. ಕರ್ನಾಟಕದಂತಹ ಪ್ರದೇಶದಲ್ಲಿ ಜೆಡಿ(ಎಸ್) ಮತಗಳು ಬಿಜೆಪಿ ಗೆಲುವಿಗೆ ಸಹಾಯಕವಾಗಿರಬಹುದಾದರೂ ಕೂಡ ಜೆಡಿ(ಎಸ್)ನ ಪಾತ್ರ ಅದಕ್ಕಿಂತ ಬಾರಿ ದೊಡ್ಡದು. ಇತ್ತೀಚಿನ ದಶಕಗಳಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ತನ್ನ ನೆಲೆಗಳನ್ನು ಕಳೆದುಕೊಳ್ಳುತ್ತಾ ಕಾಂಗ್ರೆಸ್ ವಿರೋಧಿ ಮತಗಳು ಬಿಜೆಪಿಗೆ ವರ್ಗಾವಣೆಯಾಗಲು ಜನತಾ ದಳ ಅವಕಾಶ ಮಾಡಿಕೊಟ್ಟಿತು.

ಅತಿ ಹೆಚ್ಚು ಸ್ಥಾನಗಳಿಸಿದ ಪಕ್ಷವಾದರೂ ಅಧಿಕಾರದಿಂದ ದೂರವಾದ ಬಿಜೆಪಿಯ ಜೊತೆ ಮೈತ್ರಿ ಮಾಡಿಕೊಂಡು ಬಿಜೆಪಿಯ ವಿಘಟನೆಯನ್ನು ತಪ್ಪಿಸಿದ್ದು ಮತ್ತು ಅದರ ಶಕ್ತಿ ಹೆಚ್ಚಳವಾಗಲು ಕಾರಣವಾಗಿದ್ದು, ದಕ್ಷಿಣ ಕರ್ನಾಟಕದ ಜನರ ಮನಸ್ಸಿನಲ್ಲಿ, ಗ್ರಾಮೀಣಪ್ರದೇಶದಲ್ಲಿ ಸ್ಥಾನ ಪಡೆಯಲಾಗದೆ ಒದ್ದಾಡುತ್ತಿದ್ದ ಬಿಜೆಪಿಗೆ ಅಲ್ಲಿ ಪ್ರವೇಶ ನೀಡಿದ್ದು ಜೆಡಿ(ಎಸ್). ಅದು ರಾಜ್ಯದ ಜನತೆಗೆ ಎಸಗಿದ ಅಪಕಾರವಾಗಿ ಚಿರಕಾಲ ಉಳಿಯಲಿದೆ.

ಬಿಜೆಪಿ ಕರಾವಳಿ ಹಾಗೂ ಘಟ್ಟ ಪ್ರದೇಶಗಳ ಉತ್ತರ ಕರ್ನಾಟಕದ ಭೂಮಾಲಿಕರು, ಪ್ಲಾಂಟೇಶನ್ ಮಾಲಕರು, ಬಳ್ಳಾರಿಯ ಗಣಿಧಣಿಗಳೂ, ರಾಜ್ಯಾದ್ಯಂತದ ಭೂದಂಧೆಕೋರರು, ಅನೇಕ ಅಕ್ರಮ ದಂಧೆಗಳ ಮಾಫಿಯಾ ಶಕ್ತಿಗಳು, ಬಹುರಾಷ್ಟ್ರೀಯ ಹಾಗೂ ರಾಷ್ಟ್ರೀಯ ಕಂಪನಿಗಳ ಬಂಡವಾಳಶಾಹಿಗಳು ವರ್ತಕರು ಇವರುಗಳ ಸಾಧನವಾಗಿ ರಾಜಕೀಯವಾಗಿ ಬೆಳೆದಿದೆ. ರಾಜ್ಯದಲ್ಲಿ ಅಧಿಕಾರವನ್ನು ಗಳಿಸಿಕೊಂಡಿದೆ. ರಾಜ್ಯದಲ್ಲಿನ ತನ್ನ ಅಧಿಕಾರವನ್ನು ಈ ಜನ ವಿರೋಧಿ ಶಕ್ತಿಗಳ ಸಾಧನವಾಗಿ, ರಾಜ್ಯದ ಜನಸಮುದಾಯದ ವಿರೋಧವಾಗಿ ಬಳಸಲಿದೆ.

ಅಂತಹ ಸಂದರ್ಭದಲ್ಲಿ ತನ್ನ ವಿರುದ್ಧ ಬೆಳೆಯಲಿರುವ ಜನರ ಅತೃಪ್ತಿಯನ್ನು ದಿಕ್ಕು ತಪ್ಪಿಸಲು ರಾಜ್ಯದಲ್ಲಿ ಕೋಮುಗಲಭೆ ಕೋಮುದ್ವೇಷವನ್ನು ಹೆಚ್ಚಿಸುವುದು ಅದಕ್ಕೆ ಅನಿವಾರ್ಯ. ಹಾಗೆಯೇ ದಕ್ಷಿಣ ಭಾರತದಲ್ಲಿ ಪ್ರವೇಶಕ್ಕೆ ಹೆಬ್ಬಾಗಿಲಾಗಿ ನೆರೆ ರಾಜ್ಯಗಳಲ್ಲಿ ಕೋಮುಗಲಭೆ ಮಾಡುವ ಶಕ್ತಿಗಳಿಗೆ ಸಂಚು ರೂಪಿಸುವ ಹಾಗೂ ಜಾರಿಗೆ ತರುವ, ಆಶ್ರಯ ನೀಡುವ ಅಪಾಯಕಾರಿ ತಾಣವನ್ನಾಗಿ ಕರ್ನಾಟಕವನ್ನು ಪರಿವರ್ತಿಸಲಿದೆ. ಆಡಳಿತ ಯಂತ್ರದಲ್ಲಿ, ಶಿಕ್ಷಣದಲ್ಲಿ ಕೋಮು ವಿಷವನ್ನು ಹಬ್ಬಿಸುವ ಅನೇಕ ಪ್ರಯತ್ನಗಳು ಮುಂದೆ ನಡೆಯಲಿವೆ. ಇದನ್ನು ಕರ್ನಾಟಕದ ಜನತೆ, ಪ್ರಜ್ಞಾವಂತರು, ಜಾತ್ಯಾತೀತ, ಪ್ರಗತಿಪರ ಶಕ್ತಿಗಳು ಎಚ್ಚರದಿಂದ ಗಮನಿಸಬೇಕಾಗಿದೆ. ಅದನ್ನು ಹಿಮ್ಮೆಟ್ಟಿಸಲು ನಿರಂತರ ದೃಢ, ಐಕ್ಯ ಪ್ರಯತ್ನಗಳನ್ನು ಮಾಡಬೇಕಾಗಿದೆ.

ಜಗದಗಲ

ಶರತ್‌ಚಂದ್ರ

ದಕ್ಷಿಣ ಆಫ್ರೀಕಾದಲ್ಲಿ ವಲಸೆ ಕಾರ್ಮಿಕರ ಮೇಲೆ ಹಿಂಸಾಚಾರ

ದಕ್ಷಿಣ ಆಫ್ರಿಕಾದ ಪ್ರಮುಖ ನಗರಗಳ ಸುತ್ತ ಇರುವಪ್ರದೇಶಗಳಲ್ಲಿ ವಲಸೆ ಕಾರ್ಮಿಕರ ವಿರುದ್ಧ ಭಾರಿ ಪ್ರಮಾಣದ ಹಿಂಸಾಚಾರ ಭುಗಿಲೆದ್ದಿದೆ. ಮುಖ್ಯವಾಗಿ ನೆರೆಯ ಜಿಂಬಾಬ್ವೆ, ನಮೀಬಿಯಾ, ಬೊಟ್ಸ್ವಾನಾ ಗಳಿಂದ ಬರುವ ಬಡ ವಲಸೆ ಕಾರ್ಮಿಕರು ಹಿಂದೆ ಕಂಡು ಕೇಳರಿಯದ ಪ್ರಮಾಣದ ಮುಂದುವರೆಯುತ್ತಿರುವ ಹಿಂಸಾಚಾರದ ಪ್ರಮುಖ ಬಲಿ. 22 ಕ್ಕೂ ಹೆಚ್ಚು ವಲಸೆಗಾರರು ಕೊಲ್ಲಲ್ಪಟ್ಟಿದ್ದಾರೆ. ನೂರಾರು ಜನ ಗಾಯಗೊಂಡಿದ್ದಾರೆ. ಹತ್ತು ಸಾವಿರಕ್ಕೂ ಹೆಚ್ಚು ಜನ ನಿರ್ವಸಿತರಾಗಿದ್ದಾರೆ. ಬಡ ವಲಸೆ ಕಾರ್ಮಿಕರು ತಮ್ಮ ಉದ್ಯೋಗ, ಮನೆ, ಹೆಂಗಸರನ್ನು ಕದಿತಾರೆ ಮತ್ತು ಅಪರಾಧ ಹೆಚ್ಚಳಕ್ಕೆ ಕಾರಣರಾಗುತ್ತಾರೆ ಎಂಬುದು ದಕ್ಷಿಣ ಆಫ್ರಿಕಾದ ಬಡ ಕಾರ್ಮಿಕರ ಭಾವನೆ. ಇತ್ತೀಚಿನ ಜಿಂಬಾಬ್ವೆಯ ರಾಜಕೀಯ ಬಿಕ್ಕಟ್ಟಿನಿಂದಾಗಿ ವಲಸೆಗಾರರ ಸಂಖ್ಯೆ ಹೆಚ್ಚಿದ್ದು ಈ ಹಿಂಸಾಚಾರಕ್ಕೆ ತಕ್ಷಣದ ಪ್ರಚೋದನೆ ಆಗಿರಬಹುದು. ದಕ್ಷಿಣ ಆಫ್ರಿಕಾದ ಬಡವರಿಗೆ ಉದ್ಯೋಗ ಮತ್ತು ಉತ್ತಮ ಜೀವನ ಮಟ್ಟದ ಭರವಸೆ ಹುಸಿಯಾಗಿರುವುದು, ಶ್ರೀಮಂತ-ಬಡವರ ನಡುವೆ ಅಂತರ ಇನ್ನಷ್ಟು ಹೆಚ್ಚಿರುವುದು ಆಳವಾದ ಕಾರಣ ಇರಬಹುದು.



ಬ್ರಿಟನ್‌ನಲ್ಲೂ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರ

ಬ್ರಿಟನ್ ನಲ್ಲೂ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ಮುಷ್ಕರಗಳ ಅಲೆ ಹರಿಯಬಿಟ್ಟಿದ್ದಾರೆ. ಇದಕ್ಕೆ ಮುಖ್ಯ ಕಾರಣ ಸರ್ಕಾರ ಪ್ರತಿ ವರ್ಷ ಕೇವಲ ಶೇ.2 ವೇತನ ಏರಿಕೆಯ ಮಿತಿ ಹೇರಿರುವುದು. ಇದು ಟ್ರೇಡ್ ಯೂನಿಯನ್ ಹಕ್ಕುಗಳನ್ನು ಮೊಟಕುಗೊಳಿಸುವ ಕ್ರಮ. ಎಲ್ಲಾ ಅಗತ್ಯ ವಸ್ತು-ಸೇವೆಗಳ ಬೆಲೆ ವಿಪರೀತವಾಗಿ ಏರುತ್ತಿರುವಾಗ ಇದು ಅಂಗೀರಾರ್ಹವಲ್ಲ. ಎಂಬುದು ಕಾರ್ಮಿಕರ ವಾದ. ತೈಲ ಸಂಸ್ಕರಣ ಕೇಂದ್ರದ ಕಾರ್ಮಿಕರ ಎರಡು ದಿನದ ಮುಷ್ಕರ, 21 ವರ್ಷಗಳ ನಂತರ ನಡೆದ ಶಿಕ್ಷಕರ ಮುಷ್ಕರ, ಐದು ಲಕ್ಷ ಆರೋಗ್ಯ ಇಲಾಖೆಯ ಕಾರ್ಮಿಕರ ಘೋಷಿತ ಮುಷ್ಕರ, 8.5 ಲಕ್ಷ ಸ್ಥಳೀಯ ಸಂಸ್ಥೆಗಳ ನೌಕರರ ಮುಷ್ಕರ, ಜೈಲು ಅಧಿಕಾರಿಗಳ ಮುಷ್ಕರ - ಹೀಗೆ ಮುಷ್ಕರಗಳ ಅಲೆಯೇ ಎದ್ದಿದೆ.

ಪ್ಯಾರೀಸಿನಲ್ಲಿ ಐದು ಲಕ್ಷ ಕಾರ್ಮಿಕರ ರ್‍ಯಾಲಿ

ಸಾರ್ಕೋಜಿ ಸರ್ಕಾರದ ಕಾರ್ಮಿಕ-ವಿರೋಧಿ ನೀತಿಗಳ ವಿರುದ್ಧ ಕಾರ್ಮಿಕರ ಪ್ರತಿಭಟನೆ ಮುಂದುವರೆದಿದೆ. ಶಿಕ್ಷಣ ಇಲಾಖೆಯ ಶಿಕ್ಷಕರ ಮತ್ತು ಇತರ ಉದ್ಯೋಗ ಕಡಿತದ ವಿರುಧ್ಧ ಮುಷ್ಕರದ ಹಿಂದೆ ಇನ್ನೊಂದು ಪ್ರಮುಖ ಕಾರ್ಯಾಚರಣೆ ನಡೆಯಿತು. ನಿವೃತ್ತಿ ವಯಸ್ಸು ಮತ್ತು ಪೆನ್ಶನ್ ನಲ್ಲಿ ಸುಧಾರಣೆ ಹೆಸರಲ್ಲಿ ತೀವ್ರ ಕಡಿತ ಮಾಡುವ ಸರ್ಕಾರದ ನೀತಿಯನ್ನು ಪ್ರತಿಭಟಿಸಿ ದೇಶದಾದ್ಯಂತ ಭಾರಿ ಪ್ರತಿಭಟನೆ ನಡೆಯಿತು. ಇತ್ತೀಚಿಗೆ ಅಪರೂಪವಾಗಿದ್ದ ಐದು ಕೇಂದ್ರೀಯ ಟ್ರೇಡ್ ಯೂನಿಯನ್ ಗಳು ನೀಡಿದ ಜಂಟಿ ಕರೆಗೆ ಓಗೊಟ್ಟು ಲಕ್ಷಾಂತರ ಕಾರ್ಮಿಕರು ಪ್ರತಿಭಟನೆಯಲ್ಲಿ ಭಾಗವಹಿಸಿದರು. ಪ್ಯಾರಿಸಿನ ರ್‍ಯಾಲಿ ಒಂದರಲ್ಲೇ ಐದು ಲಕ್ಷ ಕಾರ್ಮಿಕರು ಭಾಗವಹಿಸಿದರು. ಈ ಎರಡೂ ಕಾರ್ಯಾಚರಣೆಗಳು ಸರ್ಕಾರ ತನ್ನ ನೀತಿ ಬದಲಾಯಿಸುವವರೆಗೆ ಮುಂದುವರೆಯುತ್ತವೆ ಎಂದು ಕಾರ್ಮಿಕ ನಾಯಕರು ಹೇಳಿದ್ದಾರೆ.



ತೈಲ ಬೆಲೆ ಏರಿಕೆ ಬಗ್ಗೆ ಸೆನೆಟರ್‌ಗಳಿಗೂ ಆಕ್ರೋಶ

ತೈಲದ ಬೆಲೆ ಪೆಟ್ರೋಲನ್ನು ನೀರಿನಂತೆ ಖರ್ಚು ಮಾಡುವ ಅಮೆರಿಕನರಿಗೆ ಬಹಳ ಸೂಕ್ಷ್ಮ ವಿಷಯ. ಕಳೆದ ಒಂದು ವರ್ಷದಲ್ಲಿ ಪೆಟ್ರೋಲ್ ಬೆಲೆ ಇಮ್ಮಡಿಯಾಗಿದೆ. ಬುಶ್ ಅಧಿಕಾರ ವಹಿಸಿಕೊಂಡಾಗಿಂದ ಬೆಲೆ ನಾಲ್ಕು ಪಟ್ಟಾಗಿದೆ. ಸಾಮಾನ್ಯವಾಗಿ ಇಂತಹ ವಿಷಯಗಳ ಬಗ್ಗೆ ಜನ ಪ್ರತಿನಿಧಿ ಸೆನೆಟರ್‌ಗಳು ತಲೆ ಕೆಡಿಸಿಕೊಳ್ಳುವುದಿಲ್ಲ. ಜನ ಸಹ ಸೆನೆಟರ್ ಗಳನ್ನು ಇಂತಹ ವಿಷಯಗಳ ಬಗ್ಗೆ ತರಾಟೆಗೆ ತೆಗೆದುಕೊಳ್ಳುವುದಿಲ್ಲ. ಆದರೆ ಇವೆಲ್ಲಾ ಬದಲಾಗಿದೆ. ಇತ್ತೀಚಿಗೆ ನಡೆದ ತೈಲದ ಬಗೆಗಿನ ಸೆನೆಟರ್ ಸಮಿತಿಯ ಬಹಿರಂಗ ಸಭೆ ಬಾರಿ ಸುದ್ದಿ ಮಾಡಿತು. ಸಮಿತಿ ಯಾವುದಾದರೂ ಕಾನೂನಿನ ಬಗ್ಗೆ ಚರ್ಚೆ ನಡೆಸುತ್ತಿದ್ದರೆ, ಸಂಬಂಧಪಟ್ಟ ಹಿತಾಸಕ್ತಿಗಳ (ಸಾಮಾನ್ಯವಾಗಿ ಕಂಪನಿಗಳ) ಪ್ರತಿನಿಧಿಗಳು ಬಾಗವಹಿಸುತ್ತಾರೆ. ಆದರೆ ಈ ಸಭೆಯಲ್ಲಿ ಯಾವ ಕಾನೂನು ಚರ್ಚೆಯಾಗುತ್ತಿರಲಿಲ್ಲ. ಸಭೆಗೆ ಹಲವು ಪ್ರತಿಭಟನಾಕಾರರು ಬಂದಿದ್ದರು. ಸಭೆ ಆಹ್ವಾನಿಸಲಾಗಿದ್ದ ದೈತ್ಯ ತೈಲ ಕಂಪನಿಗಳ ಬಹಿರಂಗ.ವಿಚಾರಣೆಯ ರೂಪ ಪಡೆಯಿತು.

ಸಭೆಗೆ ಬಂದ ಜನ ಮಾತ್ರವಲ್ಲ, ಎರಡೂ ಪ್ರಮುಖ ಪಕ್ಷಗಳ ಸೆನೆಟರ್ ಗಳೂ ತೈಲ ಬೆಲೆ ಏರಿಕೆ ಬಗ್ಗೆ ತಮ್ಮ ತೀವ್ರ ಆಕ್ರೋಶ ವ್ಯಕ್ತ ಪಡಿಸಿದರು. ಸೆನೆಟರ್ ಸಮಿತಿಗೆ ತೈಲ ಕಂಪನಿಗಳು ಕಾನೂನು ಬಾಹಿರ ಏಕಸ್ವಾಮ್ಯ ನೀತಿಗಳನ್ನು ಅನುಸರಿಸಿ ಸೂಪರ್ ಲಾಭ ಗಳಿಸುತ್ತಿವೆಯೆ ಎಂದು ಪ್ರಶ್ನಿಸಲು ಅಧಿಕಾರ ಇದೆ. ಸಭೆಯಲ್ಲಿ ದೈತ್ಯ ತೈಲ ಕಂಪನಿಗಳಲ್ಲಿ ಒಂದಾದ ಎಕ್ಸಾನ್-ಮೊಬಿಲ್ ನ ಲಾಭ ಕಳೆದ ಐದು ವರ್ಷಗಳಲ್ಲಿ ನಾಲ್ಕು ಪಟ್ಟು ಆಗಿದೆ. ಅದು ಯಾಕೆ? ಹೇಗೆ? ಎಂದು ಅವರನ್ನು ಪ್ರಶ್ನಿಸಲಾಯಿತು. ತೈಲ ಕಂಪನಿಗಳ ಉನ್ನತ ಅಧಿಕಾರಿಗಳು ಕಡಿಮೆಯಾಗುತ್ತಿರುವ ನಿಕ್ಷೇಪಗಳು, ಉತ್ಪಾದನೆ ಮೇಲೆ ನಿರ್ಬಂಧ, ವೆಚ್ಚಗಳ ಮೇಲೆ ಹಾಕಿ ನುಣುಚಿಕೊಂಡರು. ಆದರೆ ಬೆಲೆಗಳು ಏರುತ್ತಿದ್ದಂತೆ, ಅಮೆರಿಕನ್ ವಿಮಾನಯಾನ ಕಂಪನಿಗಳು ಹಲವು ಅಗ್ಗ ಬೆಲೆಯ ವಿಮಾನ ಹಾರಾಟಗಳನ್ನು ಕಡಿತ ಮಾಡುತ್ತಿದ್ದಾರೆ. ಇಂತಹ ಸಂಗತಿಗಳು ಜನರನ್ನು ರೊಚ್ಚಿಗೇಳಿಸಲಿವೆ.

ಶ್ರೀಲಂಕಾ - ಜಿವಿಪಿಯಲ್ಲಿ ಬಿಕ್ಕಟ್ಟು

ಶ್ರೀಲಂಕಾದ ಜೆ.ವಿ.ಪಿ (ಜನತಾ ವಿಮುಕ್ತಿ ಪೆರುಮಾನ) ಪಕ್ಷದ 39 ಎಂ.ಪಿ. ಗಳಲ್ಲಿ, 11 ಎಂ.ಪಿ.ಗಳು ಆ ಪಕ್ಷದ ಪ್ರಚಾರ-ಪ್ರಕ್ಷೋಭೆ ಕಾರ್ಯದರ್ಶಿ ನಾಯಕತ್ವದಲ್ಲಿ ಪ್ರತ್ಯೇಕ ಗುಂಪಾಗಿ ಕೂರಲು ನಿರ್ಧರಿಸಿದ್ದು ತೀವ್ರ ಬಿಕ್ಕಟ್ಟು ಉದ್ಭವಿಸಿದೆ. ಅದು ಆ ದೇಶದ ರಾಜಕೀಯದಲ್ಲಿ ಮಹತ್ವದ ಪರಿಣಾಮ ಬೀರ ಬಹುದು. 2004 ಚುನಾವಣೆಯಲ್ಲಿ ರಾಜಪಕ್ಸ ನಾಯಕತ್ವದ ರಂಗದ ಭಾಗವಾಗಿ 39 ಸೀಟುಗಳನ್ನು ಗೆದ್ದು ಆಳುವ ರಂಗದ ಭಾಗವಾಯಿತು. ಆ ಮೇಲಿನ ಅಧ್ಯಕ್ಷೀಯ ಚುನಾವಣೆಯಲ್ಲೂ ರಾಜಪಕ್ಸರನ್ನು ಬೆಂಬಲಿಸಿ, ಕಡುವೈರಿ ಯು.ಎನ್.ಪಿ.ಯನ್ನು ಸೋಲಿಸಿತು. ಆದರೆ ಆ ಮೇಲೆ ರಾಜಪಕ್ಸ ಮತ್ತು ಜೆ.ವಿ.ಪಿ: ನಡುವೆ ಭಿನ್ನಾಭಿಪ್ರಾಯಗಳು ಆರಂಭವಾದವು. ಈ ತಿಕ್ಕಾಟದ ಭಾಗವಾಗಿ ರಾಜಪಕ್ಸ ಜೆ.ವಿ.ಪಿ.ಯ ಒಂದು ವಿಭಾಗದ ಜತೆ ಸೇರಿ ಪಕ್ಷದಲ್ಲಿ ಬಿಕ್ಕಟ್ಟು ಉಂಟು ಮಾಡಲು ಪ್ರಯತ್ನ ಮಾಡಿದ್ದಾರೆ ಎನ್ನಲಾಗಿದೆ. ಜೆ.ವಿ.ಪಿ.ಯ ನಾಯಕತ್ವದಲ್ಲಿ ಭಿನ್ನಾಭಿಪ್ರಾಯ ಹೊಸತೇನಲ್ಲ. ಜೆ.ವಿ.ಪಿ.ಯತ್ತ ಧೋರಣೆ ಬಗ್ಗೆ ಭಿನ್ನಾಭಿಪ್ರಾಯ ಇಷ್ಟು ತೀವ್ರ ಬಿಕ್ಕಟ್ಟಿಗೆ ಎಡೆ ಕೊಡಬಹುದು ಎಂಬುದು ಅಚ್ಚರಿ ತಂದಿದೆ.

ಜೆ.ವಿ.ಪಿ. 70 ರ ದಶಕದಲ್ಲಿ ನಮ್ಮ ದೇಶದ ನಕ್ಸಲೈಟ್ ಚಳುವಳಿಯಂತೆ ಎಡ ದುಸ್ಸಾಹಸವಾದಿ ಪಕ್ಷವಾಗಿ ಹೊಮ್ಮಿತ್ತು. ಸಶಸ್ತ್ರ ಕ್ರಾಂತಿಯ ಕನಸು ಕಂಡಿತ್ತು. ಅದರ ಚಟುವಟಿಕೆಗಳನ್ನು ಸರ್ಕಾರ ದಮನ ಮಾಡಿದ ಮೇಲೆ, ತನ್ನ ರಾಜಕೀಯ ನೆಲೆ ಉಳಿಸಿಕೊಳ್ಳಲು ಜನಾಂಗೀಯ ಸಂಕುಚಿತವಾದದ ಹಾದಿ ಹಿಡಿಯಿತು. ತಮಿಳರು ಅಥವಾ ಯಾವುದೇ ಅಲ್ಪಸಂಖ್ಯಾತರಿಗೆ ಸ್ವಾಯತ್ತತೆ ವಿರೋಧಿಸುವ, ಶ್ರೀಲಂಕಾ ಬುದ್ಧರ ಅಧಿಪತ್ಯ ಸಾರುವ ಮತ್ತು ಸಂಕುಚಿತ ಹಿತಾಸಕ್ತಿಗಳನ್ನು ಉಗ್ರವಾಗಿ ಎತ್ತಿ ಹಿಡಿಯುವ ಪಕ್ಷವಾಗಿ ಬೆಳೆಯಿತು. ತಮಿಳು ಚಳುವಳಿ ಜತೆ ಸರ್ಕಾರ ಯಾವುದೇ ಮಾತುಕತೆ, ಚೌಕಾಶಿ, ಪರಿಹಾರದ ಪ್ರಯತ್ನಗಳನ್ನು ವಿರೋಧಿಸಿತು. ಎಲ್.ಟಿ.ಟಿ.ಇ.ಯ ಇನ್ನೊಂದು ಧ್ರುವದಂತೆ ವರ್ತಿಸಿತ್ತು.

ಜಿಪ್ಸಿಗಳ ಮೇಲೆ ಇಟಲಿ ಸರ್ಕಾರದ ಕೆಂಗಣ್ಣು

ಇಟಲಿಯ ಫ್ಯಾಸಿಸ್ಟ್ ಪಕ್ಷದ ವಾರಸುದಾರ ಇರುವ ಬಲಪಂಥೀಯ ಸರ್ಕಾರ ಇಟಲಿಯಲ್ಲಿ ಬಂದಿದೆ. ದೇಶದ ಸಮಸ್ಯೆಗಳ ಮೂಲ ಯಾವುದೇ ಬಡಪಾಯಿ ಅಲ್ಪಸಂಖ್ಯಾತರ ಮೇಲೆ ಹೋರಿಸಿ ಅವರ ವಿರುದ್ಧ ಆಕ್ರಮಣಕಾರಿ ನೀತಿ ಅಂಗೀಕರಿಸುವುದು ಫ್ಯಾಸಿಸ್ಟರ ಸ್ವಭಾವ. ಇಟಲಿಯ ಬೆರ್ಲುಸ್ಕೊನಿ ಸರ್ಕಾರ ಈ ಸ್ವಭಾವ ಪ್ರದರ್ಶಿಸಲು ಆರಂಭಿಸಿದೆ. ಇಟಲಿ ಸರ್ಕಾರದ ಪ್ರಕಾರ ಯುರೋಪಿನ ಹಲವು ಭಾಗಗಳಲ್ಲಿ ಅಲೆಮಾರಿ ಜೀವನ ನಡೆಸುವ ಜಿಪ್ಸಿಗಳು ಮತ್ತು ವಲಸೆಗಾರರು 'ವಿಲನ್' ಗಳು. ಕಾನೂನುಬಾಹಿರ ವಲಸೆಗಾರರು(ಇತರ ಯುರೋಪಿಯನ್ ಒಕ್ಕೂಟದ ನಾಗರಿಕರು ಸೇರಿದಂತೆ) ವಿರುದ್ಧ ದೇಶದಿಂದ ಹೊರಕ್ಕೆ ಕಳಿಸುವ ಅಧಿಕಾರವನ್ನು ಸ್ಥಳೀಯ ಸಂಸ್ಥೆಯ ಅಧಿಕಾರಿಗಳಿಗೆ ಕೊಡಲಾಗಿದೆ. ವಲಸೆಗಾರಿಗೆ ಬಾಡಿಗೆ ಕೊಡುವ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳುವ ಅಧಿಕಾರ ಹೊಂದಿದೆ. ಸರ್ಕಾರ ತಂದಿರುವ ಹಲವು ಹೊಸ ಕ್ರಮಗಳು ಯುರೋಪಿಯನ್ ಒಕ್ಕೂಟದ ಹಲವು ನಾಗರಿಕರ ಹಕ್ಕುಗಳನ್ನು ಉಲ್ಲಂಘಿಸುತ್ತವೆ ಮತ್ತು ವಲಸೆಗಾರರ ಸಮಸ್ಯೆಯ ಅಪರಾಧಿಕರಣ ಮಾಡುತ್ತದೆ ಎನ್ನಲಾಗಿದೆ.

ನೋಟ



ಜಾಗತೀಕರಣ : ಮಾನವ ನಿರ್ಮಿತ ಸುನಾಮಿ

ಡಾ. ಜಿ. ಭಾಸ್ಕರ ಮಯ್ಯ

ಈ ಸುನಾಮಿ ಎದುರು ಮೂರನೆಯ ಜಗತ್ತಿನ ದೇಶಗಳು ತರಗೆಲೆಗಳಂತೆ ಕೊಚ್ಚಿಹೋಗುತ್ತವೆ ಇದ ಪರಿಣಾಮವು ಪ್ರಾಕೃತಿಕ ಸುನಾಮಿಗಿಂತಲೂ ಭೀಕರವಾದುದು.

ಭಾರತವು ಜಗತ್ತಿನಲ್ಲಿಯೇ ಅತಿ ಹೆಚ್ಚು ಹತ್ತಿ ಬೆಳೆಯುವ ಮೂರನೆಯ ದೇಶ. ಎರಡನೆಯ ಅತಿ ದೊಡ್ಡ ನೇಕಾರಿಕೆಯ ದೇಶ. ಇಲ್ಲಿ ಅದಕ್ಕೆ ಬೇಕಾದ infrastructure ಇದೆ. ತೊಂಬತ್ತು ಶೇಕಡಾ ರಫ್ತು ಉಡುಗೆಗಳದ್ದೇ ಆಗಿದೆ. ವಸ್ತ್ರ ಮತ್ತು ಉಡುಪುಗಳ ಅಂತಾರಾಷ್ಟ್ರೀಯ ಮಾರುಕಟ್ಟೆ ಬಹಳ ವಿಶಾಲವಾದುದು. ಇದರ ವಹಿವಾಟು ವಾರ್ಷಿಕ ,530 ಕೋಟಿ ಡಾಲರ್‌ಗಳಿಗಿಂತಲೂ ಅಧಿಕ. ಎಲ್ಲಿ ಕೂಲಿ ಕಡಿಮೆಯೋ, ರಾಸಾಯನಿಕ ಮತ್ತು ನೂಲಿನ ಪೂರೈಕೆಗೆ ಅನುಕೂಲ ಪರಿಸ್ಥಿತಿ ಇದೆಯೋ ಹಾಗೂ ದೊಡ್ಡ ದೊಡ್ಡ ಬಂದರುಗಳಿಗೆ ಸಾಗಿಸುವ ವ್ಯವಸ್ಥೆಯಿದೆಯೋ ಅವು ಹೆಚ್ಚು ಲಾಭಗಳಿಸಬಹುದು. ಆದರೆ, ಪರಿಸ್ಥಿತಿ ಈಗ ಹಾಗಿಲ್ಲ. ಅವೆಲ್ಲಾ ಜಾಗತೀಕರಣದ ಈ ಸಂದರ್ಭದಲ್ಲಿ ಕೇವಲ ಚರಿತ್ರೆಯ ವಿಷಯ. ಇಂದು ಮಾರುಕಟ್ಟೆಯ ಮೇಲೆ WTO ನಿಬಂಧನೆಗಳ ಮೂಲಕ ಬಹುರಾಷ್ಟ್ರೀಯ ಕಂಪೆನಿಗಳು ಹಿಡಿತ ಸಾಧಿಸಿದೆ. ನೇಕಾರರು ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಬೀದಿಗೆ ಬಂದಿದ್ದಾರೆ. ಆಂಧ್ರದ ನೂರಾರು ನೇಕಾರರ ಆತ್ಮಹತ್ಯೆಯನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು.

ಅನುಬಂಧ: 1

ಆರ್ಥಿಕ ಸುಧಾರಣೆಯ ಫಲವಾಗಿ

1. ನಿರುದ್ಯೋಗ ಗಣನೀಯವಾಗಿ ಹೆಚ್ಚಿದೆ.
2. ಕೈಗಾರಿಕಾ ಅಭಿವೃದ್ಧಿಯ ಬೆಳವಣಿಗೆಯ ಗತಿ ಕುಂಠಿತವಾಗಿದೆ
3. ಭಾರತೀಯ ಬಟ್ಟೆ ಮಿಲ್ಲುಗಳ ಮೇಲೆ ಅತ್ಯಂತ ನಕಾರಾತ್ಮಕ ಪರಿಣಾಮ ಬೀರಿದೆ.
4. 'ಚಾ' ಪ್ಲಾಂಟೇಶನ್ ಸ್ಥಿತಿ ದುಸ್ತರವಾಗಿದೆ.
5. ವರ್ಷದಿಂದ ವರ್ಷಕ್ಕೆ ಕೃಷಿ ಕ್ಷೇತ್ರಕ್ಕೆ ಒದಗಿಸುವ ಬೆಂಬಲ ಕಡಿಮೆಯಾಗುತ್ತಾ ಬಂದಿದೆ.
6. ಸಣ್ಣ ಕೈಗಾರಿಕೆಗಳು ಸಾವಿನ ದವಡೆಯಲ್ಲಿವೆ.
7. ಲಾಕ್‌ಔಟ್‌ನಿಂದಾಗಿ ಕಾರ್ಮಿಕರ ಕೆಲಸದ ಗಂಟೆಗಳು ಕಡಿಮೆಯಾಗಿವೆ.
8. VRS, ಕೈಗಾರಿಕೆಗಳನ್ನು ಮುಚ್ಚುವುದು ಇತ್ಯಾದಿಗಳಿಂದ ದೊಡ್ಡ ಸಂಖ್ಯೆಯಲ್ಲಿ ಕಾರ್ಮಿಕರು ನಿರುದ್ಯೋಗಿಗಳಾಗುತ್ತಿದ್ದಾರೆ.
9. ಸಂಘಟನೆಯ ಶಕ್ತಿಯನ್ನು ಕುಂದಿಸುವ ಯತ್ನಗಳು ನಡೆದಿವೆ.
10. ಸರ್ಕಾರಗಳು ಕಾರ್ಮಿಕರ ಬಗ್ಗೆ ಉದಾಸೀನ ಧೋರಣೆಯನ್ನು ಹೊಂದಿವೆ. ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯಿಲ್ಲ.
11. ವಿವಾದ ಇತ್ಯರ್ಥ ಮತ್ತು ಒಪ್ಪಂದಗಳು ಮಾಲಿಕರ ಪರವಾಗಿವೆ.

ಅನುಬಂಧ: 2

1. ಜಗತ್ತಿನ ಅತೀ ಶ್ರೀಮಂತ 500 ಜನರ ಒಟ್ಟು ಸಂಪತ್ತು 41.54 ಟ್ರಿಲಿಯನ್ ಡಾಲರುಗಳು. 'ಒಂದು ಟ್ರಿಲಿಯನ್ ಎಂದರೆ 1,000,000,000,000 ಅಥವಾ ಒಂದು ಮಿಲಿಯ'
2. ದಕ್ಷಿಣ ಏಶಿಯಾವು ಜಗತ್ತಿನ ಅತ್ಯಂತ ಬಡವರ ಪ್ರದೇಶವಾಗಿದೆ. ಅಲ್ಲಿಯ 51 ಕೋಟಿ 50 ಲಕ್ಷ ಜನರ ಸ್ಥಿತಿಯು ಜಾಗತೀಕರಣದಿಂದಾಗಿ ನಿರ್ಗತಿಕವಾಗಿದೆ.
3. ಅಮೇರಿಕಾದ ಕಾರ್ಪೋರೇಟ್ ಅಪರಾಧಗಳು ಇಂದು ಭಾರತದಲ್ಲಿ ವ್ಯಾಪಕವಾಗಿ ಹರಡಿದೆ.

   ಉದಾ: ಜಿರಾಕ್ಸ್‌ರವರ ಪ್ರಕಾರ ಭಾರತೀಯ ಸಬ್ಸಿಡಿಯರಿ ಕಂಪೆನಿಯು ಸರಕಾರಿ ಅಧಿಕಾರಿಗಳಿಗೆ ಲಕ್ಷಗಟ್ಟಲೆ ಡಾಲರ್ ಲಂಚ ವಿತರಿಸಿದೆ. ಇದರಿಂದ ಭ್ರಷ್ಟಾಚಾರದ ಜಾಗತೀಕರಣವುಂಟಾಗಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಅತ್ಯಂತ ಅನುಕೂಲ ವಾತಾವರಣ ಸೃಷ್ಟಿಯಾಗಿದೆ.
4. ವಿಶ್ವವ್ಯಾಪಾರ ಸಂಘಟನೆಯು ಅಭಿವೃದ್ಧಿಶೀಲ ಮತ್ತು ಅಭಿವೃದ್ಧಿ ಹೊಂದಿದ ದೇಶಗಳ ಅರ್ಥವ್ಯವಸ್ಥೆಯನ್ನು ಅಮೇರಿಕಾವು ತನ್ನ ಡಾಲರ್ ಅರ್ಥವ್ಯವಸ್ಥೆಯೊಳಗೆ ಒಂದುಗೂಡಿಸಿಕೊಂಡಿದೆ. ಭಾರತ ನಿರಂತರವಾಗಿ ಇದರಿಂದ ಹಾನಿ ಅನುಭವಿಸುತ್ತಾ ಬರುತ್ತಿದೆ. 2003ರಲ್ಲಿ ಈ ಕೊರತೆ 600 ಬಿಲಿಯನ್ ಡಾಲರ್ ಆಗಿತ್ತು. ಇದು ಭಾರತದ ಭವಿಷ್ಯದ ಮೇಲೆ ಅಸ್ಥಿರ ಡಾಲರನ ಅಪಾಯವನ್ನು ತಂದೊಡ್ಡಿ ಭಯಾನಕ ದುಷ್ಪರಿಣಾಮಗಳಿಗೆ ಎಡೆಮಾಡಿಕೊಡುತ್ತಿದೆ.
5. ಜಾಗತೀಕರಣದ ಇನ್ನೊಂದು ಭಯಾನಕ ಮುಖವನ್ನು ಬಹಳಷ್ಟು ಜನ ಇನ್ನೂ ತಿಳಿದಿಲ್ಲ. ಅದು ಶಸ್ತ್ರಾಸ್ತ್ರ ಕೈಗಾರಿಕೆ ಮತ್ತು ವ್ಯಾಪಾರಕ್ಕೆ ಸಂಬಂಧಪಟ್ಟಿರುವುದು. ಗ್ಯಾಟ್ ನಿಯಮದ ಪ್ರಕಾರ ರಾಷ್ಟ್ರೀಯ ಸುರಕ್ಷೆಯ ಪ್ರಶ್ನೆಯಲ್ಲಿ ಸೈನ್ಯಕ್ಕೆ ಮಾಡುವ ಖರ್ಚಿಗೆ ಸಂಪೂರ್ಣ ವಿನಾಯಿತಿ ಇದೆ. ಈ ನಿಯಮವು ಸರಕಾರಗಳಿಗೆ ತಮ್ಮ ಸುರಕ್ಷತೆಯ ಅವಶ್ಯಕತೆಗಳನ್ನು ತಾವೇ ನಿರ್ಧರಿಸುವ ಸ್ವಾತಂತ್ರವನ್ನು ನೀಡುತ್ತದೆ. ಇದರಲ್ಲಿ ಎಲ್ಲವೂ ಸೇರಿದೆ: ಉದಾ: ಸಂಶೋಧನೆಗೆ ಉತ್ತೇಜನ ಮತ್ತು ಆಮದು ರಫ್ತು. ಸುರಕ್ಷೆ ಮತ್ತು ಸೈನ್ಯ ಕಾರ್ಪೋರೇಶನ್‌ಗಳ ಜಾಗತೀಕರಣ. ಬಹುರಾಷ್ಟ್ರೀಯತೆಯ ಸೈನಿಕ ಕೈಗಾರಿಕಾ ಸಂಕೀರ್ಣ 'Complex' ವನ್ನು ಹೊಸ ವಿಶ್ವ ಅರ್ಥವ್ಯವಸ್ಥೆಯ ಸೈನಿಕ ಕಾರ್ಪೋರೇಟ್ ಸಂಕೀರ್ಣವನ್ನಾಗಿ ಪರಿವರ್ತಿಸಲಾಗಿದೆ. ಇಷ್ಟು ಮಾತ್ರವಲ್ಲದೆ ಮುಕ್ತ ಮಾರುಕಟ್ಟೆಯ ಅರ್ಥವ್ಯವಸ್ಥೆ ಮತ್ತು ಅಮೇರಿಕಾದ ರಾಷ್ಟ್ರೀಯ ಸುರಕ್ಷೆಯ ನಡುವೆ ಆಳವಾದ ಸಂಬಂಧವಿದೆ.

ಉದಾ: 1996 ಆರ್ಥಿಕ ಪತ್ತೇದಾರಿ ಕಾನೂನೆಂಬುದು ಅಮೇರಿಕಾದ ಕಂಪೆನಿಗಳ ಬೌದ್ಧಿಕ ಆಸ್ತಿ 'ಪೇಟೆಂಟ್ ಹಕ್ಕು'. ಆ ಕಾನೂನು ಯಾವುದೇ ದೇಶದ ಯಾವುದೇ ನಾಗರಿಕನ ಮೇಲೆ ಕಣ್ಣಿಡುವ ಸ್ವಾತಂತ್ರ್ಯವನ್ನು ನೀಡುತ್ತದೆ. ಈ ಕಾನೂನಿನ ಮುನ್ನುಡಿಯಲ್ಲಿ ಬರೆಯಲಾದ ಒಂದು ಭಯಾನಕ ಅಂಶ ಹೀಗಿದೆ: 'ಆರ್ಥಿಕ ಹಿತವು ರಾಷ್ಟ್ರೀಯ ಹಿತದ ಅವಿಭಾಜ್ಯ ಅಂಗ. ಇದರಿಂದಾಗಿ pre - emotive ಅಂದರೆ ಕೇವಲ ಸಂಶಯದ ಮೇಲೆ ಯಾವುದೇ ದೇಶದ ಮೇಲೆ ಯುದ್ಧಸಾರಬಹುದು'. 'ಯುದ್ಧದ ಸಾಧ್ಯತೆ ಮತ್ತು ಪ್ರಕ್ರಿಯೆಗಳು ಜಾಗತೀಕರಣದ ಒಂದು ಅವಿಭಾಜ್ಯ ಅಂಗ. ಮಾರುಕಟ್ಟೆಯ ಅದೃಶ್ಯ ಕೈಗಳು ಅದೃಶ್ಯ ಹೊಡೆತಗಳನ್ನು ಕೊಡದೆ ಕೆಲಸ ಮಾಡಲಾರವು' 'ಥಾಮಸ್ ಫ್ರೀಡ್‌ಮನ್'. ಜಾಗತೀಕರಣವನ್ನು ಸೈನ್ಯ ಪ್ರಕ್ರಿಯೆಗೆ ಪರ್ಯಾಯವಾಗಿ ನೋಡಬೇಕಾಗಿಲ್ಲದಿದ್ದರೂ ಅಂತಿಮವಾಗಿ ಅದು ಯುದ್ಧದೆಡೆಗೇ ಕೊಂಡೊಯ್ಯುತ್ತದೆ. ಏಕೆಂದರೆ ಅದು ಅದಕ್ಕೆ ಅಗತ್ಯವಾಗುತ್ತದೆ. ಮಾತ್ರವಲ್ಲದೆ ಅದು ಸೈನ್ಯ ಕೈಗಾರಿಕೆಯ ಪರ ವಕಾಲತ್ತು ನಡೆಸುತ್ತಾ ಯುದ್ಧಕ್ಕೆ ಕುಮ್ಮಕ್ಕು ಕೊಡುತ್ತದೆ.

...ಹುಡುಕಾಟದಲ್ಲಿ 'ಗಾಂಧಿ ಜಯಂತಿ'

ಪುಟ 16ರಿಂದ

ಯಸ್ಸಾದಂತೆ ಕಾಣುವುದಿಲ್ಲ. ಎಂ.ಎಲ್.ಎ. ಮಾದಗಿಯಾಗಿ ನಟಿಸಿದ ಈಶ್ವರದಲರವರು ನಗೆ ಉಕ್ಕಿಸುತ್ತ ನೆನಪಿನಲ್ಲಿ ಉಳಿಯುತ್ತಾರೆ. ಆದರೆ ಕೆಲ ಡೆ ನಟನೆ ಹೆಚ್ಚಾದಂತೆ (over) ಭಾಸವಾಗುತ್ತದೆ. ಡಳಿತ ಪಕ್ಷದ ಅಧ್ಯಕ್ಷರಾಗಿ ಕುತಂತ್ರ ರೂಪಿಸುವ ಷ್ಣಶೆಟ್ಟಿ, ವಿರೋಧ ಪಕ್ಷದ ನಾಯಕಿಯಾಗಿ ರಂಜಿತ ಸೂರ್ಯವಂಶಿ, ನ್ಯಾಯಾಧೀಶರಾಗಿ ನಂಜುಂಡಸ್ವಾಮಿ, ಚಿತ್ರಹಿಂಸೆಗಳ ಸುರಿಮಳೆ ಸುರಿದ ಚಿತ್ರಗುಪ್ತನ ಪಾತ್ರದ ವೆಂಕಟಾಚಲ, ಸಹಜವಾದ ಆದರ್ಶವಾದಿ ರಾಜಾರಾವ್ ಪಾತ್ರದ ರೇಂದ್ರಬಾಬು, ರಾಮರಾಜ್ಯ ಪಕ್ಷದ ಕೋಮುವಾದಿ ನಂಜುಂಡೇಗೌಡ, ಬಡವರ ಪಕ್ಷದ ಡಪಂಥೀಯರಾಗಿ ಸಿದ್ದೇಶರು ಸೂಕ್ತ ರೀತಿಯಲ್ಲಿ ಟಿಸಿರುವರು.

ನಾಟಕದ ಮಧ್ಯೆ ಕೆಲಕಡೆ ಮಾತುಗಳು ಕೃತ್ಯಯವಾಗಿದ್ದುದು ರಸಭಂಗವಾಗಲು ಕಾರಣವಾಯಿತು. ಸದಾಶಿವರ ಕೆ.ಎಸ್.ಡಿ.ಎಲ್ ಮತ್ತು ಸಂತೋಷರ ರಂಗವಿನ್ಯಾಸದಲ್ಲಿ ನರಕ ಯಮಪುರ)ದ ವಿನ್ಯಾಸ ಆಶ್ರಮ, ಕೋರ್ಟುಗಳಲ್ಲಿ ಯಶಾಶೀಲತೆ ಇತ್ತು. ರಂಗಪರಿಕರವನ್ನು ಮರುಡಯ್ಯ ಸೂಕ್ತವಾಗಿ ಮಾಡಿರುವುದು ಎದ್ದುಕಾಣುತ್ತದೆ. ಚೌಡೇಶ್ವರಿ ಮೋಹನ್‌ರವರ ವಸ್ತ್ರವಿನ್ಯಾಸ ಪಾತ್ರಗಳಿಗೆ ಜೀವ ತುಂಬುವಂತಿದೆ.

ಕೆಲವು ಪ್ರಶ್ನೆಗಳು

ನಾಟಕದಲ್ಲಿ ಎಲ್ಲಿಯೂ ಸಾಮಾನ್ಯರ ಬದುಕಿನ ಸಮಸ್ಯೆಗಳ ಸರಿಯಾದ ಪ್ರಸ್ತಾಪವಿಲ್ಲ. ಶೋಷಿತರ ಮುಕ್ತಿಗೆ ಪರಿಹಾರ ಏನು ಎಂದು ನೇರವಾಗಿ ಹೇಳುವುದಿಲ್ಲವಾದರೂ ಬಾಂಬು, ಬಂದೂಕಿನ ಮಾತನ್ನು ಮಹಾತ್ಮ ಗಾಂಧಿಯ ಬಾಯಿಂದ ಹೇಳಿಸುವುದು ಸಮಂಜಸವೇ ಎಂಬ ಪ್ರಶ್ನೆ ಏಳುತ್ತದೆ.

ನರಕದಿಂದ, ಸ್ವರ್ಗದಿಂದ ಭೂಮಿಗೆ ಬರುವುದು ಅಥವಾ ಮರುಜನ್ಮ ಪಡೆದು ಬರುವುದು ಇಂತಹ ಸವಕಲು ತಂತ್ರಕ್ಕಿಂತ ಉತ್ತಮವಾದದ್ದು ಲೇಖಕರಿಗೆ ಅದರಲ್ಲೂ ವ್ಯವಸ್ಥೆಯ ಕುರಿತು ಆಳವಾದ ಚಿಂತನೆ ನಡೆಸುವವರಿಗೆ ಹೊಳೆಯಲಿಲ್ಲ ಎನ್ನುವುದು ಏನನ್ನು ಸೂಚಿಸುತ್ತದೆ.

ಈ ನಾಟಕವನ್ನು ಅಗಲಿದ ಹಿರಿಯ ಕಲಾವಿದ ಮೈಕೊ ಚಂದ್ರುರವರಿಗೆ ಶ್ರದ್ಧಾಂಜಲಿ ಅರ್ಪಣೆಯ ರಂಗನಮನವಾಗಿ 20 ಮೇ 2008ರಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಮೈಕೊ ಶಿವಣ್ಣನವರ ನಿರ್ದೇಶನದಲ್ಲಿ ರೂಪಾಂತರ ಮತ್ತು ರಂಗ ಗೆಳೆಯರು ಅಭಿನಯಿಸಿದರು.

ಕವನ

ಮಣ್ಣಿನ ಮಗ



ಬೆಂದ ನೆಲದಲ್ಲಿ
ನೊಂದವನ ಹಾಡು!

ಜೋಡೆತ್ತುಗಳ ಕಟ್ಟಿ
ಉತ್ತಿದ ಹಾಡು
ರಂಟೆ - ಕುಂಟೆಗಳ ಹೊಡೆದು
ಬೆಳೆದ ಪಾಡು!


ಸೂರ್ಯ-ಚಂದ್ರರು ತಿರುಗಿ
ತೂಗಿದ ಜೋಗುಳದ ಹಾಡು
ಹಗಲ ಚಿಂತೆಯಲಿ ಚಿತೆಯೇರಿದವಗೆ
ನಿದ್ದೆ ಬಾರದ ರಾತ್ರಿಗಳ ಪಾಡು!

ಮುಂಗಾರ ಮಿಂಚು; ಹಿಂಗಾರ ಸಂಚಿನಲಿ
ಸರಿದು-ಸುರಿದ ಮಳೆಯ ಹಾಡು
ಬಿತ್ತಿದ ಮುತ್ತು ತುತ್ತಾಗುವ ಮೊದಲೇ
ಕೋಡಿ ಬಿದ್ದ ಕಣ್ಣೀರ ಪಾಡು!

ಬೆಳ್ಳನೆಯ ಹತ್ತಿ ಕೆಂಪನೆಯ ಖಾರಕ್ಕೆ
ಮರುಳಾದ ಮರುಳನ ಹಾಡು
ಕಣ್ಣಿಗೆ ಮಣ್ಣೆರಚುವ ಬಿಳಿಯಂಗಿಯವರ
ಬರಿ ಮಾತಿಗೆ ಬೆರಗಾದ ಪಾಡು!

ಹಸಿರು ಬೆಳೆದು ಉಸಿರಾದರೂ ದೇಶಕೆ
ಹೆಸರಾಗದ ಹಾಡು
ಸಾಲದಿ ಹುಟ್ಟಿ ಸಾಲದಿ ಸಾಯುವ
ಮಣ್ಣಮಗನ ಪಾಡು!

– ಎ.ಹರಿನಾಥಬಾಬು, ಸಿರುಗುಪ್ಪ



■ ನಕುಲ

ಅಂದಚೆಂದವಿಲ್ಲದ 'ಅರಮನೆ'

ಸಣ್ಣಪುಟ್ಟ ಹಾಸ್ಯಪಾತ್ರಗಳಲ್ಲಿ ನಟಿಸುತ್ತಿದ್ದ ನಟ ನಾಗಶೇಖರ್ 'ಅರಮನೆ' ಚಿತ್ರದ ಮೂಲಕ ನಿರ್ದೇಶಕರಾಗಿದ್ದಾರೆ. ಹೊಸ ಯುವ ಪ್ರತಿಭೆಗಳು ಕನ್ನಡ ಚಿತ್ರರಂಗದಲ್ಲಿ ಮುನ್ನುಗ್ಗುತ್ತಿರುವ ಸಮಯಧಲ್ಲಿ ತಮ್ಮದು ಒಂದು ಕೈ ನೋಡುವ ಎಂಬ ನಾಗಶೇಖರ್ ಆಸೆಗೆ ಅವರ ಗೆಳೆಯ, ಈಗಿನ 'ಕಲೆಕ್ಷನ್' ಸ್ಟಾರ್ ಗಣೇಶ್ ಕೈಜೋಡಿಸಿದ್ದಾರೆ. ಇವರನ್ನು ನಂಬಿ ಕೆ.ಮಂಜು ಧಾರಳವಾಗಿಯೇ ಖರ್ಚು ಮಾಡಿ 'ಅರಮನೆ' ನಿರ್ಮಿಸಿದ್ದಾರೆ.

ಯಾವುದೇ ಒಂದು ಸಿನಿಮಾಕ್ಕೆ ಒಂದು ಕಥೆ, ಅದಕ್ಕೆ ಆದಿ-ಅಂತ್ಯಗಳಿರಬೇಕಲ್ಲ. ಆದರೆ ನಾಗಶೇಖರ್‌ರವರ ಕಥೆ ತರ್ಕಕ್ಕೆ ನಿಲುಕದ್ದು! ತೀರಾ ಬಾಲಿಶವಾದ, ಜಾಳುಜಾಳಾದ ನಿರೂಪಣೆಯಿಂದ ತೀವ್ರ ನಿರಾಸೆ ಮೂಡಿಸಿದ್ದಾರೆ ಅವರು. ಚಿತ್ರದಲ್ಲಿ ಸಹ್ಯವಾದುದು ಏನಾದರೂ ಇದ್ದಲ್ಲಿ ಅದು ಗಣೇಶ್ ಮತ್ತು ಅನಂತನಾಗ್ ಅವರ ಅಭಿನಯವಷ್ಟೇ!

ಗಣೇಶ್ ವೃತ್ತಿಯಲ್ಲಿ ಫೋಟೋಗ್ರಾಫ್, ತಂದೆ ತಾಯಿಯಿಲ್ಲದ ಅನಾಥ. ಶ್ರೀಮಂತ ವ್ಯಕ್ತಿಯೊಬ್ಬನ ಫೋಟೋ ತೆಗೆಯಲು ಹೋಗುತ್ತಾನೆ. ಆತ (ಅನಂತನಾಗ್) ಕುಡಿತಕ್ಕೆ ದಾಸನಾಗಿ ಹೀನಾಯ ಸ್ಥಿತಿಯಲ್ಲಿರುತ್ತಾನೆ. ಕಾರಣ ಅವನ ಮಕ್ಕಳು ಸುಮಾರು 20 ವರ್ಷಗಳ ಹಿಂದೆಯೇ ಆತನನ್ನು ತೊರೆದಿರುತ್ತಾರೆ. ಆ ದುಃಖದಿಂದಾಗಿ ಈ ಸ್ಥಿತಿ ತಲುಪಿರುತ್ತಾನೆ. ನಾಯಕ ಆ ಕುಟುಂಬವನ್ನು ಒಂದು ಮಾಡಿ ಗ್ರೂಫ್ ಫೋಟೋ ತೆಗೆದುಕೊಡುವುದಾಗಿ ಆತನಿಗೆ ಮಾತು ಕೊಡುತ್ತಾನೆ. ಈ ಮಧ್ಯೆ ಅವರಿಬ್ಬರ ಆತ್ಮೀಯತೆ ಹೆಚ್ಚುತ್ತದೆ. ಎಷ್ಟೆಂದರೆ ಒಟ್ಟಿಗೆ 'ಗುಂಡು' ಹಾಕುವಷ್ಟು.

ಈ ಮಧ್ಯೆ ಶ್ರೀಮಂತನ ಮಗಳು, ಮೊಮ್ಮಕ್ಕಳನ್ನು ಭೇಟಿಯಾಗುವ ನಾಯಕ ಅವರನ್ನು ಒಟ್ಟುಗೂಡಿಸಲು ಶ್ರಮಿಸುತ್ತಾರೆ. ಆ ಸಂದರ್ಭದಲ್ಲೇ ಮೊಧಲ ಮೊಮ್ಮಗಳಾದ ಗೀತಾ ಎನ್ನುವವಳನ್ನು ಪ್ರೇಮಿಸುತ್ತಾನೆ. ಆದರೆ ಆಕೆ ಬೇರೊಬ್ಬರಲ್ಲಿ ಅನುರಕ್ತಳಾಗಿರುತ್ತಾಳೆ. ಅವಳು ಪ್ರೇಮಿಸಿದವನೊಂದಿಗೆ ಮದುವೆ ಮಾಡಿಸುವುದಾಗಿ ಅವಳಿಗೂ ಮಾತು ಕೊಡುತ್ತಾನೆ. ತನ್ನ ದುಃಖ ನುಂಗಿಕೊಂಡು ಆ ಸಂಸಾರವನ್ನು ಒಂದು ಮಾಡುತ್ತಾನೆ. ಇದು 'ಅರಮನೆ' ಚಿತ್ರದ ಕಥೆ.

20 ವರ್ಷವಾದರೂ ತನ್ನ ತಂದೆ ಹೇಗಿದ್ದಾರೆಂದು ತಿಳಿದುಕೊಳ್ಳದ ಮಗಳು ಇರುತ್ತಾಳೆಂಬುದು ಬಾಲಿಶ ಕಲ್ಪನೆ. ಅದೂ ಆಕೆಯ ಗಂಡ ಒಬ್ಬ ಪೊಲೀಸ್ ಅಧಿಕಾರಿಯಾಗಿದ್ದು! ಉಳಿದ ಮಕ್ಕಳು ವಿದೇಶ ಹಾರಿರುತ್ತಾರೆ ತಂದೆಯ ಬಗ್ಗೆ ಎಳ್ಳಷ್ಟೂ ಕಾಳಜಿಯಿಲ್ಲದೆ. ಇದೂ ವಾಸ್ತವತೆಯನ್ನು ಮೀರಿದ್ದು! ಇನ್ನೂ ನಾಯಕನೋ



ಅವರ ಸಂಸಾರವನ್ನು ಒಂದು ಮಾಡಲು ಹೋದ ಸಾಮಾನ್ಯ ಫೋಟೋಗ್ರಾಫರ್. ಆದರೆ ಬಯಸಿದ್ದು ಅಗರ್ಭ ಶ್ರೀಮಂತನ ಮೊಮ್ಮಗಳನ್ನು. ಅದೂ ಆಕೆಯ ಕಡೆಯಿಂದ ಯಾವ ಪ್ರೇರಣೆಯೂ ಇಲ್ಲದೆ, ಎರಡು ಮೂರು ಬಾರಿ ಭೇಟಿಯಾದ ಮಾತ್ರಕ್ಕೆ ಅವಳನ್ನು ಪ್ರೀತಿಸುವುದು ತರ್ಕಕ್ಕೆ ನಿಲುಕದ್ದು. ಜೊತೆಗೆ 'ಬೇಜಾರಾದಾಗ ಒಂದು ಪೆಗ್' ಎಂಬ ಚಿತ್ರದ ನೀತಿ ನಿಜಕ್ಕೂ ದುಷ್ಪರಿಣಾಮ ಬೀರುವಂತದ್ದು. ಕುಡಿತವನ್ನು ಪ್ರಚೋದಿಸುವ ಹಲವಾರು ಸನ್ನಿವೇಶಗಳು ನಿರ್ದೇಶಕರು ಸಾಮಾಜಿಕ ಕಳಕಳಿಯಿಂದ ವಿಮುಖರಾಗಿರುವುದನ್ನು ತೋರಿಸುತ್ತದೆ. ಯುವ ಜನತೆಯ ಮಧ್ಯೆ ಸಾಕಷ್ಟು ಪ್ರಭಾವಿಯಾಗಿರುವ ನಾಯಕ ಗಣೇಶ್ ಕೂಡಾ ಇಂತಹದ್ದರ ಬಗ್ಗೆ ಕಾಳಜಿ ವಹಿಸುವುದು ಅವಶ್ಯಕ.

ಗಣೇಶ್ ಭಾವನಾತ್ಮಕ ಸನ್ನಿವೇಶಗಳಲ್ಲಿ ಮನಸೆಳೆದರೂ, ಕಥೆಯಲ್ಲಿಯೇ ದಮ್ ಇಲ್ಲದಿರುವುದರಿಂದ ಇದು ಅವರಿಗೆ ಹಿಂಬಡ್ತಿ ನೀಡಬಹುದಾದ ಚಿತ್ರ. ಅವರ ಹಿಂದಿನ ಎಲ್ಲಾ ಚಿತ್ರಗಳಲ್ಲೂ ಇದ್ದ ಜೋಶ್ ಈ ಚಿತ್ರದಲ್ಲಿಲ್ಲ.

ಚಿತ್ರದಲ್ಲಿ ಒಂದೆರೆಡು ಹಾಡು ಮಧುರವಾಗಿವೆ. ಆದರೂ ಗುರುಕಿರಣ್ ಅವರು ತಾವೇ ಹಾಡುವ ಖಯಾಲಿಯನ್ನು ತೊರೆದರೆ ಒಳ್ಳೆಯದೆನಿಸುತ್ತದೆ.

ಕೇವಲ ಗಣೇಶ್ ಹೆಸರಿನಿಂದಲೇ ಉತ್ತಮ ಆರಂಭ ಪಡೆದುಕೊಂಡಿರುವುದು 'ಅರಮನೆ' ನಿರ್ಮಾಪಕ ಕೆ.ಮಂಜುರವರ ಜೇಬು ತುಂಬುತ್ತದೆಯೋ ಇಲ್ಲವೋ ಕಾದು ನೋಡಬೇಕು. ○

ನಾಟಕ

ಭ್ರಷ್ಟ ಅಸಮಾನತೆಯ ವ್ಯವಸ್ಥೆಗೆ ಪರಿಹಾರದ ಹುಡುಕಾಟದಲ್ಲಿ 'ಗಾಂಧಿ ಜಯಂತಿ'

ಬೀರಣ್ಣ ಕಲ್ಮನಿ, ಬಾಚಗೊಂಡನಹಳ್ಳಿ

ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಭಿನ್ನ ಭಿನ್ನ ಚಿಂತನೆಗಳ ಮಧ್ಯೆ ಮೂಡಿಬಂದ ಆದರ್ಶ 'ಗ್ರಾಮ ಸ್ವರಾಜ್ಯ'ದ ಕಲ್ಪನೆಯು ಕಳೆದ ಆರು ದಶಕಗಳ ನಂತರವು ನನಸಾಗದೆ, ಬಹುಸಂಖ್ಯಾತ ಜನತೆಯು ಬದುಕು ಬದಲಾಗದೆ ಇನ್ನೂ ಹೆಚ್ಚು ಅಸಮಾನತೆಯತ್ತ ದಾಪುಗಾಲು ಹಾಕುವಾಗ ಗಾಂಧಿ ಆಕಸ್ಮಾತ್ತಾಗಿ ಬಂದು ದೇಶದ ಸ್ಥಿತಿ ನೋಡಿದರೆ ಹೇಗಿರುತ್ತದೆ ಎಂಬುದೇ ಈ ನಾಟಕ.

ನಾಟಕದ ಕತೆ

ಅಪರಾಧಗಳು, ಪಾಪ ಕಾರ್ಯಗಳಿಗೆ ಶಿಕ್ಷೆ ವಿಧಿಸುವ ಯಮಪುರದಲ್ಲಿ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಉಳಿಸಿಕೊಳ್ಳುವ ಯಾವುದೇ ಅರ್ಹತೆ ಇರದ ದೇಶಕ್ಕೆ ಗಾಂಧೀಜಿಯ ನಾಯಕತ್ವದಲ್ಲಿ ಸ್ವಾತಂತ್ರ್ಯ ತಂದುಕೊಟ್ಟಿದ್ದೇ ಈ ದೇಶದ ಇಂದಿನ ಎಲ್ಲಾ ಸ್ಥಿತಿಗೆ ಕಾರಣವೆಂದು, ಈ ಅಪರಾಧಕ್ಕೆ ಶಿಕ್ಷೆಯಾಗಿ ಒಂದು ತಿಂಗಳ ಕಾಲ ಈ ದೇಶದಲ್ಲಿ ಇದ್ದು ಬರಲು ಗಾಂಧೀಜಿಯನ್ನು ಭಾರತಕ್ಕೆ ವಾಪಸ್ ಕಳಿಸಲಾಗುತ್ತದೆ.

ಗಾಂಧೀಜಿ ಇಲ್ಲಿ ಬಂದಾಗ ವ್ಯವಸ್ಥೆಯ ಗರ್ಭದಲ್ಲಿ ಹುದುಗಿರುವ ಭ್ರಷ್ಟತೆಯನ್ನು ನೋಡಬೇಕಾಗುತ್ತದೆ. ಗಾಂಧೀ ಜಯಂತಿ ಹೆಸರಿನಲ್ಲಿ ಮೂರ್ತಿ ಸ್ಥಾಪನೆಯ ಹಣದಲ್ಲಿ ಹಾಲಿ ರಾಜಕೀಯ ನಾಯಕರ ಪುತ್ಥಳಿ ಸ್ಥಾಪನೆ, ಅಧಿಕಾರಿಗಳ ಲಂಚಾವತಾರ, ಮಹಾತ್ಮನ ಬಗ್ಗೆ ಕಿಂಚಿತ್ತು ತಿಳುವಳಿಕೆ ಇಲ್ಲದ, ತೋರಿಕೆಗೆ ಜಯಂತಿಯನ್ನು ನೆನಪಿಸಿಕೊಳ್ಳುವ ನಾಯಕರ ಭಾಷಣಗಳು ಒಂದು ಕಡೆಯಾದರೆ ಚುನಾವಣೆಯ



ಗಾಂಧಿ ಪಾತ್ರದಲ್ಲಿ ಕೆಎಸ್‌ಡಿಎಲ್ ಚಂದ್ರು ಹಾಗೂ ರಾಜಾರಾಮ ಪಾತ್ರದಲ್ಲಿ ನರೇಂದ್ರಬಾಬು

ಕಾಲದಲ್ಲಿ ನಡೆಸುವ ಅಕ್ರಮ ಮತ ಚಲಾವಣೆ, ಕೊಲೆ ಬೆದರಿಕೆಗಳ ಸರಮಾಲೆ, ಪರಸ್ಪರ ಪಕ್ಷ ಹಾಗೂ ವ್ಯಕ್ತಿಗಳ ನಿಂದನೆಗಳಲ್ಲಿ ಜನ ಪರ ಕಾರ್ಯದ ಮಾತೇ ಇಲ್ಲದೆ ಚುನಾಯಿತ ನಾಯಕರು ವಿಧಾನಸಭೆಯಲ್ಲಿ ಸದಾ ಅನಗತ್ಯ ಚರ್ಚೆಗಳಲ್ಲಿ ಕಾಲ ಕಳೆಯುವುದು, ಶಾಸನ ಸಭೆಯ ದುರುಪಯೋಗ, ಅಧಿಕಾರ, ಮಂತ್ರಿ ಪದವಿ, ನಿಗಮ ಹುದ್ದೆಗಳ ಬಗ್ಗೆ ರಾದ್ದಾಂತಗಳು ಒಂದೆಡೆಯಾದರೆ ಇನ್ನೊಂದು ಕಡೆ ಬರ, ಭೂಕಂಪದ ಪರಿಹಾರ ನಿಧಿ ಸಂಗ್ರಹ ಹೆಸರಿನಲ್ಲಿನ ಹಣ ಮಾಡುವ ರಾಜಕೀಯ ಲೆಕ್ಕಾಚಾರಗಳು, ಪ್ರಾಮಾಣಿಕ ವ್ಯಕ್ತಿಯನ್ನು ತಮ್ಮ ಪಕ್ಷಕ್ಕೆ ಸೆಳೆದುಕೊಳ್ಳುವ ನಾಟಕಗಳು, ಹಿಂಸೆ, ಕೋಮುವಾದ. ಭ್ರಷ್ಟತೆಯನ್ನು ಕಂಡ ಗಾಂಧಿ ಎಲ್ಲಾ ಪಕ್ಷದ ನಾಯಕರಿಗೆ ತಮ್ಮ ಬಳಿ ಅಕ್ರಮವಾಗಿ ಸಂಪಾದಿಸಿದ ಭೂಮಿ, ಹಣವನ್ನು ಸಾಮಾನ್ಯರಿಗೆ ಹಾಗೂ ಸರ್ಕಾರಕ್ಕೆ ಹಿಂದಿರುಗಿಸಬೇಕೆಂದು ಎಚ್ಚರಿಕೆ ನೋಟಿಸ್ ನೀಡುತ್ತಾರೆ. ಮುಂದೆ ನಿಮ್ಮ ವಿರುದ್ಧ ವ್ಯಾಪಕವಾದ ಜನ ಚಳುವಳಿಯ ಮೂಲಕ ವಿಧಾನಸೌಧ ಮುತ್ತಿಗೆ ಹಾಕಬೇಕಾಗುತ್ತದೆ ಎಂದು ಎಚ್ಚರಿಸಿ ಜನರ ಮಧ್ಯೆ ವ್ಯಾಪಕವಾದ ಬೆಂಬಲ ಪಡೆಯುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ವಿವಿಧ ಪಕ್ಷದ ನಾಯಕರು ಪಕ್ಷಬೇಧ ಮರೆತು ಗಾಂಧೀಜಿಯನ್ನು 'ಮುಗಿಸಲು' ಸಂಚು ರೂಪಿಸುತ್ತಾರೆ. ಭೂಕಂಪ ಪರಿಹಾರ ನಿಧಿ ಸಂಗ್ರಹದಲ್ಲಿ ಹಣ ಮಾಡಲು ರೂಪಿಸಿದ್ದ ಎಂ.ಎಲ್.ಎ.ನನ್ನು ಕೊಂದು, ಗಾಂಧೀಜಿಯು ನಿಧಿಸಂಗ್ರಹ ಹೆಸರಿನಲ್ಲಿ ಭ್ರಷ್ಟಾಚಾರ ಮಾಡಿದ್ದಾರೆ. ಎಂ.ಎಲ್.ಎ.ಯು ತಡೆಯಲು ಮುಂದಾದರಿಂದ ಈ ಕೊಲೆಯನ್ನು ಗಾಂಧಿಯೇ ಮಾಡಿದರೆಂದು ಅಧಿಕಾರಿಗಳು ನ್ಯಾಯಾಂಗದಲ್ಲಿ ನಿರೂಪಿಸಿ ನೇಣುಗಂಬಕ್ಕೇರಿಸುತ್ತಾರೆ. ಇಲ್ಲಿ ಗಾಂಧೀಜಿಯವರಿಗೆ ತಮ್ಮ ಅಹಿಂಸಾವಾದದಿಂದ ಈ ಸಮಾಜವನ್ನು ಬದಲಾಯಿಸಲು ಸಾಧ್ಯವಿಲ್ಲವೆಂದು ಮನವರಿಕೆಯಾಗುತ್ತದೆ. ಅವರು ಬಾಂಬು, ಬಂದೂಕಿನಿಂದ ವ್ಯವಸ್ಥೆಯನ್ನು ನಾಶ ಮಾಡುತ್ತಾನೆನ್ನುತ್ತಾರೆ.



ಅಗಲಿದ ರಂಗ ಚೇತನ ಮೈಕೊ ಚಂದ್ರು

ಕೃತಿ-ಕೃತಿಕಾರ

ತೆಲುಗು ಮೂಲದ ಈ ಕೃತಿಯು ಲೇಖಕರಾದ ಡಿ.ವಿಜಯ ಭಾಸ್ಕರ್‌ರವರದ್ದು. ಇದನ್ನು ಕನ್ನಡಕ್ಕೆ ಡಾ.ಎಸ್.ಲಕ್ಷ್ಮಿದೇವಿಯವರು ಅನುವಾದಿಸಿದ್ದಾರೆ. ಇಲ್ಲಿ ಲೇಖಕರು ರಾಜಕೀಯ ಹಿಂಸೆ, ಕೋಮುವಾದ, ಭ್ರಷ್ಟಾಚಾರದ ವಿರುದ್ಧ ಕಿಡಿಕಾರಿದ್ದಾರೆ. ಆದರೆ ಸಮಸ್ಯೆ ಪರಿಹಾರಕ್ಕೆ ಬಾಂಬು ಬಂದೂಕು ಎನ್ನುವ ಎಡ ದುಸ್ಸಾಹಸವಾದಿ ದಾರಿಯನ್ನು ಪ್ರತಿಪಾದಿಸುತ್ತಿರುವಂತೆ ಕಾಣುತ್ತದೆ.

ನಾಟಕದಲ್ಲಿ ಮಧ್ಯೆ ಮಧ್ಯೆ ಇಂಗ್ಲೀಷ್ ವಾಕ್ಯಗಳ ಬಳಕೆ ಸ್ವಲ್ಪ ಕಿರಿಕಿರಿಯಾದರು, ಹಿನ್ನೆಲೆ ಸಂಗೀತವಾಗಿ 'ಒಂದೇ ಮಾತರಂ'ನ ಟ್ಯೂನ್ ಬಳಕೆ ಮುದ ನೀಡುತ್ತದೆ. ಕೆ.ಎಸ್.ಆರ್.ಟಿ.ಸಿ ನಾಗರಾಜರ ಬೆಳಕು ತುಂಬ ಪರಿಣಾಮಕಾರಿಯಾಗಿತ್ತು. ಕರಿಬಸವಯ್ಯನವರ ಯಮನ ಪಾತ್ರದ ನಟನೆ ಬೇರೆ ಹೇಳಬೇಕೆ. ಆದರೆ ಅವರ ಮೈ ಬಣ್ಣ ನೀಲಿಯಾಗಿದ್ದು ಯಾಕೆಂದು ತಿಳಿಯಲ್ಲಿಲ್ಲ. ಬೆಳ್ಳೂರು ರಾಮಕೃಷ್ಣರೆ ಉತ್ತರಿಸಬೇಕು.

ಕೆ.ಎಸ್.ಡಿ.ಎಲ್. ಚಂದ್ರುರವರು ಗಾಂಧಿ ಪಾತ್ರಧಾರಿಯಾಗಿ ನಡಿಗೆಗೆ, ಮಾತಿಗೆ ಒತ್ತು ಕೊಟ್ಟರೂ ಸಾಕಷ್ಟು

ಪುಟ 15 ಕ್ಕೆ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH